ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ

ಎಂ.ಫಿಲ್. ಪದವಿಯ ನಿಬಂಧ

ಕಿರು ವಚನಕಾರ್ತಿಯರು ಒಂದು ಅಧ್ಯಯನ

ಸಂಶೋಧನ ವಿದ್ಯಾರ್ಥಿ

ನಂದಿನಿ ಎನ್

ಡಾ. ಪಿ.ವಿ. ನಾರಾಯಣ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಬೆಂಗಳೂರು

ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ

ಎಂ.ಫಿಲ್. ಪದವಿಯ ನಿಬಂಧ

ಕಿರು ವಚನಕಾರ್ತಿಯರು ಒಂದು ಅಧ್ಯಯನ

ಸಂಶೋಧನ ವಿದ್ಯಾರ್ಥಿ

ನಂದಿನಿ ಎನ್

ಮಾರ್ಗದರ್ಶಕರು

ಡಾ. ಪಿ.ವಿ. ನಾರಾಯಣ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಬೆಂಗಳೂರು

830

ಅಭ್ಯರ್ಥಿಯ ಪ್ರಮಾಣ ಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೯-೨೦೧೦ನೆಯ ಸಾಲಿನ ಎಂ.ಫಿಲ್ ಪದವಿಗಾಗಿ **"ಕಿರು ವಚನಕಾರ್ತಿಯರು ಒಂದು ಅಧ್ಯಯನ"** ಎಂಬ ಸಂಪ್ರಬಂಧವನ್ನು ಡಾ. ಪಿ.ವಿ. ನಾರಾಯಣ ಅವರ ಮಾರ್ಗದರ್ಶನದಲ್ಲಿ ಬರೆದು ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ನಿಬಂಧ ನನ್ನ ಸ್ವಂತ ಬರವಣಿಗೆಯಾಗಿದ್ದು, ಇದರ ಯಾವುದೇ ಭಾಗವನ್ನು ಇಲ್ಲಿಯವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : 8/9/2010

ಸ್ಥಳ : ಬೆಂಗಳೂರು

ಸಂಶೋಧನಾ ವಿದ್ಯಾರ್ಥಿ

ನಂದಿನಿ ಎನ್

(ನಂದಿನಿ ಎನ್)

ಮಾರ್ಗದರ್ಶನ ಪ್ರಮಾಣ ಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೯-೨೦೧೦ನೆಯ ಸಾಲಿನ ಎಂ.ಫಿಲ್ ಪದವಿಗಾಗಿ **"ಕಿರು ವಚನಕಾರ್ತಿಯರು ಒಂದು ಅಧ್ಯಯನ"** ಎಂಬ ನಿಬಂಧವನ್ನು ನಂದಿನಿ ಎನ್ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ನಿಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು, ಇದರ ಯಾವುದೇ ಭಾಗವನ್ನು ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : ೦೫-೦೯-೧೦

ಸ್ಥಳ : ಬೆಂಗಳೂರು

(ಡಾ. ಪಿ.ವಿ. ನಾರಾಯಣ)

ಮಾರ್ಗದರ್ಶಕರು

ಕಿರು ವಚನಕಾರ್ತಿಯರು ಒಂದು ಅಧ್ಯಯನ

ಪರಿವಿಡಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ಸ್ವರೂಪ

೧.೧ ಪೀಠಿಕೆ :

ಕಿರು ವಚನಕಾರ್ತಿಯರು ಒಂದು ಅಧ್ಯಯನವು ಅಕ್ಕಮಹಾದೇವಿಯಂಥ ಮೇಲ್ವರ್ಗದ ವಚನಕಾರ್ತಿಯರನ್ನು ಹೊರತುಪಡಿಸಿ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಎಲೆಮರೆಕಾಯಿಯಂತಿರುವ ವಚನಕಾರ್ತಿಯರ ಜೀವನ ಶೈಲಿ ಮತ್ತು ವಚನ ಸಾಹಿತ್ಯದಲ್ಲಿ ಅವರಿಗಿದ್ದ ಆಸಕ್ತಿಯ ಒಂದು ಚಿತ್ರಣವನ್ನು ನಾವು ಕಾಣಬಹುದಾಗಿದೆ.

ಕಿರು ವಚನಕಾರ್ತಿಯರು ಎಂಬುದಲ್ಲಿನ "ಕಿರು" ಎಂಬ ಪದವು ಇಂಗ್ಲಿಷಿನ ಮೈನರ್ (Minor) ಎಂಬ ಪದದ ಸಂವಾದಿಯಾಗಿ ಬಳಸಲಾಗಿದೆ.

೧೨ನೆಯ ಶತಮಾನದಲ್ಲಿ ಎಲ್ಲರ ಮನಸ್ಸನ್ನು ಸೆಳೆದ ಸಾಹಿತ್ಯವೆಂದರೆ ವಚನ ಸಾಹಿತ್ಯ. ವೈದಿಕ ಮತವು ಹೆಣ್ಣನ್ನು ಪುರುಷನ ಆಧ್ಯಾತ್ಮಿಕ ಸಾಧನೆಗೆ ಅಡ್ಡಿಯಾದ "ಮಾಯೆ" ಎಂದು ತಿರಸ್ಕರಿಸಿದರೆ, ವಚನಕಾರರು ಸಮಾಜದ ಎಲ್ಲಾ ಕಂದಾಚಾರಗಳನ್ನು ಧಿಕ್ಕರಿಸಿ ಸ್ತ್ರೀಯು ಕೂಡ ಸಾಹಿತ್ಯ ರಚಿಸಲು ಸಮರ್ಥಳು ಎಂಬುದನ್ನು ಸಾಧ್ಯವಾಗಿಸಿದರು. ಆಡುಮಾತಿನಲ್ಲಿ ತಮ್ಮ ಕರ್ತವ್ಯ ಪ್ರಜ್ಞೆಯನ್ನು ಮರೆದ ಶಿವಶರಣೆಯರ ವ್ಯಕ್ತಿತ್ವ ಅತ್ಯಮೂಲ್ಯವಾದುದು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮೊದಲಿಗೆ ಮಹಿಳಾ ಸಾಹಿತ್ಯಕ್ಕೆ ಬುನಾದಿ ಹಾಕಿದವರು ವಚನಕಾರ್ತಿಯರು. ಕಲ್ಯಾಣದ ಕ್ರಾಂತಿಯ ಸಂದರ್ಭದಲ್ಲಿ ಬೆಳಕಿಗೆ ಬಂದ ನೂರಾರು ವಚನಕಾರ್ತಿಯರು ಇದ್ದರೂ ಸಹ ಸದ್ಯಕ್ಕೆ ಲಭ್ಯವಿರುವುದು ೩೩ ವಚನಕಾರ್ತಿಯರು ಮಾತ್ರ. ಅಕ್ಕಮಹಾದೇವಿಯನ್ನು ಹೊರತುಪಡಿಸಿದರೆ, ವಿವಿಧ ಸ್ತರಗಳಿಂದ ಬಂದಂತಹ ವಚನಕಾರ್ತಿಯರನ್ನು ಗಮನಿಸಬಹುದು.

ಮೇಲ್ವರ್ಗದಿಂದ ಬಂದ ವಚನಕಾರ್ತಿಯರಾದ ಅಕ್ಕಮಹಾದೇವಿಯಂಥವರು ಆರಾಧ್ಯದೈವದಿಂದ ಗುರುತಿಸಿಕೊಂಡರೆ ಕೆಳವರ್ಗದವರಾದ ಕದಿರೆ ರೆಮ್ಮವ್ವೆ, ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ, ಗೊಗ್ಗವ್ವೆ, ಸೂಳೆ ಸಂಕವ್ವ ಇನ್ನೂ ಮುಂತಾದವರು ಇಷ್ಟದೈವಕ್ಕೆ ಬದ್ಧರಾಗಿ ಲಿಂಗ ಮತ್ತು ವೃತ್ತಿಯ ಜತೆಗೆ ತಮ್ಮ ವ್ಯಕ್ತಿತ್ವವನ್ನು ಗುರುತಿಸಿಕೊಂಡಿದ್ದಾರೆ. ಈ ರೀತಿಯಾಗಿ ಗುರುತಿಸಿಕೊಳ್ಳುವಿಕೆಯೇ ಆತ್ಮ ಘನತೆಯ ವಿಚಾರವಾಗಿತ್ತು. ಶತ-ಶತಮಾನಗಳಿಂದ ಸಾಹಿತ್ಯ ರಚನೆ ಕೇವಲ ಪುರುಷರ ಹಕ್ಕು ಎಂಬ ಪರಿಕಲ್ಪನೆಯನ್ನು ಪ್ರಶ್ನಿಸಿದರು.

ಜೈನ – ಬೌದ್ಧರ ಆಚರಣೆಯನ್ನು ತಮ್ಮ ವಚನಗಳ ಮೂಲಕ ಖಂಡಿಸಿ ವೈದಿಕ ಮತವನ್ನು ವಚನಕಾರರು ವಿರೋಧಿಸಿದರು ಹಾಗೂ ಪ್ರಮುಖ ವಚನಕಾರನಾದ ಬಸವಣ್ಣ ಯಜ್ಞವನ್ನು ಹಿಂಸೆಯ ಪ್ರತಿರೂಪವೆಂದು ಪ್ರತಿಪಾದಿಸಿದ್ದನ್ನು ಶಿವಶರಣ – ಶರಣೆಯರ ವಚನಗಳ ಮೂಲಕ ನವ ಸಮಾಜದ ನಿರ್ಮಾಣಕ್ಕೆ ತಮ್ಮ ಸಮಾನತೆ ಎಂಬ ಆಶಯದ ಭದ್ರವಾದ ಬುನಾದಿಯನ್ನು ಹಾಕಿದವರು ವಚನಕಾರ್ತಿಯರು.

ಮೊಟ್ಟಮೊದಲ ಬಾರಿಗೆ ವಚನಕಾರರು ಲಿಂಗ ತಾರತಮ್ಯವನ್ನು ಕುರಿತು ತಮ್ಮ ವಚನಗಳಲ್ಲಿ ಗಂಡು-ಹೆಣ್ಣುಗಳಲ್ಲಿನ ವ್ಯತ್ಯಾಸ ಕೇವಲ ಜೈವಿಕವಾದದ್ದೆಂಬುದನ್ನು ಸ್ಪಷ್ಟಪಡಿಸಿರುವುದನ್ನು ಕಾಣಬಹುದು. ಬಹುಮುಖ್ಯವಾಗಿ ಸ್ತ್ರೀ ತನ್ನ ತನವನ್ನು ಅರ್ಥೈಸಿಕೊಳ್ಳಲು ಮತ್ತು ಮುಕ್ತವಾಗಿ ಮಾತನಾಡುವಂತಹ ವೇದಿಕೆಯಾದ ಶೂನ್ಯ ಸಂಪಾದನಕಾರರು ಆಕಾರವನ್ನು ಕೊಟ್ಟಂತ ಅನುಭವ ಮಂಟಪದಲ್ಲಿ, ಅಲ್ಲಮನಂತಹ ವಚನಕಾರರ ಜೊತೆಗೆ ಮಾತನಾಡಬಲ್ಲ ಪ್ರಶ್ನೆಯನ್ನು ಹಾಕುವಂತಹ ವಚನಕಾರ್ತಿಯರು ಇದ್ದದ್ದು. ಆ ಸಂದರ್ಭದಲ್ಲಿ ಯಾವುದೇ ತಾರತಮ್ಯವಿಲ್ಲದೆ ಎಲ್ಲರೂ ಸಮಾನರು ಎಂಬುದನ್ನು ತಿಳಿಯಬಹುದಾಗಿತ್ತು. ಅಲ್ಲದೆ, ಈ ರೀತಿ ತಮ್ಮನ್ನು ತಾವು ತೊಡಗಿಸಿಕೊಂಡು ಅಧ್ಯಾತ್ಮಿಕ ಅನುಭವದ ಕಡೆಗೆ ತಮ್ಮ ಚಿಂತನೆಯನ್ನು ನಡೆಸಿದರು.

೧೨ನೆಯ ಶತಮಾನದಲ್ಲಿನ ಕಾಲದ ಇತಿ-ಮಿತಿಯನ್ನು ಮೀರುವುದು ವಚನಕಾರ್ತಿಯರ ಆತ್ಮಸ್ಥೈರ್ಯದ ಜೊತೆಗೆ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

೧.೨ ಅಧ್ಯಯನದ ಉದ್ದೇಶ

ಜಗತ್ತಿನ ಇತಿಹಾಸದಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪಡೆದುಕೊಂಡವರಲ್ಲಿ ವಚನಕಾರ್ತಿಯರೇ ಮೊಟ್ಟಮೊದಲು. ಆ ಮುಖೇನ ತಮ್ಮ ಅನುಭವಗಳನ್ನು ಹೇಳಿಕೊಳ್ಳುತ್ತಾ ಸಾಮಾಜಿಕ ವ್ಯವಸ್ಥೆಯ ನೀತಿ ನಿಯಮಗಳನ್ನು ಪ್ರಶ್ನಿಸುತ್ತಾ, ಆಚಾರ ವಿಚಾರದ ಶುದ್ಧತೆಯಿಂದ ಧಾರ್ಮಿಕ ನೆಲೆಯಲ್ಲಿ ಬದುಕುತ್ತ, ಮತ್ತೊಬ್ಬರಿಗೆ ಬದುಕಲು ಕಲಿಸುವಂತಹ ವಚನಗಳನ್ನು ರಚಿಸುವಂತಹ ವಿಚಾರವಂತಿಕೆ ವಚನಕಾರ್ತಿಯರಲ್ಲಿ ಇದ್ದಿತ್ತು. ಅನೈತಿಕ ನಡವಳಿಕೆಗಳನ್ನು ಪ್ರತಿಭಟಿಸುವ ರೀತಿ. ಆತ್ಮದಲ್ಲೇ ಪರಮಾತ್ಮನನ್ನು ಕಾಣುವ, ಅರಿವೇ ಗುರು ಎಂದು ನಂಬಿದ, ಇಹದಲ್ಲೇ ಪರವನ್ನು ಕಾಣುವ ಭಕ್ತಿ, ಜ್ಞಾನ, ವೈರಾಗ್ಯದ ಮೂಲಕ ಅಧ್ಯಾತ್ಮವನ್ನು ಸಾಧಿಸಿದ, ಸ್ವಾಭಿಮಾನದಿಂದ ಬದುಕು ನಡೆಸಿದ ವಚನಕಾರ್ತಿಯರ ವಿಚಾರ ಪರವಾದ ಹೋರಾಟವು ಮೆಚ್ಚುವಂತಹದ್ದಾಗಿದೆ. ಶಿವಶರಣೆಯರ ಪ್ರತಿಭಟನೆಯಲ್ಲಿ ಮಹತ್ತ್ವಾದದ್ದು. ಅವರ ಆಚರಣೆ ಏಕೆಂದರೆ ಅವರ ಪ್ರತಿಭಟನೆ ಕೇವಲ ನುಡಿಯಲ್ಲಿರದೆ ನಡೆಯಲ್ಲಿಯೂ ಜೀವಂತಗೊಂಡಿದೆ. ಜಾತಿಯ ಅಸಮಾನತೆ, ಲಿಂಗ ತಾರತಮ್ಯದ ವಿರುದ್ಧ ಪ್ರತಿಭಟಿಸಿದ ಶಿವಶರಣೆಯರು ಭಕ್ತಿಯ ಹೆಸರಿನಲ್ಲಿ ನಡೆಯುವ ಶೋಷಣೆಯ ವಿರುದ್ಧ, ಧರ್ಮದ ನೆಪದಲ್ಲಿ ನಡೆಯುವ ಹೋಮ – ಯಜ್ಞಗಳ ಬಗ್ಗೆ ಪ್ರತಿರೋಧಿಸುವ ವಚನಕಾರ್ತಿಯರಾದ ಮೂವತ್ತು ಮೂರು ಜನ ವಚನಕಾರ್ತಿಯರು ಹಾದರ ಕಾಯಕದ ಮಾರಯ್ಯಗಳ ಹೆಂಡತಿ ಗಂಗಮ್ಮ "ಯಾವ ಕಾಯಕ ಮಾಡಿದರೂ ಒಂದೇ ಎನ್ನುವ ಈಕೆ ಹಾದರದ ವೃತ್ತಿಯಲ್ಲಿ ಕೂಡ ಕಾಕಪಿಕದಂತೆ ಕೂಡಿದರೆ ನಾಯಕನರಕ ತಪ್ಪಿದೆನ್ನುತ್ತಾಳೆ."[೧] ಅತ್ಯಂತ ಕೆಳವರ್ಗದಿಂದ ಬಂದ ಈ ವಚನಕಾರ್ತಿಯ ವಚನದಲ್ಲಿ ವ್ಯವಸ್ಥೆಯ ಬಗ್ಗೆ ಪ್ರತಿಭಟನೆ, ರೊಚ್ಚು, ಛಲ, ಸ್ವಾಭಿಮಾನಗಳು ತುಂಬಿ ತುಳುಕುತ್ತಿವೆ.

ಎನ್ನ ಕರಣಂಗಳ ಲಿಂಗದಲ್ಲಿ ಕಟ್ಟುವೆ

ಗುರುಲಿಂಗ ಜಂಗಮದ ಕಾಲ ಕಟ್ಟುವೆ

ಎಂಬುದಾಗಿ ಕಾಲಕಣ್ಣಿಯ ಕಾಮಮ್ಮನ ವಚನದಲ್ಲಿನ ಅಂಶ ಗಮನಾರ್ಹ. "ಹದತಪ್ಪಿ ಕಟ್ಟಲು ನುಚ್ಚಿಲ್ಲದೆ ಅಕ್ಕಿಯಿಲ್ಲಿ ವ್ರತಹೀನನ ನೆರೆಯೆ ನರಕವಲ್ಲದೆ ಮುಕ್ತಿಯಿಲ್ಲ"[೨] ಎನ್ನುತ್ತಾಳೆ ಕೊಟ್ಟಣದ ಸೋಮಮ್ಮ ತಮ್ಮ ವಚನಗಳಲ್ಲಿ. ಲಿಂಗ, ಜಾತಿ, ವರ್ಗಗಳಿಗೆ ಅಂದಿನ ಕಾಲಕ್ಕಿದ್ದ ಅಳುಕು, ಸಂಕೋಚ, ನಾಚಿಕೆಗಳನ್ನು ಕಿತ್ತೊಗೆದು ಸ್ವಾಭಿಮಾನವನ್ನು ಬೆಳೆಸಿಕೊಂಡು ದಿಟ್ಟವಾಗಿ ಬೆಳೆದು

ನಿಂತ ವಚನಕಾರ್ತಿಯರ ಧೈರ್ಯ ಮೆಚ್ಚುವಂತಹದ್ದು. ಇಂತಹ ವಚನಕಾರ್ತಿಯರ ಮೌಲ್ಯಯುತವಾದ ವಚನಗಳನ್ನು ಅಧ್ಯಯನ ಮಾಡುವ ಉದ್ದೇಶವಾಗಿದೆ.

೧.೩ ಸ್ವರೂಪ

ವಚನಕಾರ್ತಿಯರು ಸಹ ಸರಳ ಮತ್ತು ಸುಲಲಿತವಾದ ಭಾಷೆಯ ಮೂಲಕ ವಚನಗಳನ್ನು ಬರೆದಿದ್ದಾರೆ. ಇಂತಹ ವಚನಕಾರ್ತಿಯರ ಅಧ್ಯಯನದ ಸ್ವರೂಪವನ್ನು ಈ ಕೆಳಗಿನಂತೆ ವಿಭಾಗಿಸಿಕೊಳ್ಳಲಾಗಿದೆ.

ಅಧ್ಯಾಯ – ೨ ವಚನ ಚಳುವಳಿಯ ಆಶಯ

ಅಧ್ಯಾಯ – ೩. ವಚನಕಾರ್ತಿಯರ ಹಿನ್ನೆಲೆ

ಅಧ್ಯಾಯ – ೪ ವಚನ ಚಳವಳಿಯಲ್ಲಿ ಸ್ತ್ರೀಯರು ಗಳಿಸಿಕೊಂಡ ಆತ್ಮಸ್ಥೈರ್ಯ

ಅಧ್ಯಾಯ – ೫ ವಚನಕಾರ್ತಿಯರ ವಿಚಾರವಂತಿಕೆ

ಅಧ್ಯಾಯ – ೬ ಕಿರು ವಚನಕಾರ್ತಿಯರ ವಚನಗಳ ಸಾಹಿತ್ಯಕ ಮೌಲ್ಯ

೧.೪ ವ್ಯಾಪ್ತಿ

ವಚನಕಾರ್ತಿಯರು ಎಂದ ಕೂಡಲೇ ನೆನಪಾಗುವ ಅಕ್ಕಮಹಾದೇವಿ ಮತ್ತು ನಿಲಾಂಬಿಕೆಯನ್ನು ಹೊರತುಪಡಿಸಿ, ಉಳಿದ ಮೂವತ್ತೊಂದು ಜನ ಎಲೆ ಮರೆಕಾಯಿಯಂತೆಯಿರುವ ಅತ್ಯಂತ ಕೆಳವರ್ಗದ ವಚನಕಾರ್ತಿಯರಾದ ಮೋಳಿಗೆ ಮಹಾದೇವಿಯಮ್ಮ, ಸತ್ಯಕ್ಕ, ಲಿಂಗಮ್ಮ, ಮುಕ್ತಾಯಕ್ಕ, ಆಯ್ದಕ್ಕಿ ಲಕ್ಕಮ್ಮ, ಸೂಳೆ ಸಂಕವ್ವೆ, ದುಗ್ಗಳೆ, ಅಕ್ಕಮ್ಮ ಇವರುಗಳು ಸಮಾಜದ ಅಂಕುಡೊಂಕುಗಳನ್ನು ವಿಮರ್ಶಿಸಿದ್ದಾರೆ. "ಇಹಕ್ಕೊಬ್ಬ ಗಂಡನೆ? ಪರಕ್ಕೊಬ್ಬ ಗಂಡನೆ?" ಎಂಬ ಅಕ್ಕನ ನಿಲುವಿನಲ್ಲಿ ಸಮಾಜದ ನಿಯಮವನ್ನು ಧಿಕ್ಕರಿಸಿದಂಥ ವಿಚಾರವನ್ನು ತಿಳಿಯಬಹುದಾಗಿದೆ.

ಅಡಿ ಟಿಪ್ಪಣಿ

೧. ಶಿವಶರಣೆಯರ ವಚನ ಸಂಪುಟ, ಸಂ. ಡಾ. ವೀರಣ್ಣ ರಾಜೂರ, ಪುಟಸಂಖ್ಯೆ - ೨೬. ಪ್ರಸ್ತಾವನೆ

೨. ಅದೇ ಸಂಪುಟ, ಪುಟಸಂಖ್ಯೆ - ೨೭, ಪ್ರಸ್ತಾವನೆ

ಅಧ್ಯಾಯ - ೨

ವಚನ ಚಳುವಳಿಯ ಆಶಯ

೧೨ನೆಯ ಶತಮಾನದಲ್ಲಿ ಉತ್ತರ ಕರ್ನಾಟಕದಲ್ಲಿ ಶರಣರ ಸಂಘಟನೆಯಿಂದ ನಡೆದ ಈ ಕ್ರಾಂತಿಯ ಗುರಿ ಇಡೀ ಸಮಾಜದಲ್ಲಿ ಬಡವ-ಬಲ್ಲಿದ ಮೇಲ್ಜಾತಿ-ಕೆಳಜಾತಿ ಹಾಗೂ ಗಂಡು-ಹೆಣ್ಣು ಎಂಬ ಯಾವ ಭೇದಭಾವವಿಲ್ಲದೆ ಸಮಾನತೆಯ ವಾತಾವರಣವನ್ನು ನಿರ್ಮಿಸುವುದು. ವಚನ ಚಳುವಳಿಯ ಆಶಯದಲ್ಲೊಂದಾಗಿತ್ತು.

ಮಾನವನ ಹುಟ್ಟನ್ನು ವೃತ್ತಿಯಿಂದ ಮೇಲು ಕೀಳು ಎಂದು ಪರಿಗಣಿಸುವ ದೃಷ್ಟಿಯನ್ನು ಬದಲಾಯಿಸಿದಂತೆ "ಸ್ತ್ರೀ"ಯರ ಬಗೆಗೆ ಇದ್ದ ತಾತ್ಸರ ಭಾವನೆಯನ್ನು ಮನಸ್ಸಿನಿಂದ ತೆಗೆದು ಹಾಕುವ ಮೂಲಕ ಸಮಾಜದಲ್ಲಿ ಸ್ತ್ರೀ ಮತ್ತು ಪುರುಷ ಸಮಾನತೆಯ ಅಭಿಮತವನ್ನು ನೀಡಿದ್ದು ವಚನ ಚಳುವಳಿ.

ಸಮಾನತೆ ಎಂದರೆ ಸ್ತ್ರೀ-ಪುರುಷರ ಪರಸ್ಪರ ತಾನು ಶ್ರೇಷ್ಠ ಎಂಬ ಘರ್ಷಣೆಗೆ ನಿಲುಕದೆ, ಮದುವೆಯಾದವರ ದಾಂಪತ್ಯ, ಪರಸ್ಪರ ಪ್ರೀತಿ ಅನ್ಯೋನ್ಯತೆಗಳಿಂದ ಸಮಾನ ಗೌರವ ತೋರಿಸುತ್ತ ನಡೆದುಕೊಳ್ಳುವುದಾಗಿತ್ತು.

ಶಿವಶರಣೆಯರ ಜ್ಞಾನ, ಉನ್ನತವಾದ ಶಿವಾನುಭವ, ಭಕ್ತಿ, ವಿನಯ, ಸೌಜನ್ಯಾದಿಗಳು ಇಡೀ ಮಾನವ ಕುಲವೇ ಹೆಮ್ಮೆಪಡುವ ವಿಚಾರವಾಗಿದೆ. ಅತ್ಯಂತ ಕೆಳವರ್ಗದ ಮಹಿಳೆ ಈ ಎಲ್ಲಾ ವಿಚಾರಗಳಲ್ಲಿಯೂ ತನ್ನದೇ ಆದ ನಿಲುವನ್ನು ತೋರಿಸಿರುವುದು ವಿಶಿಷ್ಟವಾದದ್ದು.

ಆಚಾರ, ವಿಚಾರ, ವ್ರತ, ಭಕ್ತಿ, ಲಿಂಗ, ಸಮಾಜದಲ್ಲಿನ ಕುಲ, ವರ್ಗ ಹೀಗೆ ಇನ್ನೂ ಮುಂತಾದ ಮಹಾನ್ ವಿಚಾರವನ್ನು ಚಿಂತಿಸಿದ ಶಿವಶರಣೆಯರು ನಮಗೆ ದೊರೆತಿರುವವರು ೩೩ ಜನರು. ಇವರಲ್ಲಿ ೧೧ ಜನ ಶಿವಶರಣೆಯರ ವಚನಗಳು ಒಂದೊಂದು ವಚನ ಮಾತ್ರ ದೊರೆತಿವೆ. ಅದರಲ್ಲಿಯೂ "ಕದಿರ ಕಾಯಕದ ಕಾಳವ್ವೆಯ" ವಚನವಂತೂ ಎರಡೇ ಸಾಲಿನದು.

"ಕದಿರು ಮುರಿಯೆ ಏನೂ ಇಲ್ಲ

ವ್ರತಹೀನನ ನೆರೆಯಲಿಲ್ಲ ಗೊಮ್ಮಟೇಶ್ವರ [೧]

ಹೀಗೆ ಇರುವ ಒಂದೊಂದು ವಚನದಲ್ಲಿಯೆ. ತಮ್ಮ ಮನಸ್ಸಿನ ವಿಚಾರಗಳನ್ನು ಮತ್ತು ಬದುಕಿನ ವೈವಿಧ್ಯತೆಯನ್ನು ತಿಳಿಸುವ ಪ್ರಯತ್ನವನ್ನು ಮಹಿಳಾ ಮಣಿಗಳಾದ ಶಿವಸರಣೆಯರ ವಚನಗಳಲ್ಲಿವೆ. ದೊರೆತಿರುವ ಒಂದೊಂದು ವಚನದಲ್ಲಿಯೇ ಕೆಲವು ವಚನಕಾರ್ತಿಯರು ಅತ್ಯುತ್ಕೃಷ್ಟವಾದ ಸಾಹಿತ್ಯವನ್ನು ರಚಿಸಿರುವುದಕ್ಕೆ ಈ ಮೇಲಿನ ವಚನವೇ ಸಾಕ್ಷಿ. ಈ ವಚನ ಎರಡೇ ಸಾಲಾದರೂ ಅದು ಸ್ಫುರಿಸುವ ಅರ್ಥ ತುಂಬಾ ಮಹತ್ತ್ವದ್ದಾಗಿದೆ. ರಾಟೆಯಿಂದ ನೂಲು ತೆಗೆಯುವ ಕಾಳವ್ವೆಯು ಕದಿರು (ರಾಟ) ಮುರಿದರೆ ಹೇಗೆ ಯಾವುದೇ ಕಾರ್ಯವನ್ನು ನಿರ್ವಹಿಸಲಾಗದೋ ಅದೇ ರೀತಿ ಬದುಕಿನಲ್ಲಿ ವ್ರತವಿಲ್ಲದಿರುವ ವ್ಯಕ್ತಿಯ ಅಕ್ಕಪಕ್ಕದಲ್ಲಿರುವುದು ಕೂಡ ಸಮಂಜಸವಲ್ಲವೆಂದಿದ್ದಾರೆ.

೨.೧ ಜಾತಿ ತಾರತಮ್ಯ ವಿರೋಧ :-

ಮನುಷ್ಯರೆಲ್ಲ ಸಮಾನರು ಜಾತಿ ಭೇದಗಳಿಲ್ಲ ಎಂದು ಬೌದ್ಧ ಧರ್ಮ ಪ್ರಚಾರಕ್ಕೆ ತಂದಂತೆಯ ಭಕ್ತರೆಲ್ಲ ಸಮಾನರು ಅವರಲ್ಲಿ ಜಾತಿ ಭೇದಗಳಿಲ್ಲ ಎಂದು ವಚನಧರ್ಮವೂ ಜಾತಿ ತಾರತಮ್ಯವನ್ನು ವಿರೋಧಿಸಿತು.

"ಕಟ್ಟಿದ ಲಿಂಗವ ಬಿಟ್ಟು ಬೆಟ್ಟದ ಲಿಂಗಕ್ಕೆ ಹೋಗಿ
ಹೊಟ್ಟೆಯಡಿಯಾಗಿ ಬೀಳುವ ಲೊಟ್ಟ ಮೂಳನ ಕಂಡಡೆ
ಎಡ ಪಾದರಕ್ಷೆಯ ತಗೊಂಡು ಲಟಲಟನೆ ಹೊಡಿ
ಎಂದಾತ ನಮ್ಮ ಅಂಬಿಗರ ಚೌಡಯ್ಯ.

ಅಕ್ಕಮ್ಮ :- ಚಾತುರ್ವರ್ಣ ಪದ್ಧತಿ ಊರ ಹೊರಗಿರುವವರನ್ನು ಹೊಲೆಯರು ಶ್ವಪಚರೆಂದು ಕರೆದರೆ, ಈಕೆಯು "ಹೊಲೆಯ" ಪದದ ಅರ್ಥ ಭಿನ್ನವಾಗಿದೆ. ದೇವರ ಹೆಸರಿನಲ್ಲಿ ಜಡೆ ಬಿಟ್ಟು ಅದು ಗಟ್ಟಿಗೊಂಡಾಗ ದೇವತೆ ತಮ್ಮ ಮೈಮೇಲೆ ಬಂದಿದ್ದಾಳೆಂದು ಹೇಳುತ್ತಾ ಸಮಾಜದಲ್ಲಿ ಮತ್ತಷ್ಟು ಮೌಢ್ಯತೆಯನ್ನು ಹರಡುವವರಿಗೆ ಹೊಲೆಯರೆಂದು. ಅಂಧಕಾರ, ಅಜ್ಞಾನಕ್ಕಿಂತ ಕೀಳು ಮತ್ತೊಂದಿಲ್ಲ ವೆಂದು ವಿಚಾರ ಮಾಡುವಳು.

"ಜಾತಿ"ಯನ್ನು ಮೀರಿದ ಭಾವ ವಚನಕಾರರಲ್ಲಿ ಕಾಣಬಹುದಾಗಿದೆ.

"ಅಂಗದಲ್ಲಿ ಅಳವಟ್ಟ ಆಚಾರವೆ ಲಿಂಗ

ಮನದಲ್ಲಿ ಬೆಳಗುತಿರ್ಪ ಅರಿವೆ ಜಂಗಮ

ಈ ಎರಡರ ಸಂಗವೆ ತಾನೆಂದರಿದನು ಭಕ್ತನು”

ಎಲ್ಲಿ ಹುಟ್ಟದರೇನು ಯಾವ ಮತ ಜಾತಿ ಆದರೇನು ದೇಶದ ಯಾವ ಭಾಗದಿಂದ ಬಂದಿದ್ದರೇನು ಮಾನವ ಪ್ರೇಮವಿಲ್ಲದ್ದು. ಸೇವಾಕಾಂಕ್ಷೆ ಇದ್ದರೆ ಎಲ್ಲರೂ ತನ್ನವರು ಎಂಬ ಮನೋವೈಶಾಲ್ಯವಿದ್ದರೆ, ಕರ್ತವ್ಯನಿಷ್ಠೆ ಇದ್ದರೆ ಸಾಕು. ಜಾತಿ ಮುಖ್ಯವಲ್ಲ ಎಂಬುದಾಗಿ ಜಾತಿಯ ಬಗೆಗಿನ ಜಾತಿ ತಾರತಮ್ಯವನ್ನು ಅಂದಿನ ಸಾಮಾಜಿಕ ಪರಿಸರದ ಸಂದರ್ಭದಲ್ಲಿ ತಿರಸ್ಕರಿಸಿದ್ದಾರೆ.

ಬಸವಣ್ಣನು ಶರಣರನ್ನು “ಜಾತಿ ಸಂಕರರು” ಎಂದು ಕರೆದರೆ ಸಿದ್ಧರಾಮನು ಅವರನ್ನು “ವರ್ಣಾತೀತರು” ಎಂದು ಕರೆದಿದ್ದಾನೆ. ಅಲ್ಲಮನು “ಜಾತಿ, ವರ್ಣ, ಪಂಚಸೂತಕಗಳಿಂದ ಮುಕ್ತರಾದವರೇ ಶರಣರು ಎನ್ನುತ್ತಾನೆ. ವಚನ ಸಂಸ್ಕೃತಿಗೆ ಸಂಬಂಧಿಸಿದಂತೆ ಕೂಡ ಜಾತಿ, ವಿನಾಶ ಹಾಗೂ ಹೆಣ್ಣಿನ ಬಿಡುಗಡೆಗಳೆರಡು ಅಭಿನ್ನವಾದವು ಎಂಬುದನ್ನು ನಾವು ಗುರುತಿಸಬೇಕಾಗಿದೆ.

“ಆವ ಕುಲವಾದಡೇನು?

ಶಿವಲಿಂಗವಿದ್ದವನೇ ಕುಲಜನು

ಕುಲವನರಸುವರೆ, ಶರಣನಲ್ಲಿ ಜಾತಿ ಶಂಕರನಾದ ಬಳಿಕ?

ಶಿವಧರ್ಮ ಕುಲೇಜಾತಃ ಪುನರ್‌ಜನ್ಮ ವಿವರ್ಜಿತಃ

ಉಮಾ ಮಾತಾ ಪಿತಾರುದ್ರ ಐಶ್ವರ್ಯಂ ಕುಲವೇವಚ ॥

ಎಂಬುದಾಗಿ

ಒಕ್ಕುದ ಕೊಂಬೆನವರಲ್ಲಿ ಕೂಸ ಕೊಡುವೆ

ಕೂಡಲ ಸಂಗಮದೇವಾ ನಂಬುವೆ ನಿಮ್ಮ ಶರಣರನು;

ಎಂಬಲ್ಲಿ ಜಾತಿ ಮೀರಿದ ಸಮಾಜವೊಂದನ್ನು ನಿರ್ಮಿಸಲು ಬಸವಣ್ಣ ಹೊರಡುತ್ತಾನೆ.[2]

೨.೨ ಲಿಂಗ ತಾರತಮ್ಯ ವಿರೋಧ :-

ಶಿವಶರಣರು ಲಿಂಗ ತಾರತಮ್ಯ ವಿರೋಧಿಸುತ್ತಾ "ಶರಣಸತಿ ಲಿಂಗಪತಿ" ಎಂಬ ತತ್ವಕ್ಕೆ ಮನ್ನಣೆಯನ್ನು ನೀಡಿದರು. ಇದು "ಸ್ತ್ರೀ-ಪುರುಷರಲ್ಲಿ ಮತ್ತು ಸತಿ-ಪತಿಗಳಲ್ಲಿ ಸಮಾನತೆಯನ್ನು ಬೋಧಿಸುವ ಮತ್ತು ಸಾಧಿಸುವ ತತ್ವ, ಲಿಂಗ ಗರ್ಭದಿಂದ ಹೊರಬಂದಿರುವ ಸತಿ-ಪತಿ (ಹೆಣ್ಣು-ಗಂಡು) ಇಬ್ಬರಿಗೂ ಲಿಂಗವೆ ಪತಿ ಅಂತಹ "ಲಿಂಗ" ಪತಿಯನ್ನು ಒಲಿಸಿಕೊಳ್ಳುವುದೆ ಸತಿ-ಪತಿಯಾಗಿರುವ ಅವರಿಬ್ಬರ ಗುರಿ.

"ಸತಿ ಭಕ್ತೆಯಾದಡೆ ಹೊಲೆಗಂಜಲಾಗದು

ಪತಿ ಭಕ್ತನಾದಡೆ ಕುಲಕಂಜಲಾಗದು

ಸತಿ-ಪತಿ ಎಂಬ ಅಂಗಸುಖ ಹಿಂಗಿ

ಲಿಂಗವೇ ಪತಿಯಾದ ಬಳಿಕ ಸತಿಗೆ

ಪತಿಯುಂಟೆ? ಪತಿಗೆ ಸತಿಯುಂಟೆ? ಗೋಹೇಶ್ವರ. [೩]

ಆದ್ಯ ವಚನಕಾರನಾದ ಜೇಡರ ದಾಸಿಮಯ್ಯನು "ನಡುವೆ ಸುಳಿವಾತ್ಮ ಹೆಣ್ಣು ಅಲ್ಲ, ಗಂಡೂ ಅಲ್ಲ" ಎಂಬುದಾಗಿ ವಚನಗಳಲ್ಲಿನ ಲಿಂಗಭೇದವನ್ನು ತೊಡೆದು ಹಾಕುವುದರ ಮೂಲಕ "ಧಾರ್ಮಿಕ ಸಮಾನತೆ ಸ್ತ್ರೀಗೆ ಲಭಿಸಿದ್ದು ಸ್ಪಷ್ಟವಾದರು ಕೂಡ ಲಿಂಗ ತಾರತಮ್ಯ ವಿರೋಧವೂ ಬಸವಣ್ಣನವರ ಕ್ರಾಂತಿಯಿಂದಾಗಿ ಹೆಚ್ಚು ಚಾಲನೆಯನ್ನು ಪಡೆದದ್ದರಿಂದ ಲಿಂಗಭೇದದಂತೆ ವರ್ಣಭೇದ, ವರ್ಗಭೇದಗಳನ್ನೂ ಕೂಡ ವಿರೋಧಿಸಿದ್ದರಿಂದ ಎಲ್ಲ ವರ್ಗದ ಜನರಿಗೆ ಈ ಸಂದರ್ಭದಲ್ಲಿ ಮಾನ್ಯತೆ ದೊರೆಯುವಂತಾಯಿತು. ವಚನಕಾರರು "ಶರಣಸತಿ-ಲಿಂಗಪತಿ" ಪರಿಕಲ್ಪನೆಯನ್ನು ನೀಡುವ ಮೂಲಕ ಲಿಂಗ ತಾರತಮ್ಯವನ್ನು ತೊರೆದು ಪೂಜಿಸುವ ಶರಣ ಸತಿಯಾಗದೆ, ತನ್ನ ದೈವವಾದ ಪತಿಯನ್ನು ಪಡೆಯಲು ಅಸಾಧ್ಯ ಎಂದರು.

"ನೀನೆ ಪತಿಯಾಗಿ ನಾನೆ ಸತಿಯಾದ ಕಾರಣ

ನಿನ್ನ ನೆನವವನಲ್ಲಿ ನಾನು, ನಿನ್ನ ಪೂಜಿಸುವವನಲ್ಲಿ ನಾನು !

ನಿನ್ನ ರಚಿಸುವವನಲ್ಲ.

ಎನಗೆ ನಿನಗೆ ಸಂದಿಲ್ಲದೆ ಸಮರಸವಯ್ಯ

ಅಮುಗೇಶ್ವರನೆಂಬ ಲಿಂಗವಚನವೆಂದ ಬಳಿಕ

ನನ್ನವರು ತನ್ನವರು ಎಂಬ ಭ್ರಾಂತಿನವನಲ್ಲ.

ವಚನಚಳುವಳಿಯ ಆಶಯದಲ್ಲಿ ಅತಿ ಮುಖ್ಯವಾಗಿ ಸ್ವಾತಂತ್ರ್ಯ ಸರ್ವಸಮಾನತೆ, ಪರಸ್ಪರ ಭ್ರಾತೃತ್ವಭಾವ ಇವು ಮೂಲಸ್ತಂಭಗಳಾಗಿದ್ದವು. ಆದರೆ ಇವುಗಳನ್ನು ಸ್ಥಾಪಿಸುವುದು ವಚನಕಾರರಿಗೆ ಸುಲಭವಾದ ಕಾರ್ಯವೇನಾಗಿರಲಿಲ್ಲ. ಅಂತಹ ಸಂದರ್ಭದಲ್ಲಿ ಲಿಂಗತಾರತಮ್ಯವನ್ನು ವಿರೋಧಿಸುತ್ತಾ ಸುವ್ಯವಸ್ಥಿತ ಸಮಾಜದ ನಿರ್ಮಾಣ ಕಾರ್ಯಕ್ಕೆ ಕೈ ಹಾಕಿದರು.

ಎನಗೊಂದು ಲಿಂಗ, ನಿನಗೊಂದು ಲಿಂಗ, ಮನೆಗೊಂದು

ಲಿಂಗವಾಯಿತ್ತು, ಹೋಯಿತ್ತಲ್ಲಾ ಭಕ್ತಿ ಜಲವ ಕೂಡಿ, ಉಳಿ

ಮುಟ್ಟದ ಲಿಂಗವ ಮನ, ಮುಟ್ಟಬಲ್ಲುದೇ ಗೋಹೇಶ್ವರಾ?

ಇಲ್ಲಿ ಶಿವಾಚಾರದಲ್ಲಿ ಮುಖ್ಯವಾದದ್ದು ನಡೆ-ನುಡಿ ಒಂದಾಗಿರಬೇಕು. ಜಾತಿ - ಭೇದಗಳನ್ನು ನಿರಾಕರಿಸಬೇಕು. ಲಿಂಗವನ್ನು ಧರಿಸಿದವರೆಲ್ಲ ಕುಲಜರು, ಐಕಮತ್ಯ ಸಾಧನೆಗೆ ಸಹಾಯವಾಗಿ ಮತದಲ್ಲಿ ವರ್ಣ ವ್ಯತ್ಯಾಸಗಳನ್ನು ತೆಗೆದುಹಾಕಿ, ಭಕ್ತರೆಲ್ಲ ಒಂದೇ ಜಾತಿ ಪರಸ್ಪರ ಸಮಾನರು ಎಂದು ವಚನಕಾರರು ಹೇಳಿದ್ದಾರೆ.

ಸಮಾಜದಲ್ಲಿ ಎಲ್ಲಾ ರೀತಿಯ ತಾರತಮ್ಯವನ್ನು ವಿರೋಧಿಸುತ್ತಾ, ಎಲ್ಲರೂ ಸಮಾನರು ಎಂಬುದನ್ನೇ ದೃಢಪಡಿಸಲೆಂಬಂತೆ ಸಹಪಂಕ್ತಿ ಭೋಜನ ಮೊದಲುಗೊಂಡು ಭಕ್ತರ ವೃತ್ತಿ ಯಾವುದಾದರೂ ಆಗಿರಲಿ, ಅವುಗಳಾವುದರ ಪರಿ ಅವರ ಮನೆಯಲ್ಲಿ ಊಟಮಾಡುವ ಸಹಪಂಕ್ತಿ ದಾಸೋಹವನ್ನು ಗಮನಿಸಿದಾಗ, ಇವರಲ್ಲಿ ಯಾವುದೇ ಲಿಂಗ ಭೇದ-ಭಾವವೆಂಬುದರಲ್ಲಿ ವಚನಕಾರರು ಲಿಂಗತಾರತಮ್ಯವನ್ನು ವಿರೋಧಿಸಿದ್ದರಿಂದ ತಿಳಿಯಬಹುದಾಗಿದೆ.

ಗೊಗ್ಗವ್ವೆ :- ಕನ್ನಡ ಸಾಹಿತ್ಯದಲ್ಲಿ ಅದರಲ್ಲಿಯೂ ವಚನ ಸಾಹಿತ್ಯದಲ್ಲಿ ಧೂಪದ ಮೂಲಕ ಶಿವನ ಕೈಲಾಸದ ದಾರಿಯನ್ನು ತಿಳಿಸಿದ್ದರಿಂದ "ಧೂಪದ ಗೊಗ್ಗವ್ವೆ" ಎಂದೇ ಪ್ರಸಿದ್ಧಳಾಗಿರುವ ವಚನಕಾರ್ತಿ, ಈ ವಿಚಾರವು ನಮಗೆ ಸಿದ್ದನಂಜೇಶ ಕವಿ ತನ್ನ ಗುರುರಾಜ ಚಾರಿತ್ರಯದಲ್ಲಿ "ಭವರಹಿತೆ ಧೂಪದಾ ಗೊಗ್ಗವ್ವೆಯೆಂಬಾಕೆ ಶಿವಗೆ ಧೂಪವ ನೀಡಿ ಕೈಲಾಸ ಪದವನು

ಶಿವಭಕ್ತರಿಗೆ ತೋರಿ ಶಂಕರನ ಕೃಪೆ ಪಡೆದಳ್” ಎಂದು ಬಣ್ಣಿಸಿದ್ದಾನೆ. ಭೈರವೇಶ್ವರ ಕಥಾಮಣಿ ಸೂತ್ರ ರತ್ನಾಕರದಲ್ಲಿ ಗೊಗ್ಗವ್ವೆಗೆ ಸಂಬಂಧಿಸಿದ ವಿಸ್ತಾರವಾದ ಕಥನವಿರುವುದು.

ನಾಸ್ತಿನಥ ಅಂಕಿತದಲ್ಲಿನ ಗೊಗ್ಗವ್ವೆಯ ಆರು ವಚನಗಳಲ್ಲಿ “ಸಮಾನತೆ. ಲಿಂಗಭೇದ ನಿರಾಕರಣೆ ಆತ್ಮತತ್ವದ ಪ್ರತಿಪಾದನೆಯನ್ನು” ಗೊಗ್ಗವ್ವೆಯ ವಿಚಾರಗಳು ಆತ್ಮಜ್ಞಾನಕ್ಕೆ ಅರಿವಿನ ಸಂಪಾದನೆಗೆ ಸ್ತ್ರೀ ಪುರುಷ ಭೇದವನ್ನು ನಿರಾಕರಿಸುವ ಈಕೆಯು ವಚನ ಚಳವಳಿಯ ಆಶಯಕ್ಕೆ ಆಲೋಚನಾ ಕ್ರಮಕ್ಕೆ ಪೂರಕವಾದ ರೀತಿಯಲ್ಲಿಯೇ ಲಿಂಗ ತಾರತಮ್ಯದ ವಿಚಾರವು ವಚನದಲ್ಲಿ ಮೂಡಿ ಬಂದಿವೆ.

“ಮೊಲೆ ಮುಡಿ ಒಂದಡೆ ಹೆಣ್ಣೆಂಬರು

ಮೀಸೆ ಕಾಸೆ ಬಂದೆಡೆ ಗಂಡೆಂಬರು

ಈ ಉಭಯದ ಜ್ಞಾನ

ಹೆಣ್ಣೋ ಗಂಡೋ ನಾಸ್ತಿನಾಥಾ? [೫]

ಗಂಡು ಹೆಣ್ಣಿನ ಲಿಂಗ ವಿಶಿಷ್ಟತೆ ಸೂಚಿಸುವ ಜೈವಿಕ ಲಕ್ಷಣಗಳು ದೇಹರಚನೆಗೆ ಮಾತ್ರ ಸಂಬಂಧಿಸಿದ್ದು, ಜ್ಞಾನ ಅಥವಾ ಅರಿವಿಗೆ ಲಿಂಗ ತಾರತಮ್ಯವಿಲ್ಲವೆನ್ನುವ ಗೊಗ್ಗೆವ್ವೆಯ ಮನದಲ್ಲಿ ವಿಚಾರಪರವಾದ, ಚಿಂತನೆಯನ್ನು ಬಸವಣ್ಣನ ಕಾಲದಲ್ಲಿ ಇದ್ದದ್ದು ಸ್ತ್ರೀ ಯರಿಗೆ ಅರಿವು ಮುಖ್ಯವೇವರತು. ಲಿಂಗ, ವರ್ಣ, ವರ್ಗದ ತಾರತಮ್ಯವಲ್ಲ, ಇವುಗಳ ಹಿಂದೆಯೆ, ತಿರಸ್ಕರಿಸಿದ್ದರು. ಅದರಲ್ಲಿ ಮಹಿಳೆಯರ ಪಾತ್ರವು ಬಹಳ ಹಿರಿಯದು.

ಮೋಳಿಗೆಯ ಮಹಾದೇವಿ :– ಈಕೆಯೂ ಕೂಡ ಲಿಂಗ ತಾರತಮ್ಯವನ್ನು ವಿರೋಧಿಸಿ, ಸರ್ವಸನ್ನಿಹಿತ ಪರಮಾತ್ಮನ ಚಿತ್ಕಳೆಯಾದ ಇಷ್ಟಲಿಂಗದಲ್ಲಿಯೇ ಮರ್ತ್ಯ ಕೈಲಾಸಗಳೆರಡನ್ನೂ ಒಂದಾಗಿಸಿಕೊಳ್ಳುವ ಸಮರ ಭಕ್ತಿಯ ಮಾರ್ಗವನ್ನು ನಯವಾಗಿ ವಿವರಿಸಿರುವಳು. ತನ್ನ ಪತಿಯಾದ ಮಾರಯ್ಯನ ಆತ್ಮಕ್ಕೆ ಅರಿವಾಗಿರುವ ಅಂಗೈಲಿಂಗವ ಕಡೆಗಣಿಸಿ. ಅನ್ಯಗತಿ ಬಯಸುವ ಪತಿಯ ಧೋರಣೆಯನ್ನು ಈ ರೀತಿಯಾಗಿ

“ಕೂಟಕ್ಕೆ ಕುರುಹಾದುದನರಿಯದೆ,

ಆತ್ಮಕ್ಕೆ ಅರಿವಾದುದನರಿಯದೆ,

ಕೈಲಾಸವೆಂಬ ಸೂತ್ರದ ಒಳಗಿಗೆ ಮನಸೋತಿರಲ್ಲಾ !

ಅಂಧಕನ ಕೈಯ ರತ್ನದಂತೆ ಆದಿರಲ್ಲಾ!

ಪಂಗುಳನ ಕರದ ಶಸ್ತ್ರದಂತೆ ಆದಿರಲ್ಲಾ !

ಈ ನಿರಂಗವ ತಿಳಿದು ನಿಂದಲ್ಲಿ ಬೇರೆ ಲಿಂಗವಡಗುವದಕ್ಕೆ

ಉಭಯವುಂಟೆಂಬ ದಂದುಗ ಬೇಡ

ತಾ ನಿಂದಲ್ಲಿಯೆ ನಿಜಕೂಟ,

ತಿಳಿದಲ್ಲಿಯೆ ನಿರಂಗವೆಂಬುದು,

ಉಭಯವಿಲ್ಲ ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನಲ್ಲಿ [೬]

ನಿತ್ಯ ಅನಿತ್ಯದ ಗೊಂದಲದಲ್ಲಿ ಸಿಲುಕಿದ ಪತಿಗೆ ಲಿಂಗಾಂಗ ಸಾಮರಸ್ಯದ ಸೂಕ್ಷ್ಮವನ್ನು ಮನಗಾಣಿಸುವ ಮಹಾದೇವಿಯಮ್ಮನ ಅನುಭಾವದ ನಿಲುವು ಉನ್ನತವಾದುದು. ಆಕೆ ಮುಂದುವರೆದು ಸರ್ವಾಂಗಲಿಂಗಿಗೆ ಅನ್ಯ ಕೈಲಾಸವಿಲ್ಲ ಆತ್ಮ ನಿಶ್ಚಯವಾದಲ್ಲಿಯೇ ಕೈವಲ್ಯ, ಮತ್ತತ್ವವಾದಲ್ಲಿಯೇ ಮರ್ತ್ಯದೊಳಗು; ಹೊರಗೆ, ಕೂಡಿಹನೆಂಬುದು ನಿಮ್ಮ ಅರಿವಿಗೆ ಹಾನಿ ಎಂದು. ವಿಚಾರ ಮಾಡುತ್ತಾ ಈಕೆಯು ಇಷ್ಟಲಿಂಗದ ಮೂಲಕವೇ ಸಾಧಿತವಾಗುವ ನಿಜದ ನೆಲೆಯನ್ನು ತಿಳಿಸಿರುವುದು ಈಕೆಯಲ್ಲಿನ ಪರಿಪಕ್ವತೆಯನ್ನು ಪಡೆದ ಅರಿವಿನಮಟ್ಟವನ್ನು ತಿಳಿಯಲಾಗಿದೆ.

ಆಯ್ದಕ್ಕಿ ಲಕ್ಕಮ್ಮ ಕೂಡ ಲಿಂಗ ತಾರತಮ್ಯವನ್ನು ಕುರಿತು ವಿರೋಧಿಸಿರುವುದನ್ನು ಕಾಣಬಹುದಾಗಿದೆ.

"ಆವ ಬೀಜವು ಬೀಳುವಲ್ಲಿ ಮೊಳೆ ಮುಖ ಹಿಂಚು ಮುಂಚುಂಟೆ?

ನೀ ಮರೆದಲ್ಲಿ ನಾನರಿದಲ್ಲಿ ಬೇರೊಂದೊಡಲುಂಟೆ?

ಮೂಲ ನಷ್ಟವಾದಲ್ಲಿ ಅಂಕುರ ನಿಂದಿತ್ತು.

ಕೂಟಕ್ಕೆ ಸತಿಪತಿ ಎಂಬ ನಾಮವಲ್ಲದೆ

ಅರಿವಿಂಗೆ ಬೇರೊಂದೊಡಲುಂಟೆ ?

ಬೋರೊಂದಡಿಯಿಡದಿರು.

ಮಾರಯ್ಯಪ್ರಿಯ ಅಮಲೇಶ್ವರಲಿಂಗವನರಿಯಬಲ್ಲಡೆ.[೬]

ಲಕ್ಕಮ್ಮ ತನ್ನ ವಚನಗಳಲ್ಲಿ ಹೆಚ್ಚಾಗಿ "ಕಾಯಕದಲ್ಲಿಯೆ. ಕೈಲಾಸವನ್ನು ಕಾಣುವ. ಸಂತೃಪ್ತಿ ಭಾವ ಸ್ಥಿತಿಯಿರುವಂತೆ. ಈ ಮೇಲಿನ ವಚನದಲ್ಲಿ ಶರಣರ ಆದರ್ಶವನ್ನು ಬೆಂಬಲಿಸುವ ಲಕ್ಕಮ್ಮ ದಾಂಪತ್ಯದಲ್ಲಿ ಸತಿ–ಪತಿ ಸಂಬಂಧ ಪೂರಕ ನೆಲೆಯದಾಗಿದ್ದು. ಇಲ್ಲಿ ಅಧ್ಯಾತ್ಮ ಸಾಧನೆ ಅರಿವಿನ ಸಂಪಾದನೆಯಲ್ಲಿ ಸಹಚರಿಗಳಾಗುವ ಆಶಯವನ್ನು ಅಭಿವ್ಯಕ್ತಿಸಿದ್ದಾಳೆ.

ಅರಿವಿಗೆ ಲಿಂಗಭೇದವಿಲ್ಲ, ಜೀವ ಅಂಕುರದಂತೆ ಸತಿಪತಿ ಬಾಂಧವ್ಯ. ಅನ್ಯೋನ್ಯವಾದುದೆನ್ನುವ ಪ್ರಬುದ್ಧವಾದ ಚಿಂತನೆಯಿರುವುದು. ಆಕೆಯ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಜೈವಿಕ ವ್ಯತ್ಯಾಸಗಳ ಕಾರಣವಾಗಿಯೆ ಹೆಣ್ತನವನ್ನು ಕನಿಷ್ಠವಾಗಿಸಿದ, ಹೆಣ್ಣಿನ ಅರಿವು, ಅಸ್ತಿತ್ವ ಅಭಿವ್ಯಕ್ತಿಯನ್ನು ಗೌಣವಾಗಿಸಿದ ಸಾಂಸ್ಕೃತಿಕ ಸಂದರ್ಭವನ್ನು ಪ್ರಶ್ನಿಸುವಳು ಲಕ್ಕಮ್ಮ.

"ಒಳಗೆ ಸುಳಿವ ಆತ್ಮ ಒಂದೆ, ಎಂದು ಸಾರಿದ ದಾಸಿಮಯ್ಯನವರ ಧೋರಣೆಗೆ" ಪೂರಕವಾಗಿ "ಅರಿವಿಗೆ ಬೇರೊಂದೊಡಲುಂಟೆ.[೮] ಎನ್ನುವಲ್ಲಿ, ಇತ್ಯಾತ್ಮಕ ನೆಲೆಯನ್ನು ಜೋಡಿಸಿ ಲಿಂಗ ತಾರತಮ್ಯದ ಸಾಂಪ್ರದಾಯಿಕ ಗ್ರಹಿಕೆಯನ್ನು, ತಾತ್ವಿಕವಾಗಿ ವಿಶ್ಲೇಷಿಸಿರುವಳು. ಲಕ್ಕಮ್ಮ ಆಕೆಯ ಅಭಿವ್ಯಕ್ತಿಯ ಕಲೆಗಾರಿಕೆಯನ್ನು ವಚನದ ಅರ್ಥಶಕ್ತಿಯನ್ನು ಕಾಣಬಹುದು.

ಒಟ್ಟಾರೆಯಾಗಿ ವಚನ ಚಳವಳಿಯಲ್ಲಿ ಯಾವುದೇ ತಾರತಮ್ಯವೆಂಬುದಕ್ಕೆ ಎಡೆಮಾಡಿಕೊಡದೆ ಈಗಾಗಲೇ ಇದ್ದ ತಾರತಮ್ಯವನ್ನು ಮನಸ್ಸಿನಿಂದ ತೆಗೆದುಹಾಕಿ ವಚನ ಚಳವಳಿಯ ಮೂಲಕ ನವ ಸಮಾಜ ನಿರ್ಮಾಣಕ್ಕೆ ಸ್ತ್ರೀ ಪುರುಷರೆನ್ನದೆ ಎಲ್ಲರೂ ಸಮಾನರಾಗಿ ಕಾರ್ಯ ನಿರ್ವಹಿಸುತ್ತಾ ತಮ್ಮನ್ನು ತಾವು ತೊಡಗಿಸಿಕೊಂಡರು, ಹೀಗೆ ವಚನ ಚಳವಳಿಯ ಮೂಲ ಆಶಯವೂ ಕೂಡ ಸಮಾಜದಲ್ಲಿನ ಓರೆಕೋರೆಗಳನ್ನು ತಿದ್ದುತ್ತಾ ತಮ್ಮನ್ನು ತಾವು ಶುಚಿಪಡಿಸಿಕೊಳ್ಳುವ ಮೂಲಕ ಕಾಯಕದಲ್ಲಿಯೇ ದೇವರನ್ನು ಕಾಣುವುದಾಗಿತ್ತು.

೨.೩ ವಚನಕಾರರ ದೃಷ್ಟಿಯಲ್ಲಿ ಸ್ತ್ರೀ

ವಚನ ಸಾಹಿತ್ಯದಲ್ಲಿ ಸ್ತ್ರೀಯರಿಗೆ ಪುರುಷರಂತೆಯೇ ಸಮಾನವಾದ ಹಕ್ಕುಗಳೂ ಗೌರವವೂ ಇತ್ತು. ಸಮಾಜದಲ್ಲಿನ ಅಜ್ಞಾನ, ಮೂಢನಂಬಿಕೆಗಳ ವಿರುದ್ಧ ವಚನಕಾರರು ವಿರೋಧಿಸುತ್ತ ಈ ಸಂದರ್ಭದಲ್ಲಿಯೇ ಮಹಿಳೆಯರಿಗೆ ಸಮಾಜದ ಅತ್ಯಂತ ಕೆಳವರ್ಗದ ಧೀನ, ದಲಿತರಿಗೂ ಸಮಾಜದ ಚಟುವಟಿಕೆಗಳಲ್ಲಿ, ಚಿಂತನೆಗಳಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಿಕೊಟ್ಟು ಈ ಸಮಾಜ ಪ್ರತಿಯೊಂದು ಜೀವಿಗೂ ಸಂಬಂಧಿಸಿದ್ದು ಎಂಬ ಭಾವನೆಯನ್ನು ಮೂಡಿಸಿದ್ದು ಅತ್ಯಂತ ಮಹತ್ವದ ಸಂಗತಿಯಾಗಿದೆ.

ಅಲ್ಲದೆ, ಕಾಯಕ ತತ್ವದಿಂದಾಗಿ ಎಲ್ಲಾ ಉದ್ಯೋಗ ಕ್ಷೇತ್ರಕ್ಕೂ ಸಮಾನ ಗೌರವವುಂಟಾಯಿತು. ಈಗಾಗಿಯೇ ಸ್ತ್ರೀ ಪುರುಷರೆನ್ನದೆ ಎಲ್ಲರೂ ಕಾಯಕ ಜೀವಿಗಳಾದರು. "ಸ್ತ್ರೀ" ಸ್ವಾತಂತ್ರ್ಯ ಸಮಾನತೆಗಳಿಗೆ ಬೆಲೆ ಬಂದದ್ದು ಮಹಿಳೆಯರು "ಕಾಯಕ ತತ್ವವನ್ನು ಗಂಭೀರವಾಗಿ ಪರಿಭಾವಿಸಿದ್ದರಿಂದಲೇ.

ವಚನಕಾರರ ಆಲೋಚನೆ ಅತ್ಯಂತ ಆಧುನಿಕವೂ ದೂರದೃಷ್ಟಿಯಾದದೂ ಆಗಿದೆ. ಸ್ತ್ರೀ ಮತ್ತು ಶೂದ್ರ ಇಬ್ಬರೂ ಬೌದ್ಧಿಇವಾಗಿ ಸಮಾನರು- ಶೂದ್ರರ ಮತ್ತು ದಲಿತರ ಪ್ರಗತಿಯನ್ನೇ ತನ್ನ ಗುರಿಯಾಗಿ ಎತ್ತಿಕೊಂಡ "ವಚನಕಾರರ ದೃಷ್ಟಿ" "ಸ್ತ್ರೀ"ಯರ ಕಡೆಗೂ ಹೊರಳಿದುದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

ಗಂಡು-ಹೆಣ್ಣಿನ ಭೇದ ಭೌತಿಕ ಚಿಹ್ನೆಗಳಲ್ಲಿ ಮಾತ್ರ ಆದರೆ ಸತ್ವಶಃ ಇಬ್ಬರೂ ಒಂದೇ ಬಗೆಯ ಸಾಮರ್ಥ್ಯವನ್ನು ಪಡೆದಿರುವವರು ಸಮಾಜದ ಉನ್ನತಿಯಾಗಬೇಕಾದರೆ ಸ್ತ್ರೀ ಸಮೂಹವನ್ನು ಹೊರಗಿಡುವುದು ವಿವೇಕವಲ್ಲವಾದ್ದರಿಂದ ಹೆಣ್ಣನ್ನೂ ಗಂಡಿನಂತೆ ಕಾಣಲು ಮತ್ತು ಪ್ರಾಮುಖ್ಯತೆಯನ್ನು ನೀಡಲು ವಚನಕಾರರು ಪ್ರಾರಂಭಿಸಿದರು.

ಸಿದ್ಧರಾಮೇಶ್ವರನು ಸ್ತ್ರೀಯನ್ನು ಕುರಿತು

"ಹೆಣ್ಣು ಹೆಣ್ಣಲ್ಲ ಹೆಣ್ಣು ರಾಕ್ಷಸಿಯಲ್ಲಿ ಹೆಣ್ಣು

ಪ್ರತ್ಯಕ್ಷ ಕಪಿಲ ಸಿದ್ಧ ಮಲ್ಲಿಕಾರ್ಜುನ"

ಎನ್ನುವಲ್ಲಿಯ ವಚನದಲ್ಲಿ "ಸ್ತ್ರೀ"ಯರ ಬಗೆಗಿನ ನಿಲುವನ್ನು ಮೇಲಿನ ಸಾಲುಗಳಲ್ಲಿ ಗ್ರಹಿಸಬಹುದಾಗಿದೆ. ಹಾಗೆಯೇ ಸ್ತ್ರೀಯನ್ನು ಕುರಿತು ಮಹಾತ್ಮ ಗಾಂಧೀಜಿಯವರು ಕೂಡ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರಲು ಪುರುಷರಷ್ಟೆ ಸ್ತ್ರೀಯರ ಪ್ರೋತ್ಸಾಹ ಮತ್ತು ತ್ಯಾಗದಿಂದ ಸ್ವಾತಂತ್ರ್ಯ ಸಾಧ್ಯವಾಯಿತು ಎಂದು ಒಂದು ಕಡೆ ಹೇಳಿರುವರು. ಆದ್ದರಿಂದ ಹೆಣ್ಣನ್ನು ಹೊರತುಪಡಿಸಿ ನೋಡಲು ಸಾಧ್ಯವಾಗದು. ಪ್ರತಿಯೊಂದಕ್ಕೂ ಹೆಣ್ಣಿನ ಆದ್ಯತೆ, ಪ್ರತಿಯೊಂದರಲ್ಲಿಯೂ ಕೂಡ ಅತ್ಯಗತ್ಯವನ್ನು ಮನಗಂಡ ವಚನಕಾರರು "ಸ್ತ್ರೀ" ಯರನ್ನು ಗೌರವಸಿದ ಮೊದಲಿಗರು.

ಡಕ್ಕೆಯ ಬೊಮ್ಮಣ್ಣ

ಡಕ್ಕೆಯನ್ನು(ಢಕ್ಕೆ) ಬಾರಿಸುತ್ತ ಮೊರದಲ್ಲಿ ಮಾರಿಯನ್ನಿಟ್ಟು ಕುಣಿಸುವ ಕಾಯಕವು ಇವನದು. ಇವನ ಅಂಕಿತ "ಕಾಲಾಂತಕ ಭೀಮೇಶ್ವರಲಿಂಗ"

ಬೊಮ್ಮಣ್ಣ ಗಂಡು–ಹೆಣ್ಣಿನ ಸಂಬಂಧದ ಬಗ್ಗೆ ತನ್ನ ವಚನದಲ್ಲಿ ಚಿಂತಿಸಿರುವುದನ್ನು ಕಾಣಬಹುದು. ವಚನಗಳ ಮೂಲಕ ಇವನು ಗಂಡು–ಹೆಣ್ಣು ಇಬ್ಬರೂ ದೇಹದ ಕಣ್ಣುಗಳು–ಒಂದು ಊನವಾದರೂ ಇನ್ನೊಂದಕ್ಕೆ ಭಂಗ ಬರುವುದು. ಆದ್ದರಿಂದ ಇಬ್ಬರೂ ಸಮಾನರು ಎನ್ನುವ ಮಾನ್ಯತೆಯನ್ನು ನೀಡಿ "ಸ್ತ್ರೀ"ಗೆ ಬೊಮ್ಮಣ್ಣ ನೀಡುತ್ತಾ ಹೆಂಡತಿಯ ಗುಣವನ್ನು ವಿಚಾರಿಸುವ ಹಕ್ಕು ಗಂಡಿಗಿರುವಂತೆ, ಗಂಡಿನ ಯೋಗ್ಯತೆಯನ್ನು ಪ್ರಶ್ನಿಸುವ ಅಧಿಕಾರ ಹೆಣ್ಣಿಗೂ ಉಂಟು ಎಂಬ ಅಭಿಪ್ರಾಯವನ್ನು ಈತನು ತನ್ನ ವಚನದಲ್ಲಿ ಅಭಿವ್ಯಕ್ತಿಸಿದ್ದಾನೆ.

"ಸತಿಯ ಗುಣವ ಪತಿ ನೋಡಬೇಕಲ್ಲದೆ

ಪತಿಯ ಗುಣವ ಸತಿ ನೋಡಬಹುದೆ ಎಂಬರು

ಸತಿಯಿಂದ ಬಂದ ಸೋಂಕು ಪತಿಗೆ ಕೇಡಲ್ಲವೆ?

ಪತಿಯಿಂದ ಬಂದ ಸೋಂಕು ಸತಿಗೆ ಕೇಡಲ್ಲವೆ?

ಒಂದಂಗದ ಕಣ್ಣು ಉಭಯದಲ್ಲಿ ಒಂದು ಹಿಂಗಲಿಕ್ಕೆ

ಭಂಗವಾರಿಗೆಂಬುದು ತಿಳಿದಲ್ಲಿಯೆ

ಕಾಲಾಂತರ ಭೀಮೇಶ್ವರ ಲಿಂಗಕ್ಕೆ ಸೆಲೆ ಸಂದಿತ್ತು."[8]

ಈ ಮಾತುಗಳನ್ನು ಹೇಳುತ್ತಿರುವ ವ್ಯಕ್ತಿ ಮಾರಿಯನ್ನು ಮೊರೆದಲ್ಲಿಟ್ಟುಕೊಂಡು ಕುಣಿಸುವ ವ್ಯಕ್ತಿ "ಸ್ತ್ರೀ" ಸಮಾನಳು ಎಂದಿರುವುದು ಬಹಳ ಮುಖ್ಯವಾಗುವುದು. ವಚನ ಚಳವಳಿಯ ಸಂದರ್ಭದಲ್ಲಿನ ವಚನಕಾರರೆಲ್ಲರೂ ಕೂಡ "ಸ್ತ್ರೀ"ಗೆ ಅವಕಾಶವನ್ನು ಕಲ್ಪಿಸಿಕೊಟ್ಟು ಪ್ರೋತ್ಸಾಹಿಸಿದವರೆ ಆಗಿದ್ದಾರೆ.

ಬಸವಣ್ಣ

ವಚನ ಚಳುವಳಿಯ ಕೇಂದ್ರವಾದ ಬಸವಣ್ಣ "ಸ್ತ್ರೀ" ಯರು ಮುಕ್ತವಾಗಿ ಚರ್ಚಿಸಲು ಮಾತನಾಡಲು ಪ್ರಚೋದಕ ಶಕ್ತಿಯಾಗಿದ್ದಂತವನು.

೧೨ನೆಯ ಶತಮಾನದಲ್ಲಿ ಗಂಡು ಮಗನಿಂದ ಮಾತ್ರ ತಂದೆ-ತಾಯಿಗೆ ಸದ್ಗತಿ, ಗಂಡು ಹುಟ್ಟದಿದ್ದರೆ ಅವರಿಗೆ ಸದ್ಗತಿ ಇಲ್ಲ ಎಂಬ ಮೂಢನಂಬಿಕೆಯನ್ನು ತೊಡೆದು ಹಾಕಿದವರು ಶರಣರು.

ಶರಣ ಧರ್ಮದಲ್ಲಿ ಹೆಣ್ಣು ಮದುವೆಯಾಗಲೇಬೇಕೆಂಬ ನಿರ್ಬಂಧವಿಲ್ಲ. ಇದು ಗಂಡಿಗೂ ಅನ್ವಯಿಸುವುದು. ಹೆಣ್ಣು-ಗಂಡು ಮದುವೆಯಾದರೂ ಮಕ್ಕಳನ್ನು ಪಡೆಯಲೇಬೇಕೆಂಬ ಮತ್ತು ಗಂಡು ಆಗಲೇಬೇಕೆಂಬ ಮನದಲ್ಲಿ ಅಡಗಿರುವ ಮೂಢನಂಬಿಕೆಗಳನ್ನು ಹೋಗಲಾಡಿಸಿ ಅವರಲ್ಲಿ ಅರಿವನ್ನು ಮೂಡಿಸಿದರು.

ಸಂಸಾರಿಗಳು ಸಂಸಾರದಲ್ಲಿದ್ದು ಸಂಸಾರದಲ್ಲಿ ಮುಳುಗಿ ಹೋಗದೆ ಸಂಸಾರವ ಗೆಲ್ಲಬೇಕು. ಭೋಗಗಳಲ್ಲಿ ಸಂಯಮ ಬೇಕು. ಸತಿ-ಪತಿಯರ ಸಂಗದಲ್ಲಿ ಸಂಯಮ ಬೇಕು ಎಂದು ಬಸವಣ್ಣನವರು ಹೇಳಿದ್ದಾರೆ.

"ನೆರೆ ಕೆನ್ನೆಗೆ ತೆರೆಗಲ್ಲಕ್ಕೆ ಶರೀರ ಗೂಡುವೋಗದ ಮುನ್ನ
ಹಲ್ಲು ಹೋಗಿ ಬೆನ್ನು ಬಾಗಿ ಅನ್ಯರಿಗೆ ಹಂಗಾಗದ ಮುನ್ನ
ಕಾಲ ಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ
ಮುಪ್ಪಿಂದೊಪ್ಪ ವಳಿಯದ ಮುನ್ನ
ಮೃತ್ಯುಮುಟ್ಟದ ಮುನ್ನ
ಪೂಜಿಸು ಕೂಡಲಸಂಗಮದೇವ" [೧೦]

ಇಲ್ಲಿ ಬಸವಣ್ಣನವರು ಮನುಷ್ಯನ ದುರಂತವನ್ನು ಕುರಿತು ಮಾತನಾಡಿರುವರು. ಸ್ತ್ರೀಗೆ ಮಾತ್ರ ಅನ್ವಯವಲ್ಲ. ಮಾನವ ಕುಲಕ್ಕೆ ಅನ್ವಯಿಸುವಂತಹ ವಚನವಿದು. ಮೃತ್ಯು ಬರುವ ಮೊದಲು ಹಣ್ಣಿನಂತೆ ಒರಗುವ ಸಾವಿನ ಮುಂಚೆ ಮನುಷ್ಯನ ಕೆನ್ನೆ ನೆರೆತು ಶರೀರ ಗೂಡಾಗುವುದಕ್ಕಿಂತ ಮುಂಚೆ, ಕಾಲ ಮೇಲೆ ಕೈಯನೂರಿ ಕೋಲನಿಡಿಯುವ ಮೊದಲು ಕೂಡಲ ಸಂಗಮದೇವನ ಪೂಜಿಸು ಎಂದು ಮೊದಲೇ ತಿಳಿಸಿದಂತೆ ಆಡುವ ಕೋಳಿ ಮರಿಯನ್ನು ಹದ್ದು ಕೊಂಡೊಯ್ಯುವಂತೆ ಮನುಷ್ಯನನ್ನು ಸಾವು ಕೊಂಡೊಯ್ಯುವ ಮೊದಲು ಅಂದರೆ, ವಾಸ್ತವವಾಗಿ ಯಾರೂ ಕೂಡ ಸಾವು ಎನ್ನುವ ಭಯಾನಕ ಸ್ಥಿತಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಆದಕ್ಕಿಂತ ಮೊದಲು ಕೂಡಲ ಸಂಗಮ "ಭಗವಂತನನ್ನು ಪೂಜಿಸು ಎಂಬ ಬುದ್ಧಿವಾದವನ್ನು ನೀಡುವ ವಚನವಾಗಿದೆ."

ವಚನಕಾರರ ದೃಷ್ಟಿಯಲ್ಲಿ ಸ್ತ್ರೀಯರು ಎಂಬ ವಿಭಾಗದಲ್ಲಿ ನಾನು ಈ ವಚನವನ್ನು ಬಳಸಿಕೊಂಡಿರುವುದು "ಸ್ತ್ರೀ" ಯನ್ನು ಒಳಗೊಂಡ ಸಮಸ್ತ ಅಥವಾ ಸಮಗ್ರ ದೃಷ್ಟಿಯಿಂದ ಹೇಳುವ ಪ್ರತಿಯೊಬ್ಬ ಜೀವಿಯೂ ಕೂಡ ಮೃತ್ಯುರೂಪದ ಮುನ್ನ ಭಗವಂತನನ್ನು ಪೂಜಿಸಬೇಕು ಎಂಬುದು ಬಸವಣ್ಣನವರ ಉದ್ದೇಶವಾಗಿತ್ತು. ಭಗವಂತನ ಕೃಪೆಯನ್ನು ಪಡೆಯಲು ಸ್ತ್ರೀ ಪುರುಷರನ್ನು ಒಳಗೊಂಡಂತೆ ಪ್ರತಿಯೊಬ್ಬರೂ ಭಗವಂತನನ್ನು ಪೂಜಿಸುತ್ತಾ ಆ ಮೂಲಕ ಭಗವಂತನ ಕೃಪೆಗೆ ಪಾತ್ರರಾಗುವರು ಎಂದು ಹೇಳುವರು.

ಮೋಳಿಗೆ ಮಾರಯ್ಯ :- ಎಂಬ ಶರಣ. ತಾನು ಲಿಂಗದಲ್ಲಿ ಐಕ್ಯನಾಗುವೆನೆಂದು ತನ್ನ ಸತಿಯಾದ ಮಹಾದೇವಿಯಮ್ಮನಿಗೆ ತಿಳಿಸಿದನು. ಆಕೆ ಗಂಡನ ಅಜ್ಞಾನಕ್ಕೆ ವ್ಯಥೆಪಟ್ಟು ಇನ್ನೂ ತಾನು ಬೇರೆ, ಲಿಂಗ ಬೇರೆ ಎಂಬ ಭಿನ್ನ ಭಾವದಿಂದ ಗಂಡನು ವರ್ತಿಸುತ್ತಿರುವನಲ್ಲದೆ, ತಾನೆ ಲಿಂಗವೆಂಬ ಏಕಾರ್ಥ ಉದಯಿಸಲಿಲ್ಲ ಎಂದುಕೊಂಡಳು.

"ನಿಶ್ಚಯವ ತಾನರಿದು, ಅತ್ತಣ ಗೊತ್ತು ನಿಶ್ಚಯವಾಗಿ ನಿಂದಲ್ಲಿ ಆ ಬಚ್ಚಬಯಲು ಬೆಳಗು ನಿನ್ನ ನೀ ನೋಡಿಕೊ" ಎಂದು ಎಚ್ಚರಿಸಿರುವುದು. ಅಲ್ಲಮಪ್ರಭು ಹೇಳಿದ "ಎಲೆ ಮನವೇ ನೀ ನಿನ್ನ ನಿಜವ ತಿಳಿವೊಡೆ ಹೇಳುವೆ ಕೇಳು, ಅದು ಕೇವಲ ಜ್ಯೋತಿ ಎಂಬುದನ್ನು ಜ್ಞಾಪಕಕ್ಕೆ ತರುತ್ತದೆ.

ಮೋಳಿಗೆ ಮಾರಯ್ಯ ತನ್ನ ಸತಿ ಹೇಳಿದುದನ್ನು ಗ್ರಹಿಸದೆ ಮತ್ತೆಯೂ "ನಿಃಕಳಂಕಮಲ್ಲಿಕಾಜುನ ಎಲ್ಲಿದ್ದಹೆನು ಹೇಳು" ಎಂದು ಕೇಳಿದನು.

ಗಜೇಶ ಮಸಣಯ್ಯ :- ಈತನು ಕೂಡ ತನ್ನನ್ನು ತಾನು ಸಂಪೂರ್ಣವಾಗಿ ಶಿವಪೂಜೆಯಲ್ಲಿ ತೊಡಗಿಸಿಕೊಂಡಿದ್ದ ಸಾಧಕ. ಅವನ ವಚನಗಳು ಉರಿಲಿಂಗ ದೇವನ ವಚನಗಳಂತೆಯೇ ಭಾವೋದ್ರಿಕ್ತವಾಗಿವೆ ಮತ್ತು ಹೆಚ್ಚು ಸೂಕ್ಷ್ಮವಾಗಿವೆ. ಈತನ ವಚನಗಳಲ್ಲಿನ ಪ್ರತಿಮೆಗಳು ವಚನ ಸಾಹಿತ್ಯದಲ್ಲೇ ಅಪೂರ್ವವಾಗಿವೆ ಎಂದರೆ ತಪ್ಪಾಗಲಾರದು. ಗಜೇಶ ಮಸಣಯ್ಯನು ತನಗಾದ ಒಂದು ಅನುಭವವನ್ನು ಈ ವಚನದಲ್ಲಿ ಹೇಳಿಕೊಳ್ಳುವನು.

> "ಮಾಗಿಯ ಹುಲ್ಲಿನ ಸೋಂಕಿನಂತೆ ತನು ಪುಳುಕಿತಳಾದಳವ್ವೆ
> ನುಡಿ ತೊದಳು, ಅವನ ಒಲವೆ ಆಧಾರವಾಗಿದ್ದಳವ್ವೆ
> ಬಿಳಿಯ ತುಂಬಿ ಕುಂಕುಮದ ರಜದಲ್ಲಿ ಬಂಡುಂಡಂತೆ
> ಮಹಲಿಂಗ ಗಜೇಶ್ವರನಲ್ಲಿ ತನ್ನಲ್ಲಿ ತಾನೇ ರತಿಯಾಗಿರ್ದಳವ್ವೆ" [೧೧]

ಇಲ್ಲಿ ಈತನು ಹುಲ್ಲು ಕಾಲಿಗೆ ಮುಟ್ಟಿದಾಗ ಇಡೀ ದೇಹ ಒಮ್ಮೆ ಚಳಿಯಿಂದ ನಡುಗುತ್ತದೆ. ಆ ಅನುಭವ ಪ್ರೇಯಸಿಗಾಗಿದೆ. ಅದು ನಲ್ಲನ ಸಾನಿಧ್ಯದಲ್ಲಿ ಒಂದು ರೀತಿಯ ನಾಚಿಕೆ, ಭಯ ಅವನಿಗೆ ಅವಳೇ ಆಧಾರ. "ತನ್ನಲ್ಲಿ ತಾನೇ ರತಿಯಾಗಿರ್ದಳ್ಳವ್ವೆ" ಎನ್ನುವುದು ಇಲ್ಲಿ ಪ್ರೇಯಸಿಯ ಕನಸಿನ ಲೋಕವನ್ನು ನಮ್ಮ ಮುಂದೆ ಬಿಚ್ಚಿಡುತ್ತದೆ. ಅಲ್ಲದೇ ಪ್ರಿಯ ಅಗಲಿದಾಗ ಆಗುವ ವೇದನೆಯನ್ನು ವಚನಕಾರ ಹೇಳುವ ರೀತಿ ಅತ್ಯಂತ ಅಪೂರ್ವವಾಗಿದೆ. "ಮಹಲಿಂಗ ಗಜೇಶ್ವರನಗಲಿದೊಡೆ ನಿದ್ರೆ ಎಮಗಿಲ್ಲ, ಕನಸೆಲ್ಲಿಂದ ಬಹುದವ್ವಾ" ಆಕೆಗೆ ನಿದ್ದೆಯೇ ಇಲ್ಲ. ಪಾಪ, ಕನಸು ಎಲ್ಲಿಂದ ಬರಬೇಕು? ಮುಂದುವರಿದು ಈತನು ಒಲಿದವರು ಒಲ್ಲೆ ಎನ್ನುವ ಮಾತು ಸಾಕಂತೆ, ಕೊಲುವರೆ ಮಸೆದ ಕೂರಲಗೇಕವ್ವಾ ಅವರನ್ನೊಲ್ಲೆನೆಂದರೆ ಸಾಲದೇ" ಈ ರೀತಿಯ ವಿಶಿಷ್ಟತೆಯನ್ನು ತಂದು ಕೊಡುವ ಮಾತುಗಳನ್ನು ಆಡುವನು. ಅವನಿಗೆ ತನ್ನ ನಲ್ಲೆಯನ್ನು ವರ್ಣಿಸಲು ಸಾಧ್ಯವೇ ಇಲ್ಲ. ಆದರೆ ಈತನು ಸ್ತ್ರೀಯನ್ನು ಕುರಿತು ಈ ರೀತಿಯಾಗಿ ನುಡಿಯುವನು.

> "ತಮ್ಮ ತಮ್ಮ ಗಂಡರ ಚೆಲುವರೆಂದು ಕೊಂಡಾಡುವ
> ಹೆಣ್ಣುಗಳು ಪುಣ್ಯಜೀವಿಗಳವ್ವಾ
> ನಾ ನಮ್ಮ ನಲ್ಲನೆಂಥವನೆಂದರಿಯೆನವ್ವಾ
> ಮಹಲಿಂಗ ಗಜೇಶ್ವರದೇವ ನಿರಿಯ ಸೆರಗ ಸಡಿಲಿಸಲೊಡನೆ

ನಾನೇನೆಂದರಿಯನವ್ವಾ" [೧೭]

ಇಲ್ಲಿ ಈತನು ತಮ್ಮ ತಮ್ಮ ಗಂಡರು ಚೆಲುವರೆಂದು ಹೇಳಿಕೊಳ್ಳುವ ಹೆಣ್ಣುಗಳೇ ಪುಣ್ಯವಂತರು ಎಂದು ಹೇಳುವ ಈತನ ಮಾತು ಅಪೂರ್ವವಾದುದಾಗಿದೆ. ಏಕೆಂದರೆ ಸ್ತ್ರೀಯನ್ನು ತೆಗಳಿರುವ ಅನೇಕ ಪುರುಷರ ನಡುವೆ ಈ ರೀತಿಯ ನವನೀತಿವಾದ ಭಾವ ಅಂಕುರಿಸಿರುವುದು ಸ್ವಾಗತಾರ್ಹವಾದುದಾಗಿದೆ. ಏಕೆಂದರೆ ಮುಂದುವರಿದು ಸ್ತ್ರೀಯಿಂದಾಗುವ ಕಾರ್ಯ ತನಗೆ ಸಾಧ್ಯವಿಲ್ಲದನ್ನು ತಿಳಿಸುತ್ತಾ ಆ ಪುಣವಿಲ್ಲಾ. ಏಕೆಂದರೆ ತನ್ನ ಪ್ರಿಯ ಬಂದು ಮುಟ್ಟಿದೊಡನೆ ಎಲ್ಲವೂ ಮರೆತುಹೋಗುತ್ತದೆ ಎನ್ನುವ ವರ್ಣನೆಯನ್ನು ಮೇಲಿನ ವಚನದ ಭಾವದಿಂದ ಅರಿಯಲು ಸಾಧ್ಯವಾಗಿದೆ.

ಒಟ್ಟಾರೆ ಸಮಾಜದಲ್ಲಿ ಹರಡಿಕೊಂಡಿದ್ದ ಅಸಮಾನತೆ, ಕಂದಾಚಾರ, ಮೂಢನಂಬಿಕೆಗಳನ್ನು ಹೋಗಲಾಡಿಸುವ ಸ್ತ್ರೀಯನ್ನು ಕಂಡುಕೊಂಡ ವಿಭಿನ್ನತೆಯನ್ನು ನಾವು ಗಮನಿಸಬಹುದಾಗಿದೆ. ಎಲ್ಲರನ್ನು ಪರೀಕ್ಷಿಸುವ ಅಲ್ಲಮನನ್ನು, ಮುಕ್ತಾಯಕ್ಕ ಪರೀಕ್ಷಿಸುವುದು ಆತನಿಗೆ ಪ್ರಶಸ್ತಿ ನೀಡುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಆಕೆ ತಾನು ಜ್ಞಾನಿಯಾದರೂ ಪಾತಿವ್ರತ್ಯಕ್ಕೆ ಭೂಷಣವಾದ ಸೌಜನ್ಯಕ್ಕೆ ಪ್ರತೀಕಳಾಗಿದ್ದಾಳೆ. ಸತಿ ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ ಎಂಬ ಭಾವ ಇಬ್ಬರ ಮನಸ್ಸಿನಲ್ಲಿ ನೆಲೆಗೊಂಡಿದ್ದು ಆತ್ಮಸಾಧನೆಗೆ ಪತಿಯನ್ನೆ ಅವಲಂಬಿಸಬೇಕೆಂದೂ ಅರ್ಥವಲ್ಲ. ಮದುವೆ ಮಾಡಿಕೊಳ್ಳುವುದು ಅನಿವಾರ್ಯವೂ ಅಲ್ಲ. ಮದುವೆಯ ಹಂಗಿಲ್ಲದೆ ಗಂಡಿನ ಹಂಗಿಲ್ಲದೆ "ಸ್ತ್ರೀ" ಗೌರವಯುತವಾದ ಜೀವನವನ್ನು ನಡೆಸಬಹುದು. "ಅಧ್ಯಾತ್ಮ ಸಾಧನೆ ಮಾಡಿ ಆತ್ಮ ಸಾಕ್ಷಾತ್ಕಾರವನ್ನು ಪಡೆಯಬಹುದು ಎಂಬುದನ್ನು ಮನಗಾಣಿಸಿದವರು ವಚನಕಾರರು. ಇಂತಹ ವಚನಕಾರರ ದೃಷ್ಟಿಯಲ್ಲಿ ಸ್ತ್ರೀಯು ಕನಿಷ್ಠಳಲ್ಲ. ಆಕೆಯು ಸಮಾನಳಾಗಿದ್ದಾಳೆ.

ಒಟ್ಟಾರೆಯಾಗಿ ವಚನಚಳವಳಿಯಲ್ಲಿ ಯಾವುದೇ ರೀತಿಯ ತಾರತಮ್ಯಕ್ಕೆ ಎಡೆಮಾಡಿಕೊಡದೆ, ಈಗಾಗಲೇ ಇದ್ದ ತಾರತಮ್ಯವನ್ನು ಮನಸ್ಸಿನಿಂದ ತೆಗೆದುಹಾಕಿ ವಚನಚಳವಳಿಯ ಮೂಲಕ ನವಸಮಾಜ ನಿರ್ಮಾಣಕ್ಕೆ ಸ್ತ್ರೀ ಪುರುಷರೆನ್ನದೆ ಎಲ್ಲರೂ ಸಮಾನರಾಗಿ ಕಾರ್ಯ ನಿರ್ವಹಿಸುತ್ತಾ ತಮ್ಮನ್ನು ತಾವು ತೊಡಗಿಸಿಕೊಂಡು, ಇತರರನ್ನೂ ತೊಡಗಿಸಿದರು.

ಹೀಗೆ ವಚನಚಳವಳಿಯ ಮೂಲ ಆಶಯವೂ ಕೂಡ ಸಮಾಜದಲ್ಲಿನ ಓರೆಕೋರೆಗಳನ್ನು ತಿದ್ದುತ್ತಾ ತಮ್ಮನ್ನು ತಾವು ಅರ್ಥೈಸಿಕೊಳ್ಳುವ ಮೂಲಕ ದೈವತ್ವಕ್ಕೆ ಏರುವುದಾಗಿತ್ತು.

ಅಡಿ ಟಿಪ್ಪಣಿ

೧. ಶಿವಶರಣೆಯರ ವಚನ ಸಂಪುಟ, ಸಂ. ಡಾ. ವೀರಣ್ಣ ರಾಜೂರ, ಪುಟ ಸಂಖ್ಯೆ – ೨೧೦, ವಚನ – ೬೬೧.

೨. ಸಾಹಿತ್ಯ ವಿಮರ್ಶೆ, ಸಂ. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಪುಟಸಂಖ್ಯೆ. ೧೨೯–೧೩೧

೩. ಬಸವ ಚೇತನ – ಸಂ. ಲೇಖಕ ಶರಣ ಟಿ.ಸಿ. ಗುಬ್ಬಿ ಹುಚ್ಚಪ್ಪ, ಪುಟ ೧೭೬

೪. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ. ಹೆಚ್.ಎಸ್. ಶ್ರೀಮತಿ, ಪುಟಸಂಖ್ಯೆ – ೯೨

೫. ಶಿವಶರಣೆಯರ ವಚನ ಸಂಪುಟ, ಪುಟಸಂಖ್ಯೆ – ೨೨೭, ವಚನ – ೬೯೬ (೬)ನೆಯ ವಚನ

೬. ಶಿವಶರಣೆಯರ ವಚನ ಸಂಪುಟ – ಪುಟಸಂಖ್ಯೆ – ೨೯೧, ವಚನ ೯೧೪ (೨೭) ನೆಯ ವಚನ

೭. ಶಿವಶರಣೆಯರ ವಚನ ಸಂಪುಟ, ಸಂ. ಡಾ. ವೀರಣ್ಣ ರಾಜೂರ, ಪುಟಸಂಖ್ಯೆ – ೧೯೯–೨೦೦, ವಚನ – ೬೨೭ (೫)ನೆಯ ವಚನ

೮. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ. ಡಾ. ಹೆಚ್.ಎಸ್. ಶ್ರೀಮತಿ, ಪುಟಸಂಖ್ಯೆ – ೧೦೬

೯. ವಚನ ಸಾಹಿತ್ಯ, ಸಂ. ಎಂ. ಚಿದಾನಂದಮೂರ್ತಿ, ಪುಟಸಂಖ್ಯೆ – ೯೧

೧೦. ವಚನ ಸಾಹಿತ್ಯ, ಸಂ. ಎಂ. ಚಿದಾನಂದಮೂರ್ತಿ, ಪುಟಸಂಖ್ಯೆ – ೧೩೭

೧೧. ವಚನ ಸಾಹಿತ್ಯ, ಸಂ. ಎಂ. ಚಿದಾನಂದಮೂರ್ತಿ, ಪುಟಸಂಖ್ಯೆ – ೮೯

೧೨. ವಚನ ಸಾಹಿತ್ಯ, ಸಂ. ಎಂ. ಚಿದಾನಂದಮೂರ್ತಿ, ಪುಟಸಂಖ್ಯೆ – ೮೯

ಅಧ್ಯಾಯ – ೩

ವಚನಕಾರ್ತಿಯರ ಹಿನ್ನೆಲೆ

ವಚನ ಚಳವಳಿಯಲ್ಲಿ ಎಲ್ಲರ ಗಮನವನ್ನು ತನ್ನ ಕಡೆ ಆಕರ್ಷಿಸಿದ ಅಂಶವೆಂದರೆ ವಚನಕಾರರು ಮತ್ತು ವಚನಕಾತಿಯರು ಕಾವ್ಯದ ಉದ್ದೇಶದಿಂದ ಬರೆದವರಲ್ಲ. ವಚನಕಾರ್ತಿಯರ ಹಿನ್ನೆಲೆಯೆಂದಾಗ ಅವರ ಮೌಲಿಕ ವಿಚಾರಗಳಾದ ಕಾಯಕ, ಲಿಂಗಭೇದ, ಜಾತಿ ವಿರೋಧ, ಆಚಾರ, ವ್ರತ, ನಿಷ್ಠೆ ಇನ್ನೂ ಮುಂತಾದ ವಿಚಾರಗಳ ಬಗೆಗೆ ವಚನಕಾರರೊಂದಿಗೆ ವಚನಕಾರ್ತಿಯರೂ ಕೂಡ ದನಿಗೂಡಿಸಿದರು.

ಮೇಲ್ವರ್ಗಕ್ಕೆ ಸೇರಿದ ವಚನಕಾರ್ತಿಯರಿಂದ ಹಿಡಿದು ಸೂಳೆ ಸಂಕವ್ವೆಯವರಗಿನ ಮೂವತ್ಮೂರು ವಚನಕಾರ್ತಿಯರನ್ನು ಕಾಣಬಹುದು.

ನಮಗೆ ದೊರೆತಿರುವ ವಚನಗಳನ್ನು ಆಧರಿಸಿ ಜಾತಿ, ವೃತ್ತಿ, ಮನೋಭಾವದ ಹಿನ್ನೆಲೆಯಲ್ಲಿ ವಚನಕಾರ್ತಿಯರನ್ನು ನಾವು ಗುರುತಿಸಿಕೊಳ್ಳಬಹುದಾಗಿದೆ.

ವಚನಕಾರ್ತಿಯರು:

೧. ಅಕ್ಕಮಹಾದೇವಿ

೨. ಅಕ್ಕಮ್ಮ

೩. ಅಮುಗೆ ರಾಯಮ್ಮ

೪. ಆಯ್ದಕ್ಕಿ ಲಕ್ಕಮ್ಮ

೫. ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ

೬. ಎಡೆ ಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ

೭. ಕದಿರ ಕಾಯಕದ ಕಾಳವ್ವೆ

೮. ಕದಿರ ರೆಮ್ಮವ್ವೆ

೯. ಕನ್ನಡಿ ಕಾಯಕದ ರೇಮಮ್ಮ

೧೦. ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ

೧೧. ಕಾಲಕಣ್ಣಿಯ ಕಾಮಮ್ಮ

೧೨. ಕೊಂಡೆಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ

೧೩. ಕೊಟ್ಟಣದ ಸೋಮಮ್ಮ

೧೪. ಗಂಗಾಬಿಕೆ

೧೫. ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ

೧೬. ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ

೧೭. ಗೊಗ್ಗವ್ವೆ

೧೮. ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ

೧೯. ದುಗ್ಗಳೆ

೨೦. ನಾಗಲಾಂಬಿಕೆ

೨೧. ನೀಲಮ್ಮ

೨೨. ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ

೨೩. ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ

೨೪. ಬೊಂತಾದೇವಿ

೨೫. ಮುಕ್ತಾಯಕ್ಕ

೨೬. ಮೋಳಿಗೆ ಮಹಾದೇವಿ

೨೭. ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮ

೨೮. ರೇವಣಸಿದ್ಧಯ್ಯಗಳ ಪುಣ್ಯಸ್ತ್ರೀ ರೇಕಮ್ಮ

೨೯. ಸತ್ಯಕ್ಕ

೩೦. ಸಿದ್ಧ ಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ

೩೧. ಸೂಳೆ ಸಂಕವ್ವೆ

೩೨. ಹಡಪದಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ

೩೩. ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ

೩.೧ ಜಾತಿ

ಶತ-ಶತಮಾನಗಳಿಂದಲೂ ಜಾತಿಯು ತನ್ನದೇ ಆದ ಪ್ರಾಮುಖ್ಯತೆಯನ್ನು ಸಮಾಜದಲ್ಲಿ ಪಡೆದುಕೊಂಡು ಬಂದಿರುವುದು ನಮಗೆ ತಿಳಿದೇ ಇದೆ. ಅದೇ ರೀತಿ ಜಾತಿಯಿಂದ ವಚನಕಾರ್ತಿಯರು ಸಹ ಹೊರತೇನಲ್ಲ. ಏಕೆಂದರೆ ಅತ್ಯಂತ ಕೆಳಜಾತಿಯಿಂದ ಬಂದಂತಹ ವಚನಕಾರ್ತಿಯರನ್ನೂ ನಾವು ಇಲ್ಲಿ ಕಾಣಬಹುದಾಗಿದೆ.

ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ :-

ಈಕೆ ದಲಿತ ವಚನಕಾರ್ತಿ. "ಉರಿಲಿಂಗ ಪದ್ದಿಗಳರಸ" ಎಂಬುದು ಈಕೆಯ ಅಂಕಿತ. ಒಟ್ಟು ೧೨೧ ವಚನಗಳು ದೊರೆತಿರುವುವು.

ಭಕ್ತನಾದ ವ್ಯಕ್ತಿಯ ಲಕ್ಷಣ ಹೇಗಿರಬೇಕು, ವ್ರತಾಚರಣೆಯ ಮಹತ್ವ, ಕಾಯಕ ನಿಷ್ಠೆ, ಈ ರೀತಿಯ ಅಂಶಗಳನ್ನು ಈಕೆಯ ವಚನಗಳಲ್ಲಿ ನಾವು ಕಾಣಬಹುದಾಗಿದೆ.

ಜಾತಿಯನ್ನು ಕುರಿತು ಪ್ರಶ್ನಿಸುವ ವಚನ ಈ ರೀತಿಯಿದೆ.

"ಕುರಿ ಕೋಳಿ ಕಿರಿಮೀನು ತಿಂಬವರಿಗೆಲ್ಲ ಕುಲಜ ಕುಲಕರೆಂದೆಂಬರು.

ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳು ಜಾತಿಯೆಂಬರು

ಅವರೆಂತು ಕೀಳುಜಾತಿಯಾದರು? ಜಾತಿಗಳು ನೀವೇಕೆ ಕೀಳಾಗಿರೊ?

ಬ್ರಾಹ್ಮಣನುಂಡುದು ಪುಲ್ಲಿಗೆ ಶೋಭಿತವಾಗಿ ನಾಯಿ ನೆಕ್ಕಿ ಹೋಯಿತು.

ಮಾದಿಗರುಂಡುದು ಪುಲ್ಲಿಗೆ ಬ್ರಾಹ್ಮಣಗೆ ಶೋಭಿತವಾಯಿತು.

ಅದೆಂತೆಂದಡೆ ಸಿದ್ಧಲಿಕೆಯಾಯಿತು. ಸಗ್ಗಳೆಯಾಯಿತು

ಸಿದ್ಧಲಿಕೆಯ ತುಪ್ಪವನು. ಸಗ್ಗಳೆಯ ನೀರನು

ಶುದ್ಧವೆಂದು ಕುಡಿದ ಬುದ್ಧಗೇಡಿ ವಿಪ್ರರಿಗೆ ನಾಯಕನರಕ ತಪ್ಪದಯ್ಯ,

ಉರಿಲಿಂಗಪೆದ್ದಿಗಳರಸು ಒಲ್ಲನವ್ವಾ [2]

ಈ ವಚನದಲ್ಲಿ ಕುಲ ಜಾತಿಯ ಬಗ್ಗೆ ಈ ರೀತಿಯಾಗಿ ಕೆಳವರ್ಗದ 'ಸ್ತ್ರೀ' ಪ್ರಶ್ನಿಸುವ ರೀತಿಯ ಒಂದು ರೀತಿ ಚಾಟಿಯ ಏಟು ಎಷ್ಟು ಚುರುಕೋ ಅದೇ ರೀತಿಯಲ್ಲಿನ ಚುರುಕು ಈ ವಚನದಲ್ಲಿ ಮೇಲ್ವರ್ಗದವರ ನಡೆವಳಿಕೆಯಲ್ಲಿನ ತಾರತಮ್ಯವನ್ನು ಕುರಿತ ಚಿಂತನೆಯನ್ನು ಇಲ್ಲಿ ಕಾಣಬಹುದಾಗಿದೆ. ಸಮಾಜದಲ್ಲಿನ ನಡೆವಳಿಕೆಯನ್ನು ಸ್ತ್ರೀ ಟೀಕಿಸುವಂತಹ ವಾತಾವರಣ ಹಿಂದೆಯಿತ್ತು ಎಂಬುದು ಹೆಚ್ಚು ಗಮನಾರ್ಹವಾದ ಅಂಶವಾಗಿದೆ.

ಕನ್ನಡಿ ಕಾಯಕದ ರೇವಮ್ಮ

"ಕ್ಷೌರಿಕ" ಜಾತಿಗೆ ಸೇರಿದ ಈಕೆಗೆ ರೇಮಮ್ಮ, ರೇಮ್ಮವ್ವೆ ಎಂಬ ನಾಮಾಂತರಗಳೂ ಇರುವುವು ಹಾಗೂ ಈಕೆಯ ಹೆಸರಿನ ವಿಶೇಷಣದಿಂದ ಈಕೆಯ ಜಾತಿಯನ್ನು ತಿಳಿಯಬಹುದಾಗಿದೆ.

"ಸದ್ಗುರು ಸಂಗ ನಿರಂಗಲಿಂಗ" ಎಂಬುದು ಇವಳ ಅಂಕಿತ. ಈಕೆಯ ಒಂದು ವಚನ ಮಾತ್ರ ದೊರೆತಿರುವುದು.

"ಕೈಯಲ್ಲಿ ಕನ್ನಡಿಯಿರಲು ತನ್ನ ತಾ ನೋಡಬಾರದೆ?

ಲಿಂಗಜಂಗಮದ ಪ್ರಸಾದಕ್ಕೆ ತಪ್ಪಿದಲ್ಲಿ ಕೊಲ್ಲಬಾರದೆ?

ಕೊಂದಡೆ ಮುಕ್ತಿಯಿಲ್ಲವೆಂಬವರ ಬಾಯಲ್ಲಿ

ಪಡಿಹಾರನ ಪಾದರಕ್ಷೆಯನಿಕ್ಕುವೆ

ಮುಂಡಿಗೆಯನೆತ್ತಿರೊ ಭ್ರಷ್ಟ ಭವಿಗಳಿರಾ !

ಎತ್ತಲಾರದವೆಡೆ ಸತ್ತ ಕುನ್ನಿ ನಾಯ ಬಾಲವ.

ನಾಲಿಗೆ ಮುರುಟಿರೋ ಸದ್ಗುರುಸಂಗ ನಿರಂಗಲಿಂಗದಲ್ಲಿ

ಈ ಮೇಲಿನ ವಚನದಲ್ಲಿ ವ್ರತವನ್ನು ತಪ್ಪಬಾರದು ಆಚಾರ ನಿಷ್ಠೆಗೆ ಕುಂದನ್ನು ಉಂಟುಮಾಡುವವರನ್ನು ಕುರಿತು ಇಲ್ಲಿ ರೇವಮ್ಮ ಟೀಕಿಸಿದ್ದಾಳೆ. ದೊರೆತಿರುವ ಒಂದು ವಚನದಲ್ಲಿ ಇಷ್ಟೆಲ್ಲ ತೀವ್ರವಾಗಿ ಮಾತನಾಡಿರುವ ರೇವಮ್ಮ ಇನ್ನೂ ಹೆಚ್ಚಿನ ವಚನಗಳು ರಚಿಸಿರುವಳೇನೊ? ಎನ್ನುವ ಭಾವನೆಯು ವಚನವನ್ನು ಓದಿದಾಗ ಉಂಟಾಗುತ್ತದೆ.

ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ

ಈಕೆಯ ಹೆಸರಿನ ಹಿಂದಿನ ವಿಶೇಷಣದಿಂದ ಹಾಗೂ ವಚನಗಳಲ್ಲಿನ ವಿಷಯದಿಂದ ತಿಳಿಯುವ ವಿಚಾರವೆಂದರೆ 'ಬಡಿಗ ಜಾತಿಗೆ' ಸೇರಿದವಳೆಂದು ಸ್ಪಷ್ಟಪಡುವುದು.

ಬಾಚಿಕಾಯಕದ ಬಸವಯ್ಯಗಳ ಪತ್ನಿಯಾಗಿದ್ದು ಇವಳು "ಕರ್ಮಹರ ಕಾಳೇಶ್ವರಾ" ಎಂಬ ಅಂಕಿತವನ್ನು ಹೊಂದಿದ್ದಳು. ಈಕೆಯ ಎರಡು ವಚನಗಳು ದೊರಕಿರುವಂತವು.

"ಕಾಯಕ ತಪ್ಪಿದಡೆ ಸೈರಿಸಬಾರದು

ವ್ರತ ತಪ್ಪಲೆಂತೂ ಸೈರಿಸಬಾರದು

ಕರ್ಮಹರ ಕಾಳೇಶ್ವರಾ"

ಇಲ್ಲಿ ತನ್ನ ವೃತ್ತಿಯ ಅನುಭವವನ್ನು ಆಧರಿಸಿ ವ್ರತವನ್ನು ತಪ್ಪಿ ನಡೆಯಬಾರದು ಕಾಯಕವನ್ನು ತಪ್ಪಿದಾಗ ಅದನ್ನು ತಾಳ್ಮೆಯಿಂದ ಸಹಿಸಿಕೊಳ್ಳಬಾರದು ಒಂದು ವೇಳೆ ಸಹಿಸಿಕೊಂಡಾಗ ಆಗುವ ಅಪಾಯ

"ಕೈ ತಪ್ಪಿ ಕೆತ್ತಲು ಕಾಲಿಗೆ ಮೂಲ

ಮಾತು ತಪ್ಪಿ ನುಡಿಯಲು ಬಾಯಿಗೆ ಮೂಲ

ವ್ರತಹೀನನ ನೆರೆಯಿರಲು ನರಕಕ್ಕೆ ಮೂಲ

ಕರ್ಮಹರ ಕಾಳೇಶ್ವರಾ"

ಈ ವಚನಗಳ ಮೂಲಕ ಮಾನವನ ನಡೆ-ನುಡಿಯನ್ನು ಆಧರಿಸುವ ವ್ರತ, ಮಾತಿನ ಮಹತ್ವವನ್ನು ಕುರಿತು ಚಿಂತನೆಯನ್ನು ನಡೆಸಿರುವುದನ್ನು ಕಾಣಬಹುದಾಗಿದೆ. ಬಡಿಗ ಜಾತಿಗೆ ಸೇರಿದ ಈಕೆ "ವ್ರತಹೀನನ ನೆರೆಯು ನರಕಕ್ಕೆ ಮೂಲ" ಎನ್ನುವಲ್ಲಿ ವ್ರತಹೀನ ತನ್ನ ಸುತ್ತಮುತ್ತಲಿದ್ದರೆ ಅದು ತಾನು ನರಕಕ್ಕೆ ಹೋಗಲು ಮೂಲ ಎನ್ನುವ ಆಕೆಯ ಮಾತಿನ ಒಳದನಿಯು ಯಾವುದೇ ಕಾರಣಕ್ಕೂ ವ್ರತವನ್ನು ತಪ್ಪಬಾರದು ಎಂಬುದಾಗಿ ಆಕೆಯ ವಚನದಲ್ಲಿನ ಅಂಶವನ್ನು ಮತ್ತು ಆಕೆಯ ಸಮಗ್ರ ಅಥವಾ ಸಮಷ್ಟಿ ಮತ್ತು ಸಮಯ ಪ್ರಜ್ಞೆಯನ್ನು ತಿಳಿಯಲು ಹಲವಾರು ವಚನಗಳು ಸಾಕ್ಷಿಯಾಗಿವೆ.

ಹಡಪದಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ

"ಕನಿಷ್ಠದಲ್ಲಿ ಹುಟ್ಟಿದೆ, ಉತ್ಸವದಲ್ಲಿ ಬೆಳೆದೆ,

ಸತ್ಯಶರಣರ ಪಾಠವಿಡಿದೆ.

ಆ ಶರಣರ ಪಾದವಿಡಿದು ಗುರುವ ಕಂಡೆ, ಲಿಂಗವ ಕಂಡೆ,

ಜಂಗಮವ ಕಂಡೆ, ಪಾದೋದಕವ ಕಂಡೆ, ಪ್ರಾಸಾದವ ಕಂಡೆ.

ಇಂತಿವರ ಕಂಡೆನ್ನ ಕಂಗಳ ಮುಂದಣ ಕತ್ತಲೆ ಹರಿಯಿತ್ತು

ಕಂಗಳ ಮುಂದಣ ಕತ್ತಲೆ ಹಿರಿಯೊಲೊಡನೆ,

ಮಂಗಳದ ಮಹಾಬೆಳಗಿನೊಳಗೋಲಾಡಿ ಸುಖಿಯಾದೆಯಯ್ಯ

ಅಪ್ಪಣ್ಣ ಪ್ರಿಯ ಚೆನ್ನವಸವಣ್ಣಾ [೪]

ಈ ವಚನವು ತಾನು ಕೀಳು ಕುಲದಲ್ಲಿ ಹುಟ್ಟಿ ಬಂದ ವಿಚಾರವನ್ನು ಲಿಂಗಮ್ಮ ಹೇಳುವಾಗ ಕೀಳು ಕುಲದ ಸೂತಕವನ್ನು ಶರಣರ ಸಂಗದಿಂದ ಕಳೆದುಕೊಳ್ಳುತ್ತಾಳೆ. ಅದನ್ನು ಯಾವುದೇ ಸಂಕೋಚವಿಲ್ಲದೆ ಮುಕ್ತವಾಗಿ ತನ್ನ ವಚನದಲ್ಲಿ ತಾನು ಅಂಧಕಾರದಿಂದ ಮಂಗಳದ ಮಹಾಬೆಳಗಿನೊಳಗೆ ಸುಖಿಸುವಂತೆ ಆದದ್ದು. ಸತ್ಯ ಶರಣರಿಂದ ಎಂಬುದನ್ನು ಮನಃಪೂರ್ವಕವಾಗಿ ಪ್ರಾಮಾಣಿಕವಾಗಿ ತನ್ನ ವಚನದಲ್ಲಿ ಮನಬಿಚ್ಚಿ ಹೇಳಿದ್ದಾಳೆ.

ಈಕೆಯ ೧೧೩ ವಚನಗಳು ದೊರೆತಿವೆ. ಅಷ್ಟೇ ಅಲ್ಲದೆ ಒಂದು ಮಂತ್ರಗೋಪ್ಯ ಹಾಗೂ ಒಂದು ಸ್ವರವಚನ ಸದ್ಯಕ್ಕೆ ಲಿಂಗಮ್ಮನ ಹೆಸರಿನಲ್ಲಿ ದೊರೆತಿರುವುದು. "ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣ" ಎಂಬುದು ಅಂಕಿತನಾಮ.

ಇವಳ ವಚನಗಳಲ್ಲಿ ಸಾಮಾನ್ಯಳಾದ ತಾನು ಅಸಾಮಾನ್ಯಕ್ಕೇರಿದ ಸಾಧನೆ, ಆಚಾರನಿಷ್ಠೆ ಮನಸ್ಸನ್ನು ನಿಗ್ರಹಿಸಲು ಬೇಕಾದ ವಿಧಾನ ಹೀಗೆ ಇನ್ನೂ ಅನೇಕ ಮೌಲಿಕ ಅಂಶವನ್ನು ಕುರಿತ ವಚನ ರಚನೆಯನ್ನು ಕಾಣಬಹುದಾಗಿದೆ.

೩.೨ ವೃತ್ತಿ

ಮಾನವನು ತನ್ನ ಜೀವನೋಪಾಯಕ್ಕೆ ಕೈಕೊಂಡ ವೃತ್ತಿಯಲ್ಲಿ ಯಾವುದೇ ರೀತಿಯ ತಾರತಮ್ಯವಿಲ್ಲ. ಅದು ಗೌರವಯುತವಾದುದು. 'ಅದು ಗುರುಲಿಂಗ ಜಂಗಮರಿಗಿಂತ ಹೆಚ್ಚು', "ಕಾಯಕದಲ್ಲಿ ಅಥವಾ ವೃತ್ತಿಯಲ್ಲಿ ನಿಷ್ಠೆಯುಳ್ಳವನಿಗೆ ಮತ್ತೆ ಬೇರೆ ಯಾವ ಸಾಧನೆಯೂ ಇಲ್ಲದೆ ಮುಕ್ತಿ ದೊರೆಯುತ್ತದೆ ಎಂಬುದು ವಚನಕಾರರ ಅಭಿಪ್ರಾಯ.

ವೃತ್ತಿಗಳು ಬೇರೆ ಬೇರಯಾಗಿದ್ದರೂ, ಆ ವೃತ್ತಿಯಿಂದ ಬರುವ ಲಾಭ-ನಷ್ಟ ಬೇರೆ-ಬೇರಯಾಗಿದ್ದರೂ ಪ್ರತಿಯೊಂದು ವೃತ್ತಿಗೂ ಬೆಲೆಯನ್ನು ನೀಡುವುದುರ ಮೂಲಕ ವಚನಕಾರ್ತಿಯರು ವೃತ್ತಿಯನ್ನು ಒಂದು ಮೌಲ್ಯವನ್ನಾಗಿಸಿದರು.

"ಮನ ಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ,
ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ
ಸದ್ಭಕ್ತರಿಗೆ ಎತ್ತ ನೋಡಿದಡತ್ತ ಲಕ್ಷಮಿ ತಾನಾಗಿಪ್ಪಳು,
ಮಾರಯ್ಯ ಪ್ರಿಯ ಅಮಳೇಶ್ವರಲಿಂಗದ ಸೇವೆಯುಳ್ಳನ್ನಕ್ಕ [೫]

ಇಲ್ಲಿ ಜೀವನ ಸಾಗಿಸುವುದಕ್ಕಾಗಿ ಕಾಯಕವನ್ನು ಕೈಕೊಳ್ಳಬೇಕು ಮತ್ತು ದಾಸೋಹ ಮಾಡುವುದಕ್ಕಾಗಿಯೂ ಕಾಯಕವನ್ನು ನಿರ್ವಹಿಸಬೇಕು. ಸ್ವತಃ ದುಡಿದು ಸಂಪಾದಿಸಿದ ಧನದಿಂದ ದಾಸೋಹ ಮಾಡಿದರೆ ಗುರುಲಿಂಗ ಜಂಗಮರು ತೃಪ್ತರಾಗುವರು. ಇಲ್ಲದಿದ್ದರೆ ತೃಪ್ತರಾಗುವುದಿಲ್ಲ.

ಒಟ್ಟಾರೆಯಾಗಿ ಕಾಯಕ ಮತ್ತು ದಾಸೋಹ ವಚನ ಚಳವಳಿಯು ನೀಡಿದ ಮಹತ್ವದ ಮೌಲ್ಯಗಳಾಗಿವೆ.

ಆಯ್ದಕ್ಕಿ ಲಕ್ಕಮ್ಮ

ಆಯ್ದಕ್ಕಿ ಮಾರಯ್ಯನ ಪತ್ನಿ ಆಯ್ದಕ್ಕಿ ಲಕ್ಕಮ್ಮ ಇವರು ಬಿದ್ದ ಅಕ್ಕಿಯನ್ನು ಆಯ್ದು ಜಂಗಮ ದಾಸೋಹ ಮಾಡುವ ಕಾಯಕವನ್ನು ನಿರ್ವಹಿಸುತ್ತಿದ್ದರು. ಈಕೆ ಕಾಯಕಕ್ಕೆ ಹೆಚ್ಚಿನ ಮಹತ್ವ ನೀಡಿದ್ದಳು ಎಂಬುದು ನಮಗೆ ತಿಳಿಯುವುದು. ಈ ರೀತಿಯಾಗಿ, ಪತಿಯಾದ ಆಯ್ದಕ್ಕಿ ಮಾರಯ್ಯ, ಅನುಭಾವಗೋಷ್ಠಿಯಲ್ಲಿ ಮೈಮರೆತಾಗ, "ಕಾಯಕ ನಿಂದಿತು ಹೋಗಯ್ಯ ಎನ್ನಾಳ್ದನೆ"[೬] ಎಚ್ಚರಿಸುವಲ್ಲಿ ಆಕೆಯಲ್ಲಿನ "ಸಮಯ ಪ್ರಜ್ಞೆಯನ್ನು" ಹಾಗೂ ಸ್ತ್ರೀಯಲ್ಲಿ ಎಚ್ಚರ ಸ್ಥಿತಿ ಮಹತ್ವವಾದದ್ದಾಗಿದೆ.

ಲಕ್ಕಮ್ಮ ಮಾನವನ ಮನಸ್ಸಿನ ಶುದ್ಧತೆ ಇಲ್ಲದಾದಾಗ ವಸ್ತುಪಿಗೆ ಕೊರತೆಯಿರುವುದೂ ಮನಸ್ಸು ಪರಿಶುದ್ಧವಾಗಿಟ್ಟುಕೊಂಡು ವೃತ್ತಿಯನ್ನು ನಿರ್ವಹಿಸಿದರೆ ಲಕ್ಷ್ಮಿತಾನಾಗಿ ಒಲಿಯುತ್ತಾಳೆ ಎನ್ನುತ್ತಾ ಯಾವುದೇ ವೃತ್ತಿಯಾದರೂ ಕೂಡ ಅದನ್ನು ನಿಷ್ಠೆಯಿಂದ ನಿರ್ವಹಿಸಿದರೆ ಫಲ ತಾನಾಗಿಯೆ ದೊರಕುವುದು ಅಂದರೆ ಆತನಿಗೆ ಮೋಕ್ಷ ದೊರೆಯುವುದು. ದೈವ ಸಾಕ್ಷಾತ್ಕಾರವಾಗುವುದು. ಶುದ್ಧತೆಗೆ ಹೆಚ್ಚಿನ ಒತ್ತನ್ನು ನೀಡಿರುವಳು.

ಕದಿರ ಕಾಯದ ಕಾಳವ್ವೆ

ಈಕೆಯ ಕಾಲ ೧೧೬೦, ರಾಟಿಯಿಂದ ನೂಲು ತೆಗೆಯುವ ವೃತ್ತಿಯನ್ನು ಈಕೆಯು ನಿರ್ವಹಿಸುತ್ತಿದ್ದಳು. "ಗುಮ್ಮೇಶ್ವರ" ಎಂಬುದು ಅಂಕಿತನಾಮ, ಈಕೆಯ ಒಂದು ವಚನ ಮಾತ್ರ ದೊರೆತಿರುವುದು. ವ್ರತನಿಷ್ಠೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿರುವಳು.

ಕದಿರ ರೇಮ್ಮವ್ವೆ

ಈಕೆಯೂ ಕೂಡ 'ರಾಟಿ'ಯಿಂದ ನೂಲು ತೆಗೆಯುವ ವೃತ್ತಿಯನ್ನು ನಿರ್ವಹಿಸುವವಳು. ರೇಮ್ಮವ್ವೆಯ ನಾಲ್ಕು ವಚನಗಳು ಮಾತ್ರ ದೊರಕಿರುವವು. ಇವಳ ಅಂಕಿತ "ಕದಿರರೆಮ್ಮಿಯೊಡೆಯ ಗುಮ್ಮೇಶ್ವರ" ಎನ್ನುವುದು.

ಎರಡು ವಚನಗಳಲ್ಲಿ ಸತಿ–ಪತಿ ಭಾವ ವ್ಯಕ್ತವಾಗಿದೆ. ಒಂದರಲ್ಲಿ ಶರಣಸ್ತುತಿ. ಮತ್ತೊಂದರಲ್ಲಿ ಕಾಯಕದ ಮಾಹಿತಿ ಅಡಕವಾಗಿದೆ. ಈಕೆಯ ಮೂರು ವಚನಗಳು ಬೆಡಗಿನ ವಚನಗಳಿಗೆ "ಸಿಂಗಳದ ಸಿದ್ಧ ಬಸವರಾಜ ಟೀಕೆಯನ್ನು ಬರೆದಿದ್ದಾನೆ ಎಂಬ ಅಂಶವು ವಚನಕಾರ್ತಿಯರ ಸಂಪುಟದ ಪ್ರಸ್ತಾವನೆಯಲ್ಲಿ ತಿಳಿಯುವುದು.

"ಎಲ್ಲರ ಗಂಡಂದಿರು ಪರದಳವಿಭಾಡರು

ಎನ್ನ ಗಂಡ ಮನದಳ ವಿಭಾಡ

ಎಲ್ಲರ ಗಂಡಂದಿರು ಗಜವೇಂಟಿಕಾರ

ಎಲ್ಲರ ಗಂಡಂದಿರು ತಂದಿಕ್ಕಿಸಿಕೊಂಬರು

ಎನ್ನ ಗಂಡ ತಾರದೆ ಇಕ್ಕಿಸಿಕೊಂಬ

ಎಲ್ಲರ ಗಂಡಂದಿರಿಗೆ ಮೂರು

ಎನ್ನ ಗಂಡಂಗೆ ಅದೊಂದೆ

ಅದೊಂದು ಸಂದೇಹ, ಕದಿರರೆಮ್ಮಿಯೊಡೆಯೆ ಗುಮ್ಮೇಶ್ವರಾ

ಇಲ್ಲಿ ಮುಖ್ಯವಾಗಿ ಇಹದ ಪತಿಯರನ್ನು ಹೊಂದಿರುವ ನಾರಿಯರಿಗೂ, ಪರದೈವವನ್ನು ಪತಿಯಾಗಿಸಿಕೊಂಡಿರುವ ರೇವಮ್ಮಗೂ ಅಂತರವನ್ನು ಕುರಿತು ಚಿಂತನೆ ನಡೆದಿರುವುದು ಇಲ್ಲಿನ ಗಮನಾರ್ಹ ವಿಚಾರವಾಗಿದೆ. ಇಲ್ಲಿನ ಒಂದು ವಿಚಾರವೆಂದರೆ ಎಲ್ಲರ ಗಂಡಂದಿರು ತಂದಿಕ್ಕಿಸಿಕೊಂಬರು ಎನ್ನ ಗಂಡ ತಾರದೆ ಇಕ್ಕಿಸಿಕೊಂಬ ಎನ್ನುವಲ್ಲಿ ಈಕೆ ವಿಚಾರಮಂಥನವನ್ನು ಆಕೆಯ ಆಲೋಚನೆಯನ್ನು ಮನಗಾಣಬಹುದಾಗಿದೆ.

ಕಾಲಕಣ್ಣಿಯ ಕಾಮಮ್ಮ

ಕವಿ ಚಿಂತೆಕಾರರ ಪ್ರಕಾರ ಈಕೆಯ ಕಾಲ ಸು. ೧೫೦೦. ಆದರೆ "ಸಕಲ ಪುರಾತನರ ವಚನಗಳ ಕಟ್ಟುಗಳಲ್ಲಿ ಬಸವಾದಿ ಶರಣರ ಸಮಕಾಲೀನ ಶರಣೆಯರ ಜೊತೆಗೆ ಈಕೆಯ ವಚನವೂ ಸೇರಿಕೊಂಡಿರುವುದರಿಂದ ಇವಳೂ ಬಸವಾದಿಗಳ ಕಾಲದವಳೆಂದೆ ಹೇಳಬಹುದಾಗಿದೆ.

"ನಿರ್ಭೀತ ನಿಜಲಿಂಗ" ಈಕೆಯ ಅಂಕಿತ. ಕಾಮಮ್ಮನ ವ್ಯಕ್ತಿತ್ವವನ್ನು ಆಕೆಯಲ್ಲಿ ಮನೆಮಾಡಿಕೊಂಡಿರುವ ಆತ್ಮವಿಶ್ವಾಸ. ಅವಳ ಸಶಕ್ತವಾದ ಭಾಷಾ ಅಭಿವ್ಯಕ್ತಿ ಕ್ರಮವನ್ನು ಈ ವಚನವಲ್ಲಿ ಗುರುತಿಸಬಹುದಾಗಿದೆ.

"ಎನ್ನ ಕರಣಂಗಳ ಲಿಂಗದಲ್ಲಿ ಕಟ್ಟುವೆ;

ಗುರುಲಿಂಗ ಜಂಗಮದ ಕಾಲ ಕಟ್ಟುವೆ;

ವ್ರತಭ್ರಷ್ಟರ ನಿಟ್ಟೊರಸುವೆ, ಸುಟ್ಟು ತುರುತುರನೆ ತೂರುವೆ,

ನಿರ್ಭೀತಿ ನಿಜಲಿಂಗದಲ್ಲಿ [2]

–ಈಕೆಯು ಕೂಡ ವೃತ್ತಿಭ್ರಷ್ಟರನ್ನು ಸುಟ್ಟು, ಧಾನ್ಯವನ್ನು ಗಾಳಿಗೆ ತೂರುವಂತೆ ತೂರುವೆ ಎಂಬುದಾಗಿ ಈ ಮೇಲಿನ ವಚನದಲ್ಲಿ ಹೇಳಿರುವಳು.

ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲೆ

ಕುಂಬರ ಗುಂಡಯ್ಯನ ಸತಿ ಪುಣ್ಯಸ್ತ್ರೀ ಕೇತಲೆ, ಪತಿಯ ಜೊತೆ ಗಡಿಗೆಯನ್ನು ಸಿದ್ಧಪಡಿಸುವ ಕಾಯಕದಲ್ಲಿ ತೊಡಗಿದ್ದಳು.

ಈಕೆಯ ಎರಡು ವಚನಗಳು ಮಾತ್ರ ದೊರೆತಿವೆ. ಕುಂಭೇಶ್ವರ ಅಥವಾ ಕುಂಭೇಶ್ವರ ಲಿಂಗ ಎಂಬ ಅಂಕಿತವನ್ನು ಹೊಂದಿದ್ದಾಳೆ.

"ಹದಮಣ್ಣಲ್ಲದೆ ಮಡಿಕೆಯಾಗಲಾರದು

ವ್ರತಹೀನನ ಬೆರೆಯಲಾಗದು

ಬೆರೆದಡೆ ನರಕ ತಪ್ಪದು

ನಾನೊಲ್ಲೆ ಬಲ್ಲೆನಾಗಿ ಕುಂಭೇಶ್ವರಾ"

ಈ ವಚನದಲ್ಲಿ ವೃತ್ತಿ ಪರಿಭಾಷೆಯನ್ನು ಬಳಸಿ ವ್ರತಭ್ರಷ್ಟರೊಡನೆ ಬೆರೆಯಬಾರದೆಂದು ಒಂದು ವೇಳೆ ಅವರೊಂದಿಗೆ ಬೆರೆತರೆ ಅಂತವರಿಗೆ ನರಕವೆಂಬುದು ತಪ್ಪುವುದಿಲ್ಲ. ಎಂಬುದಾಗಿ ತಿಳಿಸುವ ಅವಳ ವೃತ್ತಿ, ವ್ರತನಿಷ್ಠೆಯನ್ನು ಕಾಣಬಹುದಾಗಿದೆ.

ದುಗ್ಗಳೆ :- ಆದ್ಯ ವಚನಕಾರ ಜೇಡರ ದಾಸಿಮಯ್ಯನ ಮಡದಿ ದುಗ್ಗಳೆ. ಈಕೆ ಆದ್ಯವಚನಕಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರಳಾದವಳು. ಸತಿ-ಪತಿಗಳು, ಆದರ್ಶ ದಾಂಪತ್ಯಕ್ಕೆ ಮಾದರಿಯಾಗಿ ಶರಣರಿಂದ ಮನ್ನಣೆ ಪಡೆದಿದ್ದಾರೆ.

ಜೇಡರ ದಾಸಿಮಯ್ಯ ದುಗ್ಗಳೆಯರ ಕಾಯಕನಿಷ್ಠೆ, ಶಿವಭಕ್ತಿಯನ್ನು ಬಸವಣ್ಣ, ಕೋಲಶಾಂತಯ್ಯ, ಸತ್ಯಕ್ಕ ಮುಂತಾದ ಹಲವಾರು ಶರಣರು ಪ್ರಶಂಸಿದ್ದಾರೆ. [೮]

"ಬಟ್ಟೆ ನೇಯುವ" ವೃತ್ತಿಯನ್ನು ನಿರ್ವಹಿಸುತ್ತಿದ್ದರು. "ದಾಸಯ್ಯ ಪ್ರಿಯ ರಾಮನಾಥ" ಎಂಬ ಅಂಕಿತನಾಮ. ಈಕೆಯ ಎರಡು ವಚನಗಳು ದೊರೆತಿರುವವು.

ಗುರುಲಿಂಗ, ಜಂಗಮ ಭಕ್ತಿ ಶಿವಶರಣರಾದ ಬಸವಣ್ಣ, ಅಜಗಣ್ಣ ಪ್ರಭುದೇವ ಎಂದು ಈ ರೀತಿ ಆಧ್ಯಾತ್ಮಿಕತೆಯನ್ನು ಭಕ್ತಿಯಿಂದ ತನ್ನ ವಚನದಲ್ಲಿ ತಂದಿದ್ದಾಳೆ.

"ಇಂತಿವರ ಕಾರುಣ್ಯ ಪ್ರಸಾದವ ಕೊಂಡು

ಹತ್ತ ಹಾಗಿರಬೇಕಲ್ಲದೆ ತತ್ವದ ಮಾತು ಎನಗೇಕಯ್ಯಾ"

ಎಂದು ತನ್ನ ಭಕ್ತಿಯ ನಿಲುವನ್ನು ಈ ರೀತಿಯಲ್ಲಿ ಸ್ಪಷ್ಟಪಡಿಸಿದ್ದಾಳೆ. [೯]

ಒಟ್ಟಾರೆಯಾಗಿ ದುಗ್ಗಳೆಯದಲ್ಲಿ ವೈಚಾರಿಕತೆಯನ್ನು ನಾವು ಕಾಣಲು ಸಾಧ್ಯವಾಗುವುದು ಹೇಗೆಂದರೆ ರಾಮನಾಥ ವಿವಾಹ ಮಾಡಿಕೊಳ್ಳಲು ಒಡ್ಡಿದ ಶರತ್ತನ್ನು ಈ ಕಬ್ಬಿನ ಹಾಲು ಮತ್ತು ಆ ಜಲ್ಲೆಯಿಂದ ಪಾಯಸವನ್ನು ಮಾಡುವಲ್ಲಿ ತೋರಿದ ವಿಚಾರವಂತಿಕೆಯಿಂದ ಅಂದಿನ ಕಾಲದಲ್ಲಿ ದುಗ್ಗಳೆಯಂತೆಯೇ ಹಲವಾರು ಸ್ತ್ರೀಯರು ಹಲವಾರು ವಿಚಾರಗಳನ್ನು ತಿಳಿದಿದ್ದರು. ಅಥವಾ ಬೌದ್ಧಿಕವಾಗಿ ಕುಶಲಮತಿಯಾಗಿದ್ದರು ಎನ್ನಬಹುದಾಗಿದೆ.

ಮೋಳಿಗೆ ಮಹಾದೇವಿ:-

ಮೂಲ ಹೆಸರು - ಮಹಾದೇವ ಭೂಪಾಲ - ಗಂಗಾದೇವಿ ಆ ನಂತರದಲ್ಲಿ ಮೋಳಿಗೆ ಮಾರಯ್ಯ ಮೋಳಿಗೆ ಮಹಾದೇವಿಯಾದದ್ದು, ಸತಿ-ಪತಿಗಳು ಅಪರೂಪದ ದಂಪತಿಗಳಾಗಿರ್ಧಧರು ಹಾಗೂ ಸಾಹಿತ್ಯದ ಸಂಗಾತಿಗಳಾಗಿದ್ದರು.

ಇವರು ಕಟ್ಟಿಗೆಯನ್ನು ಮಾರುವ ಕಾಯಕವನ್ನು ಕೈಕೊಂಡಿದ್ದರೆಂದು ಶಿವಶರಣೆಯರ ವಚನ ಸಂಪುಟದಿಂದ ತಿಳಿದು ಬರುವುದು.

ಕಟ್ಟಿಗೆಯನ್ನು ಮಾರುವ ಕಾಯಕವನ್ನು ನಿರ್ವಹಿಸಿದರೂ ಕೂಡ ಕಾಶ್ಮೀರದಲ್ಲಿ ನಿತ್ಯ ಆರು ಸಾವಿರ ಜಂಗಮರಿಗೆ ದಾಸೋಹ ಮಾಡುತ್ತ ಶಿವಭಕ್ತಿಯನ್ನು ಆಚರಿಸುತ್ತಿದ್ದರು.

ಬಸವಣ್ಣನ ಕೀರ್ತಿಯನ್ನು ತಿಳಿದು ಕಲ್ಯಾಣಕ್ಕೆ ಬರುತ್ತಾರೆ. ಅನಂತರ ಮಾರಯ್ಯ - ಮಹಾದೇವಿ ಎಂಬ ಹೆಸರನ್ನು ಧರಿಸಿ ಕಟ್ಟಿಗೆ ಮಾರಿ ದಾಸೋಹ ಕಾರ್ಯವನ್ನು ಕಲ್ಯಾಣದಲ್ಲಿ ಮುಂದುವರಿಸುತ್ತಾರೆ. ಈಕೆಯ ೬೯ ವಚನಗಳು ದೊರೆತಿವೆ. "ಎನ್ನಯ್ಯ ಪ್ರಿಯೆ ನಿಃಕಳಂಕ ಮಲ್ಲಿಕಾಜುನ" ಎಂಬ ಅಂಕಿತವನ್ನು ಹೊಂದಿದ್ದಳು.

ಈಕೆಯ ವಚನಗಳಿಂದ ವೃತ್ತಿಗೆ ಹೆಚ್ಚಿನ ಮಹತ್ವವನ್ನು ನೀಡುತ್ತಾ ಇದ್ದದನ್ನು ತಿಳಿಯ ಬಹುದಾಗಿದೆ. ತನ್ನ ಸಂವೇದನೆಯಲ್ಲಿ, ತನ್ನ ಮನಸ್ಸಿನ ತೀವ್ರತೆಗೆ ಅನುಗುಣವಾಗಿ ಭಾವನೆಗಳನ್ನು ಅಭಿವ್ಯಕ್ರಿಸಿರುವುದನ್ನು ಈ ವಚನದಿಂದ ತಿಳಿಯಲು ಸಾಧ್ಯವಾಗುತ್ತದೆ.

"ಆವ ಬೀಜವ ಬಿತ್ತಿದಡೂ

ಪೃಥ್ವಿಗೆ ಬೇರು, ಬಯಲಿಮಗೆ ಶಾಖೆ ತಲೆದೋರಿ ಬೆಳೆವಂತೆ

ಐಕ್ಯಕ್ಕೆ ಮರೆ, ಕ್ರೀಗೆ ಬಾಹ್ಯ,

ಉಭಯದ ಭೇದವುಳ್ಳನ್ನಕ್ಕ ಭಕ್ತಿಯ ಹೋರಾಟ ಬಿಡದು

ಎನ್ನಯ್ಯ ಪ್ರಿಯೆ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನಾ

ಮಣಿಯುಳ್ಳನ್ನಕ್ಕಪವಣಿಕೆಯ ಹಂಗು ಬಿಡದು [೧೦]

ರಾಯಸದ ಮಂಚ್ಚಣ್ಣಗಳ ಪುಣ್ಯಸ್ತ್ರೀ ರಾಯಮ್ಮ :-

ಬಸವಣ್ಣನ ಸಮಕಾಲೀನನಾದ ರಾಯಸದ ಮಂಚ್ಚಣ್ಣ ಬಸವಣ್ಣನ ಪತ್ರ ವ್ಯವಹಾರವನ್ನು ನಿರ್ವಹಿಸುವ ಆಪ್ತ ಕಾರ್ಯದರ್ಶಿಯಾಗಿದ್ದ. ಈತನ ಪತ್ನಿ ಪುಣ್ಯಸ್ತ್ರೀ ರಾಯಮ್ಮ. ಇವಳು ಕೂಡ ಪತಿಯೊಡನೆ ಅನುಭಾವಗೋಷ್ಠಿಯಲ್ಲಿ ಭಾಗವಹಿಸುತ್ತಿದ್ದಳು.

ಅಮುಗೇಶ್ವರ ಲಿಂಗ ಎಂಬ ಅಂಕಿತವನ್ನು ಹೊಂದಿದ್ದು ಒಂದು ವಚನಮಾತ್ರ ದೊರೆತಿರುವುದು.

ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ :-

"ಆವ ಕಾಯಕವ ಮಾಡಿದಡೂ ಒಂದೆ ಕಾಯಕವಯ್ಯಾ

ಆವ ವ್ರತವಾದಡೂ ಒಂದೆ ವ್ರತವಯ್ಯಾ

ಆಯ ತಪ್ಪಿದಡೆ ಸಾವಿಲ್ಲ; ವ್ರತ ತಪ್ಪಿದೆಡೆ ಕೊಡಲಿಲ್ಲ

ಕಾಕಪಿಕದಂತೆ ಕೊಡಲು ನಾಯಕನರಕ

ಗಂಗೇಶ್ವರ ಲಿಂಗದಲ್ಲಿ !

ಈ ವಚನದಲ್ಲಿ ವ್ರತವನ್ನು ತಪ್ಪಿನಡೆದರೆ ಕೋಗಿಲೆ ಕಾಗೆಯ ಸಂಗವನ್ನು ಬೆಳೆಸಿದ್ದಂತೆ. ಆತ್ಮಸಾಕ್ಷಿಗೆ ಸರಿಯಾಗಿ ಕಾರ್ಯವನ್ನು ನಿರ್ವಹಿಸದಿದ್ದರೆ, ಅಂತಹ ವ್ರತಹೀನರಿಗೆ ಘೋರವಾದ ನರಕ ತಪ್ಪಿದ್ದಲ್ಲವಾಗಿದೆ. ಕಾಯಕ ಎಂಬುದರಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಎಲ್ಲಾ ಕಾಯಕವೂ ಒಂದೇ ಎಂಬುದಾಗಿ ಇಲ್ಲಿ ತಿಳಿಸುತ್ತಾಳೆ.

ಅಕ್ಕಮ್ಮ :-

ವಚನಕಾರರ ಸಮಕಾಲೀನಳು – ೧೧೬೦ ಈಕೆಯ ಕಾಲ. ರಾಮೇಶ್ವರಲಿಂಗ ಎಂಬುದು ಈಕೆಯ ಅಂಕಿತ. ೧೫೩ ವಚನಗಳು ದೊರೆತಿರುವವು.

ಅಕ್ಕಮಹಾದೇವಿ ತನ್ನ ವಚನಗಳ ಸಂಖ್ಯೆಯಿಂದ ಮೊದಲಸ್ಥಾನ ಪಡೆಯುವಳು. ಆನಂತರದ ಸ್ಥಾನವನ್ನು ಅಂದರೆ ಎರಡನೇ ಸ್ಥಾನದಲ್ಲಿ ಅಕ್ಕಮ್ಮನ ಹೆಚ್ಚು ವಚನಗಳನ್ನು ಗುರುತಿಸಬಹುದಾಗಿದೆ.

ಅಕ್ಕಮ್ಮ ವ್ರತಾಚಾರಗಳಿಗೆ ವಿಶೇಷ ಗಮನವನ್ನು ಕೊಟ್ಟಿರುವಳು. ಅಷ್ಟೇ ಪ್ರಾಮುಖ್ಯತೆ ಮತ್ತು ನಿಷ್ಠೆಯಿಂದ ಕಾಯಕವನ್ನು ನಿರ್ವಹಿಸಬೇಕು ಎನ್ನುತ್ತಾಳೆ.

"ತಾ ಮಾಡುವ ಕೃಷಿಯ ಮಾಡುವನ್ನ ಬರಮಾಡಿ,

ಕೃಷಿ ತೀರಿದ ಮೇಲೆ ಮತ್ತೆ ಗುರುದರ್ಶನದ ಲಿಂಗಪೂಜೆ– ಜಂಗಮಸೇವೆ.

ಶಿವಭಕ್ತರ ಸುಖ ಸಂಭಾಷಣೆ ಶರಣರ ಸಂಗ

ಈ ನೇಮವನರಿವುತಿಪ್ಪುದು ಸದ್ಭಕ್ತನ ಸದಾತ್ಮನ ಯುಕ್ತಿ"

ಮನುಷ್ಯನಾದವನು ತಾನು ಮಾಡುವ ಕಾಯಕಕ್ಕೆ ಮೊದಲ ಆದ್ಯತೆಯನ್ನು ನೀಡಬೇಕು. ಅನಂತರ ಲಿಂಗಪೂಜೆ, ಜಂಗಮಸೇವೆ, ಶಿವಭಕ್ತರಲ್ಲಿ ಅವರ ಸುಖ–ದುಃಖವನ್ನು ಅರಿಯುವುದು ಬುದ್ಧಿವಂತರ ಲಕ್ಷಣವೆಂದಿದ್ದಾಳೆ.

ಅಮ್ಮುಗೆ ರಾಯಮ್ಮ :–

ವಚನಕಾರ್ತಿಯರಲ್ಲಿ ಹೆಚ್ಚು ವಚನಗಳು ದೊರೆತಿರುವವು. ಅಕ್ಕಮಹಾದೇವಿ, ಅಕ್ಕಮ್ಮನ ನಂತರದ ಸ್ಥಾನ. 'ಅಮ್ಮುಗೆ ರಾಯಮ್ಮನದು' ಈಕೆಯ ೧೧೫ ವಚನಗಳು ದೊರೆತಿರುವವು.

ಅಮ್ಮುಗೆ ದೇವಯ್ಯನ ಪತ್ನಿ ಇವಳು. ನೇಯ್ಗೆಯ ವೃತ್ತಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಅಲ್ಲದೆ ಈ ದಂಪತಿಗಳು "ಅನುಭವ ಮಂಟಪದ ಸದಸ್ಯರಾಗಿ ಅನುಭಾವಗೋಷ್ಠಿಯಲ್ಲಿ ಪಾಲ್ಗೊಳ್ಳುತ್ತಿದ್ದರು.

"ಎನ್ನ ಕಾಯಕದಲ್ಲಿಪ್ಪ ಕರ್ಮವ ತೊಡೆಯಯ್ಯ

ಎನ್ನ ಭಾವದಲ್ಲಿಪ್ಪ ಭ್ರಮೆಯ ಜರಿಯಯ್ಯ

ನಾ ಹಿಡಿದ ಛಲವ ಬಿಡಿದರು ಮನವೆ"

ನೆಯ್ಗೆಯ ಕಾಯಕದಲ್ಲಿ ತೊಡಗಿದರೂ ಕೂಡ ಬೌದ್ಧಿವಾಗಿ ಆಕಾಶದ ಎತ್ತರಕ್ಕೇರಿರುವ ಈಕೆಯು ವಿಚಾರಮಂಥನವನ್ನು ವಚನಗಳಲ್ಲಿ ಕಾಣಬಹುದಾಗಿದೆ. ಮನಸ್ಸಿನಲ್ಲಿ ಅಶುದ್ಧತೆಯನ್ನು ತೆಗೆದು,

ನಿರ್ಮಲವಾದ ಭಾವನೆಯನ್ನು ಹೊಂದಿ ಛಲದಿಂದ

ಮುನ್ನಡೆದಾಗ ಅಂತಹ ಕಾರ್ಯದಲ್ಲಿ ಯಶಸ್ಸನ್ನು

ಸಾಧಿಸಬಹುದು, ಎಂಬುದಾಗಿ ತನ್ನ ವಚನಗಳಲ್ಲಿ ಅಭಿವ್ಯಕ್ತಿಸಿದ್ದಾಳೆ.

ಅಮ್ಮುಗೆ ರಾಯಮ್ಮ ಧೈರ್ಯ ಛಲ ಮತ್ತು ನಿಷ್ಠುರತೆಗಳನ್ನು ತನ್ನಲ್ಲಿ ಮೈಗೂಡಿಸಿಕೊಂಡಿದ್ದಂತವಳು.

"ಅರಿವುಳ್ಳರಿಗೆ ಗುರಿವಿನ ಹಂಗೇಕೆ?

ಅರಿವುಳ್ಳವರಿಗೆ ಲಿಂಗದ ಹಂಗೇಕೆ"

ಇಲ್ಲಿ ಅತ್ಯಂತ ನೇರವಾದ ತೀವ್ರ ನುಡಿಯನ್ನು ವಚನಗಳಲ್ಲಿ ಬಳಸಿಕೊಂಡಿರುವುದರಿಂದ ಈಕೆಯಲ್ಲಿನ ಭಾಷೆಯ ಪಾಂಡಿತ್ಯ ಮತ್ತು ಬದುಕಿನಲ್ಲಿನ ಈಕೆಯ ಸಂವೇದನೆಯ ಪ್ರಮಾಣವನ್ನು ವಚನಗಳಲ್ಲಿ ಕಾಣಬಹುದಾಗಿದೆ.

ಗೊಗ್ಗವ್ವೆ :-

ಶಿವಭಕ್ತರಿಗೆ ಧೂಪ ಅರ್ಪಿಸುವ ಕಾಯಕವನ್ನು ನಿರ್ವಹಿಸುತ್ತಿದ್ದ ಈಕೆಯ ಅಂಕಿತ ನಾಸ್ತಿನಾಥ ಎಂಬುದು ಈಕೆಯ ೬ ವಚನಗಳು ನಮಗೆ ದೊರೆತಿರುವವು.

ಬಾಲ್ಯದಿಂದಲೂ ಕೂಡ ಶಿವನ ಪೂಜೆ ನಿತ್ಯ ನೇಮಗಳನ್ನು ಸತ್ಯದಿಂದ ಮಾಡಿ ಅರಿಯಬೇಕು. ಇಲ್ಲವಾದರೆ, ಶಿವನ ಸಾಕ್ಷಾತ್ಕಾರ ಎಂಬುದು ಸಾಧ್ಯವಿಲ್ಲ ಎನ್ನುವಳು.

“ಕೊಡುಗೊಲು ಚೆರಮರಾಯ” ದೊರೆ ಕೈಲಾಸ ದಾರಿ ಹುಡುಕುತ್ತ, ಹೊರಟ ಆತನಿಗೆ, ಧೂಪದ ಕಾಯಕವನ್ನು ನಿಷ್ಠೆಯಿಂದ ನಿರ್ವಹಿಸುತ್ತಿದ್ದ ಈಕೆ “ಧೂಪದ ಮೂಲಕವೆ ಆತನಿಗೆ ಕೈಲಾಸದ ದಾರಿಯನ್ನು” ತೋರುವ ಈಕೆಯ ಕಾಯುಕದಲ್ಲಿನ ಪವಿತ್ರತೆಯನ್ನು ನಿಷ್ಠೆಯಲ್ಲಿನ ಅಧ್ಯಾತ್ಮಿಕತೆಯನ್ನು ನಾವು ಅರಿಯಲು ಸಾಧ್ಯವಾಗುತ್ತದೆ. ‘ಸ್ತ್ರೀ’ಗೆ ಒಂದು ಸ್ಥಳದಲ್ಲಿಯೇ ನಿಂತು, ಶಿವನ ಮಾರ್ಗವನ್ನು ತೋರುವ ಅಸಾಧಾರಣ ವ್ಯಕ್ತಿತ್ವ ಹೊಂದಿದ ವಚನಕಾರ್ತಿಯರಿಂದ ವಚನ ಸಾಹಿತ್ಯದ ಶ್ರೀಮಂತಿಕೆಗೆ ಗರಿಮೂಡಿರುವುದು.

ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ :-

‘ಅಗಜೇಶ್ವರಲಿಂಗ’ ಎಂಬ ಅಂಕಿತವನ್ನು ಹೊಂದಿರುವಳು. ಈಕೆಯು ಕೊಂಡೆ ಮಂಚಣ್ಣಗಳ ಪತ್ನಿ ಲಕ್ಷ್ಕಮ್ಮನ ಒಂದು ವಚನ ಮಾತ್ರ ದೊರೆತಿರುವುದು. ಈ ವಚನವು ‘ಕಾಯಕ ನಿಷ್ಠೆಯನ್ನು’ ವಸ್ತುವನ್ನಾಗಿಸಿಕೊಂಡಿದೆ.

“ಆಯುಷ್ಯ ತೀರಲು ಮರಣ

ವ್ರತ ತಪ್ಪಸಲು ಶರೀರ ಕಡೆ

ಮೇಲು ವ್ರತವೆಂಬ ತೂತರರ ಮೆಚ್ಚ

ನಮ್ಮ ಅಗಜೇಶ್ವರ ಲಿಂಗವು”

ವ್ರತ ಎಂಬುದು ಪ್ರಾಣ ಸ್ವರೂಪ. ಅದಕ್ಕೆ ಭಂಗ ಬಂದರೆ ಪ್ರಾಣವೇ ಹೋದಂತೆ. ವ್ರತ ತಪ್ಪಿಸಿದಾಗ ಶರೀರ ವೆಂಬುದು ಕೊನೆಯಾಧಂತೆ. ಮೇಲು ನೋಟಕ್ಕೆ ವ್ರತ ಮಾಡುವರನ್ನು ಶಿವ ಮೆಚ್ಚಿಸು ಎಂಬುದಾಗಿ ಅಂದರೆ, ಬೂಟಾಟಿಕೆಯಿಂದ ಕೂಡಿದ, ವ್ರತವನ್ನು ಶಿವನು ಒಪ್ಪುವುದಿಲ್ಲ ಎಂಬುದಾಗಿ ಹೇಳಿರುವಳು.

ಸತ್ಯಕ್ಕ :–

ಸತ್ಯಕ್ಕನ ೨೯ ವಚನಗಳು (ಪಾಠಾಂತರಗಳಿಂದ ಕೂಡಿದ ಒಂದು ಪುನರುಕ್ತ ವಚನವೂ ಸೇರಿ) [೧೧] ದೊರೆತಿವೆ. ಸತ್ಯಕ್ಕ ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪ ಸಮೀಪದ ಹಿರೇಜಂಬೂರು, ತನ್ನೂರಿನ "ಜಂಬುಕೇಶ್ವರ"ವು ಈಕೆಯ ಅದಿದೈವವಾಗಿದ್ದು ಅಂಕಿತವನ್ನಾಗಿಸಿಕೊಂಡಿರಬೇಕು ಎಂಬ ಅಭಿಪ್ರಾಯವಿದೆ.

ಶಿವಭಕ್ತರ ಮನೆಯ ಅಂಗಳ ಕಸಗೂಡಿಸುತ್ತ ಶಿವಭಕ್ತಿಯನ್ನು ಆಚರಿಸುವುದು ಈಕೆಯ ಕಾಯಕವಾಗಿತ್ತು. ಅನುಭಾವಿ ವಚನಕಾರ್ತಿ.

ಅರ್ಚನೆ ಪೂಜಿಸಿ ನೇಮವಲ್ಲ

ಮಂತ್ರ ತಂತ್ರ ನೇಮವಲ್ಲ

ಧೂಪ ದೀಪಾರತಿ ನೇಮವಲ್ಲ

ಪರಧನ ಪರಸ್ತ್ರೀ ಪರದೈವಂಗಳಿಗೆರದಿಪ್ಪುದೆ ನೇಮ

ಶಂಭುಜಕ್ಕೇಶ್ವರನಲ್ಲಿ ಇವು ಕಾಣಿಕಣ್ಣ ನಿತ್ಯನೇಮ [೧೨]

ಡಾಂಬಿಕತೆಯನ್ನು ತೀವ್ರವಾಗಿ ವಿರೋಧಿಸುವಳು ಸ್ತ್ರೀ ಪುರಷ ಸಮಾನತೆ ಇವು ಸತ್ಯಕ್ಕನ ವಚನಗಳಲ್ಲಿ ಅಳವಟ್ಟ ಮುಖ್ಯ ವಿಷಯಗಳು.

ಸೂಳೆ ಸಂಕವ್ವೆ :–

ಹೆಸರೇ ಸೂಚಿಸುವಂತೆ ವೇಶ್ಯಾವೃತ್ತಿಯನ್ನು ನಿರ್ವಹಿಸುತ್ತಿದ್ದು, ನಂತರ ಶರಣ ಚಳವಳಿಯ ಪ್ರಭಾವದಿಂದಾಗಿ ಸಾತ್ವಿಕ ಬದುಕನ್ನು ಸಾಗಿಸಿರುವವಳು "ನಿರ್ಲಜ್ಜೇಶ್ವರ" ಈಕೆಯ ಅಂಕಿತ.

ಈಕೆಯ ಒಂದು ವಚನ ಮಾತ್ರ ದೊರೆತಿರುವುದು ತನ್ನ ವೃತ್ತಿಯ ಅನುಭವದ ಹಿನ್ನೆಲೆಯಲ್ಲಿ ವಚನವನ್ನು ರಚಿಸಿದ್ದಾಳೆ.

"ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯ.

ಹಿಡಿದಡೆ ಒತ್ತಲೆ ನಿಲಿಸಿ ಕೊಲುವರಯ್ಯಾ

ವ್ರತಹೀನನರಿದು ಬೆರೆದಡೆ

ಕಾದ ಕತ್ತಿಯಲ್ಲಿ ಕೈ, ಕಿವಿ ಮೂಗ ಕೊಯ್ವರಯ್ಯಾ

ಬಲ್ಲೆನೊಲ್ಲೆಬಲ್ಲೆನಾಗಿ ನಿಮ್ಮಾಣೆ ನಿರ್ಲಜ್ಜೇಶ್ವರಾ [೧೩]

ಬದುಕಿನ ಪ್ರಾಮಾಣಿಕತೆಯನ್ನು ಈ ವಚನದಲ್ಲಿಕಾಣಬಹುದು. ಕೆಲವು ವಚನಕಾರ್ತಿಯರ ವ್ರತಹೀನರನ್ನು ಒಪ್ಪಿಕೊಳ್ಳಬಾರದು ಎಂದರು. ಆದರೆ ಈಕೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅವರ (ವ್ರತಹೀನರ) ಜೊತೆ ಸೇರಿದರೆ ಕಠಿಣ ಶಿಕ್ಷೆ ತಪ್ಪದು ಎಂಬುದನ್ನು ತಾನು ವ್ರತ ಮತ್ತು ಆಚಾರಕ್ಕೆ ನೀಡಿದ ಮಹತ್ವವನ್ನು ಕಾಣಬಹುದು.

ವೇಶ್ಯಾವೃತ್ತಿಯನ್ನೇ ಮಾಡಿ, ಪ್ರಾಣಿ ಮತ್ತು ಮನುಷ್ಯರೆಲ್ಲರಿಗೂ ಉಪಯೋಗವಾಗುವಂತೆ ಒಂದು ಕೆರೆಯನ್ನು ನಿರ್ಮಿಸಿರುವುದು ಆಕೆ ಸಮಾಜದ ಬಗೆಗಿನ ಕಾಳಜಿಯನ್ನು ಮತ್ತು ಅವಳ ಪರಿಶುದ್ಧ ಮನೋಭಾವವನ್ನು ಕಾಣಬಹುದಾಗಿದೆ. ಈಕೆಯ ಬಗೆಗಿನ ಕಥೆಗಳಿಂದಾಗಿ ಇವಳ ವ್ಯಕ್ತಿತ್ವವನ್ನು ಅರಿಯಲು ಸಾಧ್ಯವಾಗುವುದು.

ಕದಿರ ಕಾಯಕದ ಕಾಳವ್ವೆ :-

ಈಕೆ ರಾಟಿಯಿಂದ ನೂಲು ತೆಗೆಯುವ ಕಾಯಕವನ್ನು ನಿರ್ವಹಿಸುತ್ತಿದ್ದಳು "ಗುಮ್ಮೇಶ್ವರ" ಅಂಕಿತದಲ್ಲಿ ಎರಡು ಸಾಲಿನ ಒಂದು ವಚನ ಮಾತ್ರ ದೊರೆತಿರುವುದು. ಈಕೆಯ ವಚನದ ವಸ್ತು ಬಹುತೇಕ ಕಾಯಕಶೀಲ ವಚನಕಾರ್ತಿಯರಂತೆ ವ್ರತನಿಷ್ಠೆಯ ಪ್ರತಿಪಾದನೆ, ವ್ರತಭ್ರಷ್ಟತೆಯ ಖಂಡನೆಯನ್ನು ಮಾಡಿರುವಳು.

"ಕದಿರು ಮುರಿಯೆ ಏನೂ ಇಲ್ಲ

ವ್ರತಹೀನನ ನೆರೆಯಲ್ಲಿಲ್ಲ ಗುಮ್ಮೇಶ್ವರಾ"

ಕದಿರು (ರಾಟೆ) ಮುರಿದರೆ ಏನೂ ಕಾರ್ಯ ನಿರ್ವಹಿಸದೆ ನಿಷ್ಪ್ರಯೋಜಕವಾಗುತ್ತೋ ಅದೇ ರೀತಿ ವ್ರತಹೀನರ ಸಂಗವು ಕೂಡ ವ್ಯಕ್ತಿಯು ವಿನಾಶಕ್ಕೆ ನಾಂದಿಯಾಗುವುದು ಎಂಬುದು ಈಕೆಯ ಇಂಗಿತವಾಗಿರುವುದನ್ನು ವಚನದಲ್ಲಿ ಅರಿಯಬಹುದು.

ಕಾಳವ್ವೆಯ ವಿಚಾರಪರವಾದ ನಿಲುವನ್ನು ಅವಳು ಎಷ್ಟು ಅರ್ಥಪೂರ್ಣವಾಗಿ ಮಾತನಾಡುತ್ತಿದ್ದಳೋ. ಅಷ್ಟೇ ಪ್ರಾಮುಖ್ಯತೆಯನ್ನು ವಚನ ರಚನೆಯಲ್ಲೂ ಕೂಡ ನೀಡಿರುವುನ್ನು ಕಾಣಬಹುದು.

೩.೩ ಮನೋಭಾವ

ಪ್ರತಿಯೊಬ್ಬ ಮಾನವನಿಗೂ ಕೂಡ ತನ್ನದೇ ಆದ ಮನೋಭಾವವಿರುವುದು ಸಹಜವಾದದ್ದೆ. ಅಂತಹ ಮನೋಭಾವವು ವಚನಕಾರ್ತಿಯರಲ್ಲಿಯೂ ಕೂಡ ಕಾಣಬಹುದಾಗಿದೆ. ತಮ್ಮ ಬದುಕಿನಲ್ಲಿ, ಈ ರೀತಿಯಾಗಿಯೆ ಬದುಕನ್ನು ನಡೆಸಬೇಕು ಮತ್ತು ವ್ರತ ನೇಮ, ಆಚಾರ– ಹೀಗೆ ಬೇರೆ ಬೇರೆ ವಿವಿಧ ರೀತಿಯ ಮನೋಭಾವವನ್ನು ಅತ್ಯಂತ ಕೆಳವರ್ಗದ ವಚನಕಾರ್ತಿಯರಲ್ಲಿ ಇದದ್ದು ವಿಶೇಷವಾದದ್ದು.

ಕೊಟ್ಟಣದ ಸೋಮವ್ವ :–

ಭತ್ತವನ್ನು ಕುಟ್ಟಿ ಅಕ್ಕಿಯನ್ನಾಗಿಸುವುದು ಈಕೆಯ ಕಾಯಕವಾಗಿತ್ತು. "ನಿರ್ಲಜ್ಜೇಶ್ವರಾ" ಎಂಬ ಅಂಕಿತದಿಂದ ವಚನಗಳನ್ನು ರಚಿಸಿರುವಳು. ಆಚಾರ, ವಿಚಾರ ಶುದ್ಧತೆಗೆ ವ್ರತಕ್ಕೆ ನೀಡುವ ಆದ್ಯತೆಯನ್ನು ಆಕೆಯ ವಚನಗಳ ಮನೋಭಾವವಾಗಿರುವುದು.

"ಹದತಪ್ಪಿ ಕುಟ್ಟಲು ನುಚ್ಚಲದೆ ಅಕ್ಕಿಯಲ್ಲ.

ವ್ರತಹೀನನ ನೆರೆಯೆ ನರಕವಲ್ಲದೆ ಮುಕ್ತಿಯಿಲ್ಲ.

ಅರಿಯದುದು ಹೋಗಲಿ, ಅಂದು ಬೆರೆದೆನಾದಡೆ

ಕಾದ ಕತ್ತಿಯಲ್ಲಿ ಕಿವಿಯ ಕೊಯ್ವರಯ್ಯಾ.

ಒಲ್ಲೆ ಒಲ್ಲೆನಾಗಿ ನಿಮ್ಮಾಣೆ ನಿರ್ಲಜ್ಜೇಶ್ವರಾ [೧೪]

ಈ ವಚನದಲ್ಲಿ ಈಕೆ ಯಾವುದೇ ವ್ಯಕ್ತಿ ತಿಳಿಯದೆ ಮಾಡಿದ ತಪ್ಪುಹೋದರೂ, ತಿಳಿದು ಕೂಡ ತಪ್ಪು ಮಾಡುವನೊಂದಿಗೆ ಬೆರೆತರೆ ಅಂತಹವನಿಗೆ ಕಾದ ಕತ್ತಿಯಲ್ಲಿ ಕಿವಿಯನ್ನು

ಕೊಯ್ಯುವರಯ್ಯಾ ಎಂದು. ಹದ ತಪ್ಪಿಕುಟ್ಟಿದರೆ ನುಚ್ಚು ಆಗುವುದೋ, ಹಾಗೆ. ಹದ ತಪ್ಪಿ ನಡೆದಾಗ, ಕ್ಷಮೆ ಎಂಬುದು ಇರುವುದಿಲ್ಲ ಎಂಬುದಾಗಿ ತನ್ನ ಮನೋಭಾವನೆಯನ್ನು ಇಲ್ಲಿ ಅಭಿವ್ಯಕ್ತಿಗೊಳಿಸಿದ್ದಾಳೆ.

ಗಂಗಾಂಬಿಕೆ :-

ಬಸವಣ್ಣನವರ ಹಿರಿಯ ಪತ್ನಿ. ಈಕೆಯ ಬಗೆಗೆ ಬಸವರಾಜ ದೇವರ ರಗಳೆ, ಭೀಮ ಕಪಿಯ ಪುರಾಣ, ಸಿಂಗಿರಾಜನ ಸಿಂಗಿರಾಜ ಪುರಾಣ, ಶಾಂತಲಿಂಗ ದೇಶಿಕನ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ. ಹೀಗೆ ಅನೇಕ ಕೃತಿಗಳು ಈಕೆಯ ಬಗೆಗೆ ಸಂಬಂಧಿಸಿದ ಹಲವಾರು ಸಂಗತಿಗಳ ಉಕ್ತವಾಗಿವೆ [೧೫] ಎನ್ನಲಾಗಿದೆ.

ಈಕೆ ಗೃಹಕೃತ್ಯದಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿದ್ದು ಅದರ ಪ್ರಭಾವದಿಂದಾಗಿಯೇ ಈಕೆಯ ವಚನಗಳು ಮೂಡಿಬಂದಿರುವುದನ್ನು ನಾವು ಕಾಣಬಹುದಾಗಿದೆ.

ಈಕೆಯ ೯ ವಚನಗಳು ದೊರೆತಿವೆ. "ಗಂಗಾಪ್ರಿಯ ಕೂಡಲಸಂಗಮ" ಎಂಬ ಅಂಕಿತವನ್ನು ಹೊಂದಿದ್ದಳು. ಈಕೆಯ ವಚನಗಳಲ್ಲಿ "ಗುರುಭಕ್ತಿ, ಲಿಂಗನಿಷ್ಠೆ, ಶರಣರ ಬಗೆಗಿನ ಗೌರವ, ಪುತ್ರ ವಿಯೋಗದ ದುಃಖ, ವಿಸ್ಮಯ, ಮೆಚ್ಚುಗೆ, ಚಿಕ್ಕ ವಯಸ್ಸಿನಲ್ಲಿಯೇ, ಸಾವಿಗೆ ಒಳಗಾದ ಮಗನ ವಿಯೋಗದಿಂದ ದುಃಖ ತೀವ್ರತೆಯ ಸಂದರ್ಭದಲ್ಲಿ ಆಕೆಯ ಮನೋಭಾವದಲ್ಲಿ ಮೂಡಿದ ವಚನವಿದು.

"ಒಂದು ಹಾಳ ಭೂಮಿಯ ಹುಲಿ ಬಂದು

ಎನ್ನ ಎಳಗೆರುವ ಭಕ್ಷಿಸಿತ್ತಲಾ!

ಆ ಹುಲಿ ಹಾಳಿಗೆ ಹೋಗದು

ಆ ಹುಲಿ ಎಳೆಗರುವ ಕಂಡು ಜನನಿಯಾಯಿತ್ತು.

ಇದೇನೆಂಬೆ ಗಂಗಾಪ್ರಿಯ ಕೂಡಲಸಂಗಮದೇವ !

ಇಲ್ಲಿ ಪ್ರಮುಖವಾಗಿ ತಾಯಿ ಹೃದಯದ ಚಿತ್ತವೇದಕವನ್ನು ತಿಳಿಯಲು ಸಾಧ್ಯವಾಗುವುದು. ಕಂದನನ್ನು ಅಗಲಿದ ಸಂಕಟದ ಭಾವವನ್ನು ತಿಳಿಯಲಾಗುವುದು.

ಮುಕ್ತಾಯಕ್ಕ :–

ವಚನಕಾರ್ತಿಯರಲ್ಲಿಯೇ ಅಂದಿಗೆ ತಾತ್ವಿಕವಾಗಿ ಆಲೋಚಿಸುವ ಚಿಂತಿಸುವ ಪ್ರಶ್ನಿಸುವ ನಿರ್ಭೀತಿಯಿಂದ ಅನುಭಾವಿಯಾದ ಅಲ್ಲಮನನ್ನು ಪ್ರಶ್ನಿಸುವ ಮನೋಭಾವವನ್ನು ಹೊಂದಿದ್ದವಳು.

'ಅಜಗಣ್ಣ' ಮತ್ತು ಮುಕ್ತಾಯಕ್ಕ ಅಣ್ಣ–ತಂಗಿಯಾಗಿದ್ದು ಇಬ್ಬರೂ ವಚನ ರಚನೆ ಮಾಡಿದ್ದಾರೆ. ಅಣ್ಣನನ್ನೇ ಗುರುವಾಗಿ ಸ್ವೀಕರಿಸಿ ಮುಕ್ತಾಯಕ್ಕ ಆ ಹೆಸರನ್ನು ತನ್ನ ಅಂಕಿತವನ್ನಾಗಿಸಿಕೊಂಡಿರುವಳು. "ಅಜಗಣ್ಣ"

ಆಕೆ ನಿರ್ದಿಷ್ಟವಾದ ಮನೋಭಾವದಳಾದ ವಿಶಿಷ್ಟ ವ್ಯಕ್ತಿತ್ವವನ್ನು ಹೊಂದಿದ್ದಂತಹ ಆಕೆ ತನ್ನ ಅಣ್ಣನಾದ ಅಜಗಣ್ಣನ ಭಾವವನ್ನು ಪ್ರಕೃತಿಯ ಹಲವಾರು ಸಾದೃಶ್ಯಗಳಲ್ಲಿ ಅಭಿವ್ಯಕ್ತಿಸಿರುವಲ್ಲಿ ಆಕೆಯ ವಿಚಾರವಂತಿಕೆಯನ್ನು ಇಲ್ಲಿ ಗುರುತಿಸಬಹುದು.

"ಅಂಧಕನ ಕೈಯ ಅಂಧಕ ಹಿಡಿದಂತಿರಬೇಕು

ಮೂಗನ ಕೈಯಲ್ಲಿ ಕಾವ್ಯವ ಕೇಳಿದಂತಿರಬೇಕು

ದರ್ಪಣದೊಳಗಣ ಪ್ರತಿಬಿಂಬದಂತೆ

ಹಿಡಿವರಿಗಳವಲ್ಲದಿರಬೇಕು ಅಣ್ಣಾ.

ಕೂರ್ಮನ ಶಿಶುವಿನ ಸ್ನೇಹದಂತೆ ಇರಲೊಲ್ಲದೆ

ಆರೂಢಿಗೆಟ್ಟಿಯೂ ಅಜಗಣ್ಣ. [೧೬]

ನಾಲ್ಕು ಶೂನ್ಯ ಸಂಪಾದನೆಗಳು ಪ್ರಸ್ತಾಪಿಸುವ ಮುಕ್ತಾಯಕ್ಕ ಮತ್ತು ಪ್ರಭುದೇವರ ಭೇಟಿಯ ಸನ್ನಿವೇಶ, ಮುಕ್ತಾಯಕ್ಕನ ಸ್ವಾನುಭಾವ ಸಿದ್ಧ ಅವಳಲ್ಲಿನ ಬೌದ್ಧಿಕ ವಿವೇಕವನ್ನು ಅವಳ ವ್ಯಕ್ತಿತ್ವಕ್ಕೆ ಹಿಡಿದ ದರ್ಪಣದಂತಿದೆ.

ರೇವಣಸಿದ್ಧಯ್ಯಗಳ ಪುಣ್ಯಸ್ತ್ರೀ ರೇಕಮ್ಮ :-

ಈಕೆ ಬಸವಣ್ಣನವರ ಸಮಕಾಲೀನನೆನಿಸಿದ ರೇವಣಸಿದ್ಧಯ್ಯನ ಪತ್ನಿ. ಈಕೆಯ ಕುರಿತು ಒಂದು ಕಥೆಯಿರುವುದು. ಇದರಿಂದ ಈಕೆಯು ಬದುಕಿನ ಕ್ರಮಬದ್ಧತೆ ವ್ರತಕ್ಕೆ ನೀಡಿದ ಮಹತ್ವವನ್ನು ತಿಳಿಯಬಹುದಾಗಿದೆ.

ಶಿವಲಿಂಗಕ್ಕೆ ನಿತ್ಯ ಹೂವಿನ ದಂಡೆಕಟ್ಟಿ ಅರ್ಪಿಸುವುದು ದಂಡೆಯನ್ನು ಕಟ್ಟುವಾಗ ಒಂದು ಕೆಂಪಿನ ಸಂಪಿಗೆಯನ್ನು ಇಡುವುದು ಇವಳ ನಿತ್ಯಕ್ರಮ. ಒಮ್ಮೆ ಸಂಪಿಗೆ 'ಹೂ' ದೊರೆಯದಾದಾಗ "ತನ್ನ ದೇಹದ" ಮಾಂಸವನ್ನೇ ತೆಗೆದು ದಂಡೆಯ ಮಧ್ಯೆ ಇರಿಸಿ ಅರ್ಪಿಸಿದಳಂತೆ. ಅವಳ ನಿಷ್ಠೆಗೆ ಶಿವ ಮೆಚ್ಚಿದನಂತೆ.

"ಶ್ರೀ ಗುರುಸಿದ್ದೇಶ್ವರ" ಎಂಬುದು ಅಂಕಿತ. ಒಂದು ವಚನ ಮಾತ್ರ ದೊರೆತಿರುವುದು.

"ಲಿಂಗ ಬಾಹ್ಯನ ಆಚಾರ ಭ್ರಷ್ಟನ ವ್ರತ ತಪ್ಪುಕನ

ಗುರುಲಿಂಗ ಜಂಗಮದ ಕೊಂದವನ ಪಾದೋದಕ

ಪ್ರಸಾದ ದೂಷಿಕನ ವಿಭೂತಿ ರುದ್ರಾಕ್ಷಿ ನಿಂದಕನ ಕಂಡಡೆ

ಶಕ್ತಿಯುಳ್ಳಡೆ ಸಂಹಾರವ ಮಾಡುವುದು.

ಶಕ್ತಿಯಿಲ್ಲದಿದ್ದಡೆ, ಕಣ್ಣು ಕರ್ಣವ ಮುಚ್ಚಿಕೊಂಡು

ಶಿವಮಂತ್ರ ಜಪಿಸುವುದು.

ಅಷ್ಟು ಆಗದಿದ್ದೆಡೆ ಆ ಸ್ಥಳವ ಬಿಡುವುದು

ಅದಲ್ಲದಿದ್ದೆಡೆ ಕುಂಭೀಪಾತಕ, ನಾಯಕ ನರಕದಲ್ಲಿರುವ

ಶ್ರೀ ಗುರುಸಿದ್ದೇಶ್ವರನು.

ಇಲ್ಲಿ ಧರ್ಮವಿರೋಧಿಗಳ ಸಂಹಾರವನ್ನು ಕುರಿತು ವಿಭೂತಿ, ರುದ್ರಾಕ್ಷಿ, ನಿಂದಕನ ಕಂಡಡೆ ಆತನ, ಸಂಹಾರಿಸುವುದು. ಇಲ್ಲದಿದ್ದರೆ ತನ್ನ ಅಸಹಾಯಕತೆಯನ್ನು ತೋರದೆ. ಕಣ್ಣು - ಕಿವಿಯನ್ನು ಮುಚ್ಚಿಕೊಂಡು ಶಿವನ ಮಂತ್ರವನ್ನು ಜಪಿಸುವುದು. ಅದು ಸಾಧ್ಯವಿಲ್ಲದಿದ್ದರೆ, ಆ

ಸ್ಥಳದಲ್ಲಿ ನಿಲ್ಲದೆ ಮುಂದುವರಿಯುವುದು. ಈ ರೀತಿ ಹೇಳುವಾಗ ಆಕೆಯ ಮನೋಭಾವದಲ್ಲಿನ ಭಕ್ತಿಯ ಉತ್ಕೃಷ್ಟತೆಯನ್ನು ಕಾಣಬಹುದಾಗಿದೆ.

ಬೊಂತಾದೇವಿ :-

ಕಾಶ್ಮೀರ ದೇಶದ ಮಾಂಡವ್ಯಪುರದ ಅರಸನ ಮಗಳು. ಈಕೆಯ ಮೂಲ ಹೆಸರು "ನಿಜದೇವಿ", ಆಧ್ಯಾತ್ಮಿಕ ಮನೋಭಾವವನ್ನು ಹೊಂದಿದವಳು. ಅತ್ಯಂತ ಸಣ್ಣ ವಯಸ್ಸಿನಲ್ಲಿಯೇ "ಶಿವಭಕ್ತಿಯಲ್ಲಿ ತನು-ಮನವನ್ನು ಅರ್ಪಿಸಿದವಳು".

ಲೌಕಿಕದ ಎಲ್ಲ ಸುಖ-ಭೋಗಗಳನ್ನು ತೊರೆದು, ಉಟ್ಟ ವಸ್ತುವನ್ನು ಕಳೆದೊಗೆದು, ದಿಗಂಬರೆಯಾಗಿ ಕಲ್ಯಾಣದತ್ತ ನಡೆಯಬೇಕಾದರೆ ಈಕೆಯ ಮನೋಭಾವದಲ್ಲಿ "ಶಿವಭಕ್ತಿಯನ್ನು ಹೊರತುಪಡಿಸಿ ಮತ್ತೊಂದಕ್ಕೆ ಅವಕಾಶವಿರಲಿಲ್ಲ." ಎಂಬ ಅಂಶವನ್ನು ಇಲ್ಲಿ ವ್ಯಕ್ತಪಡಿಸಿರುವಳು.

'ಬಿಡಾಡಿ' ಎಂಬುದು ಈಕೆಯ ಅಂಕಿತ. ಐದು ವಚನಗಳು ಮಾತ್ರ ದೊರೆತಿವೆ. ವಚನದಲ್ಲಿ ಆಕೆಯ ಆಧ್ಯಾತ್ಮಿಕ ಮನೋಭಾವದಿಂದ ಕೂಡಿದ ವಿಶಿಷ್ಟ ಭಾಷಾ ಬಳಕೆಯು ಅಭಿವ್ಯಕ್ತಿಯಾಗಿದೆ.

"ಘಟದೊಳಗಣ ಬಯಲು, ಮರದೊಳಗಣ

ಬಯಲು ಬಯಲು ಬಯಲು

ತಾನೆಲ್ಲಾ ಬಯಲು, ಬಿಡಾಡಿ ಬಯಲು"

'ಬಿಡಾಡಿ' ಎಂದರೆ ಪರತತ್ವದ ನಿರ್ಗುಣ ನಿರಾಕಾರ ನಿರುಪಾಧಿಕ ಸ್ವರೂಪಕ್ಕೆ ಸಂಕೇತವಾಗಿದೆ.[೧೭]

ಬೊಂತಾದೇವಿ ಮಾನವ ಮಿತಿಗಳನ್ನು ಮೀರಿ ಪರತತ್ವದೊಡನೆ ಬೆರೆತಳೆಂದು ಪುರಾತನ ದೇವಿಯರ ತ್ರಿಪಧಿಯಲ್ಲಿ ಬೊಂತಾದೇವಿಯ ಸುತ್ತಿಯಿದೆ ಎಂಬುದರಿಂದ ಈಕೆಯ ಆತ್ಮಸ್ಥೈರ್ಯ. ಆಕೆ ಧಾರ್ಮಿಕವಾಗಿ ಸಾಮಾಜಿಕವಾಗಿ ಹೊಂದಿದ ಮನೋಭಾವವನ್ನು ಮತ್ತು ಆಕೆಯಲ್ಲಿನ ಪರಿಪಕ್ವಗೊಂಡ ಮನೋಭಾವವನ್ನು ತಿಳಿಯಬಹುದಾಗಿದೆ. "ಬೊಂತೆ (ಕೌದಿ)ಯನ್ನು ಶಿವನ ನೀಡಿದ್ದರಿಂದ ಈಕೆಯ ಹೆಸರು ಬೊಂತಾದೇವಿಯಾಯಿತು.

ಸಿದ್ಧ ಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ :-

ಸಿದ್ಧ ಬುದ್ಧಯ್ಯಗಳ ಪತ್ನಿ ಕಾಳೆವ್ವೆ ಸಾಮಾನ್ಯ ವರ್ಗಕ್ಕೆ ಸೇರಿದ ಶರಣೆಯಾಗಿದ್ದಳು. ಬಸವಣ್ಣ ಹಾಗೂ ಶರಣರ ಮಧ್ಯೆ ಕಾಯಕ ಜೀವಿಗಳಾಗಿ ತಮ್ಮ ಬದುಕನ್ನು ಕಳೆದವರು.

ಕಾಳವ್ವೆಯ ಒಂದು ವಚನ ಮಾತ್ರ ದೊರೆತಿದೆ. "ಭೀಮೇಶ್ವರಾ" ಎಂಬ ಅಂಕಿತವನ್ನು ಹೊಂದಿದಳು.

"ವ್ರತಭ್ರಷ್ಟನ ಲಿಂಗಬಾಹ್ಯನ ಕಂಡಡೆ

ಸತ್ತನಾಯ, ಕಾಗೆಯ ಕಂಡಂತೆ

ಅವರೊಡನೆ ನುಡಿಯಲಾಗದು ಭೀಮೇಶ್ವರಾ"

ವ್ರತವನ್ನು ತಪ್ಪುವರನ್ನು ಲಿಂಗಬಾಹ್ಯರನ್ನು ಟೀಕೆಗೆ ಒಳಪಡಿಸುತ್ತ, ಅಂತವರೊಂದಿಗೆ ಮಾತನಾಡಲು ಸಾಧ್ಯವಾಗದು. ಅವರನ್ನು ಕಂಡರೆ ಸತ್ತನಾಯಿ, ಕಾಗೆಗಳನ್ನು ಕಂಡಂತೆ ವ್ಯಕ್ತಿಯ ವ್ಯಕ್ತಿತ್ವಕ್ಕೆ ನಡೆ-ನುಡಿಯು ಅತ್ಯವಶ್ಯಕ ಅದನ್ನು ತಪ್ಪಿದವರು ಸತ್ತ ಪ್ರಾಣಿಗಳಿಗೆ ಹೋಲಿಕೆ ಮಾಡುತ್ತಿರುವುದನ್ನು ತಿಳಿಯಬಹುದಾಗಿದೆ.

ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ :-

"ನಿಂಬೇಶ್ವರ" ಎಂಬುದು ಈಕೆಯ ಅಂಕಿತ. ಈಕೆಯ ಒಂದು ವಚನ ಮಾತ್ರ ದೊರೆತಿದೆ. ಈ ವಚನದಲ್ಲಿ ವತ್ರಾಚಾರನಿಷ್ಠೆಯ ವಿಚಾರಕ್ಕೆ ಪ್ರಾಮುಖ್ಯತೆಯನ್ನು ನೀಡಿರುವಳು.

ಅಂತರಂಗ-ಬಹಿರಂಗ ಎರಡೂ ಶುದ್ಧವಾಗಿ ಮಾಡುವ ವ್ರತವೇ ನಿಜವಾದುದು ಶ್ರೇಷ್ಠವಾದುದು. ಅಂತರಂಗ ಶುದ್ಧಿಯಿಲ್ಲದೆ ಕೇವಲ ಬಾಹ್ಯದಲ್ಲಿ ಇತರರ ತೋರಿಕೆಗೆ ವ್ರತಾಚಾರಣೆ ಮಾಡುವಂತಹವರು ವ್ರತಿಗಳಲ್ಲ - ವ್ರತಹೀನರು. ಅಂತವರ ನಡುವಿನ ಒಡನಾಟ ನರಕದಂತೆ ಎಂಬುದಾಗಿ ಕಟುವಾಗಿ ಸಮಾಜದಲ್ಲಿನ ಜನರು ಬಣ್ಣಪಿಲ್ಲದೆ ನಾಟಕವಾಡುವಂತೆ, ಮನಸ್ಸಿನಲ್ಲಿ ಭಕ್ತಿಯಿಲ್ಲದೆ ವ್ರತಾಚಾರರು ನಟಿಸುವರು ಎಂದು ಅಭಿವ್ಯಕ್ತಿಸಿರುವಳು. ಸಮಾಜದಲ್ಲಿರುವ ವಿವಿಧ ರೀತಿಯ ಜನರಲ್ಲಿ ನಾಟಕೀಯ ಮನೋಭಾವದವರನ್ನು ಕುರಿತು ಅತ್ಯಂತ ಕಟುವಾಗಿ ಟೀಕಿಸಿರುವುದನ್ನು ಒಂದು ವಚನವಾದರೂ ಅದರ ಪ್ರಖರತೆ ಪರಿಣಾಮಕಾರಿಯಾದುದು.

ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ :-

೧೧೬೦ ಈಕೆಯ ಕಾಲ. ದಸಯ್ಯನ ಪತ್ನಿ ಈಕೆ. ವೀರಮ್ಮನ ಐದು ವಚನಗಳು ದೊರೆತಿರುವುವು. "ಗುರುಶಾಂತೇಶ್ವರಾ" ಎಂಬುದು ಅವಳ ಅಂಕಿತ.

ಶಿವನ ಮೇಲಿನ ಭಕ್ತಿಯನ್ನು ತನ್ನ ಪತಿಯಲ್ಲಿ ಕಂಡ ಪುಣ್ಯಸ್ತ್ರೀ ವೀರಮ್ಮನೂ ಕೂಡ ಪತಿಯಂತೆ ಅನುಭಾವಿಕ ನೆಲೆಯಲ್ಲಿ ಚಿಂತಿಸ ತೊಡಗಿದವಳು.

"ಇಹಪರವೆಂಬ ಉಭಯದೊಳಗಿಲ್ಲದ

ನಿರಾಲಯ ಸ್ಥಿತಿ ಶರಣನ ನಿಲವು"

ಎಂಬುದಾಗಿ ನಿರಾತಂಕ ಸ್ಥಿತಿಯನ್ನು ಹೊಂದಿರುವವನ ನಿಲವು ಶರಣನದ್ದಾಗಿರುತೆ" ಎಂದು ತನ್ನ ಒಂದು ವಚನದಲ್ಲಿ ಹೇಳಿರುವಳು. ಶರಣನ ಸಾತ್ವಿಕ ಮನೋಭಾವವನ್ನು ಕುರಿತು ಇಲ್ಲಿ ಚಿಂತಿಸಿರುವುದನ್ನು ನಾವು ಕಾಣಬಹುದಾಗಿದೆ ಹಾಗೂ ಅಂತರಂಗ ಮತ್ತು ಬಹಿರಂಗ ಎರಡರಲ್ಲಿಯೂ ಕೂಡ ನಿರಾತಂಕವನ್ನು ಹೊಂದಿರುವವನೆ ಶರಣ ಎಂಬುದಾಗಿ ಅಭಿವ್ಯಕ್ತಿಸಿರುವುದನ್ನು ಅರಿಯಲು ಸಾಧ್ಯವಾಗಿದೆ.

ಕಾಟಕೂಟಗಳ ಪುಣ್ಯಸ್ತ್ರೀ ರೇಚವ್ವೆ :-

ಈಕೆಯ ಕಾಲ – ೧೧೬೦, ಈಕೆಯೂ ಕೂಡ ವ್ರತ ಆಚಾರ ನಿಷ್ಠೆಗೆ ಹೆಚ್ಚಿನ ಆದ್ಯತೆಯನ್ನು ನೀಡಿರುವಳು. "ನಿಜಶಾಂತೇಶ್ವರ" ಎಂಬ ಅಂಕಿತವನ್ನು ಹೊಂದಿದ್ದಳು.

"ಬಂಜೆ ಆವಿಂಗೆ ಕ್ಷೀರವುಂಟೆ?

ವ್ರತ ಹೀನನ ಬೆರೆಯಲುಂಟೆ?"

ಎಂಬುದಾಗಿ ಪ್ರಶ್ನಿಸುವುದರ ಮೂಲಕ ವ್ರತಹೀನರೊಂದಿಗೆ ಜೊತೆಗೂಡಿದರೆ ಅವರೊಂದಿಗೆ ಸ್ನೇಹದಿಂದ ಇದ್ದರೆ, ಮಕ್ಕಳಿಲ್ಲದ ಬಂಜೆ ಆಕಳಿನ ಸಹವಾಸದಂತೆ ವ್ಯರ್ಥವಾದುದು ಎಂದು ತಿಳಿಸುವಳು. ಇದರಿಂದ ಈಕೆಯಲ್ಲಿ ದೃಢಸಂಕಲ್ಪದಂತೆ ವ್ರತಕ್ಕೆ ಹೆಚ್ಚಿನ ಮನ್ನಣೆಯನ್ನು ನೀಡಿದ ಉತ್ಕೃಷ್ಟವಾದ ಮನೋಭಾವವನ್ನು ಅಚಲವಾದ ನಿಷ್ಠೆಯನ್ನು ಹೊಂದಿದ್ದಂತಹ ವಚನಕಾರ್ತಿಯಾಗಿದ್ದಳು.

ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ :-

ಎಡೆಮಠದ ನಾಗಿದೇವಯ್ಯನ ಪತ್ನಿಯಾದ ಈಕೆ ಮೂಲತಃ ಕಾಂಚೀನಗರದವರು. ಅನಂತರ ಕರ್ನಾಟಕಕ್ಕೆ ಬಂದವರು.

"ನಿಜಗುಣೇಶ್ವರ ಲಿಂಗ" ಎಂಬುದು ಈಕೆಯ ಅಂಕಿತ. ಪ್ರಾಣಿಗಳಿಗೆ ವ್ರತಹೀನರಾದವರನ್ನು ಹೋಲಿಸುವುದರ ಮೂಲಕ ತನ್ನ ವಿಶಿಷ್ಟವಾದ ಕಲ್ಪನೆಯನ್ನು ಒಂದು ವಚನದಲ್ಲಿ ತಂದಿರುವಳು. ಈಕೆಯ ಒಂದು ವಚನ ಮಾತ್ರ ದೊರೆತಿರುವುದು.

"ವ್ರತವು ಶಿವಭಕ್ತನಿಗೆ ಮಾತ್ರ ಸಲ್ಲುತ್ತದೆ.

ಸಾಮಾನ್ಯನಿಗಲ್ಲ."

ಕಾಗೆಯ ನಾಯ ತಿಂದವರಿಲ್ಲ.

ವ್ರತಭ್ರಷ್ಟನ ಕೂಡಿದವರಿಲ್ಲ"

ಎಂಬುದಾಗಿ ಅಷ್ಟು ಖಚಿತತೆಯಿಂದ ತನ್ನ ವಚನದಲ್ಲಿ ವ್ರತಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿ ವ್ರತಹೀನರನ್ನು ಕುರಿತು ನರಕ – ಕಷ್ಟ ತಪ್ಪಿದ್ದಲ್ಲ ಎಂಬುದಾಗಿ ನುಡಿದಿರುವಳು.

ತಾನು ಮಾಡುವ ವ್ರತವೆಂಬುದು ಎಷ್ಟು ಪರಿಶುದ್ಧವಾಗಿರಬೇಕು ಮತ್ತು ಅಂತರಂಗದಲ್ಲಿ ನಿರ್ಮಲವಾದ ಭಾವವಿರಬೇಕು ಎಂಬುದು ಈಕೆಯ ವಚನದ ಪ್ರಮುಖ ಆಶಯವಾಗಿರುವುದನ್ನು ಕಾಣಬಹುದಾಗಿದೆ.

ಈ ರೀತಿಯಾಗಿ ಸದೃಢವಾದ ಮನೋಭಾವವನ್ನು ಹೊಂದಿದ್ದಂತಹ ವಚನಕಾರ್ತಿಯರ ವಿಚಾರಗಳ ಅಭಿವ್ಯಕ್ತಿಯನ್ನು ಇಲ್ಲಿ ಕಾಣಬಹುದಾಗಿದೆ.

ಪ್ರತಿಯೊಬ್ಬ ಮನುಷ್ಯನಿಗೂ ಕೂಡ ಒಂದೊಂದು ರೀತಿಯ ಭಾವನೆಗಳಿದ್ದಂತೆ ವಚನಕಾರ್ತಿಯರ ಮನೋಭಾವವು ಕೂಡ ಮನುಷ್ಯ ಎಚ್ಚರಿಕೆಯಿಂದ ನಡೆಯಬೇಕು. ಆಚಾರ ವಿಚಾರವನ್ನು ಕುರಿತಂತೆ ಅವನ ಅಭಿಮತ ಹೀಗೆ ಇನ್ನೂ ಅನೇಕ ವಿಚಾರಪರವಾದ ಮನೋಭಾವವನ್ನು ಹೊಂದಿದ್ದರಿಂದ ಅವರು ತಮ್ಮ ಮನಸ್ಸಿನ ಭಾವನೆಗಳಿಗೆ ಬರವಣಿಗೆಯ ರೂಪವನ್ನು ನೀಡಿದರು. ಭಾವವಿದ್ದಾಗ ಬರವಣಿಗೆ ಸಾಧ್ಯ ಎನ್ನುವ ಮಾತಿಗೆ ಉದಾಹರಣೆ

ಎಂಬಂತೆ ೧೨ನೆಯ ಶತಮಾನದಲ್ಲಿನ ಸ್ತ್ರೀಯರಿಗೂ ಕೂಡ ಸಹೃದಯತೆ, ಹೃದಯವೈಶಾಲ್ಯತೆ ಇದ್ದುದ್ದನ್ನು ಕಾಣಬಹುದಾಗಿದೆ.

ಕುವೆಂಪುರವರು "ಎಷ್ಟು ದೇವರ ನೀ ನಂಬಿದರೇನು, ನಿನ್ನ ನೀ ಒಂದಿಷ್ಟು ನಂಬದಿರೆ ಎನ್ನುವಂತೆ ಎಷ್ಟು ದೇವರನ್ನು ನಂಬಿದ್ದೇವೆ ಅನ್ನುವುದಕ್ಕಿಂತ ನಿನ್ನ ಮೇಲೆ ನಿನಗೆ ಎಷ್ಟು ನಂಬಿಕೆಯಿದೆ ಎನ್ನುವಲ್ಲಿನ ವಿಚಾರವಂತಿಕೆಗೆ ಪೂರಕವಾಗಿ ವಚನಕಾರ್ತಿಯರು ಕೂಡಾ ಬಹುತೇಕ ತಮ್ಮ ವಿಚಾರಗಳಿಗೆ ಹೆಚ್ಚಿನ ಆದ್ಯತೆಯನ್ನು ೧೨ನೆಯ ಶತಮಾನದಲ್ಲಿ ನೀಡಿರುವುದನ್ನು ತಿಳಿಯಬಹುದಾಗಿದೆ. ತಾವು ನಿರ್ವಹಿಸುತ್ತಿದ್ದ ಕಾರ್ಯವನ್ನು ಜವಾಬ್ದಾರಿಯುತವಾಗಿ ನಿರ್ವಹಿಸುವ ವಿಶಾಲ ಮನೋಭಾವವನ್ನು ಹೊಂದಿದ್ದಂತಹ ಶಿವಶರಣೆಯರಾಗಿದ್ದರು.

ಹೀಗೆ ವಚನಕಾರ್ತಿಯರು ಜಾತಿ, ವೃತ್ತಿ ಮನೋಭಾವದ ಹಿನ್ನೆಲೆಯಲ್ಲಿ ತಮ್ಮದೇ ಆದ ವಿಚಾರಮಂಥನ ಶಕ್ತಿಯನ್ನು ಪ್ರೌಢಿಮೆಯನ್ನು ಹೊಂದಿದ್ದವರಾಗಿದ್ದರು.

ಅಡಿ ಟಿಪ್ಪಣಿ

೧. ಶಿವಶರಣೆಯರ ವಚನ ಸಂಪುಟ – ಸಂಪಾದಕರು – ಡಾ. ವೀರಣ್ಣ ರಾಜೂರ, ಪುಟ – ೨೨, ಪ್ರಸ್ತಾವನೆ.

೨. ಅದೇ ಸಂಪುಟ – ಪುಟಸಂಖ್ಯೆ – ೨೦೬, ವಚನ ೬೫೨(೫)ನೆಯ ವಚನ.

೩. ಅದೇ ಸಂಪುಟ – ಪುಟಸಂಖ್ಯೆ – ೨೧೩–ವಚನ–೬೬೬(೧)ನೆಯ ವಚನ

೪. ಅದೇ ಸಂಪುಟ – ಪುಟಸಂಖ್ಯೆ – ೩೪೨, ವಚನ – ೧೦೫೨ (೬೪)ನೆಯ ವಚನ

೫. ಅದೇ ಸಂಪುಟ – ಪುಟಸಂಖ್ಯೆ – ೨೦೩, ವಚನ – ೬೪೩ (೨೧)ನೆಯ ವಚನ

೬. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ – ಸಂಪಾದಕರು – ಡಾ. ಎಚ್.ಎಸ್. ಶ್ರೀಮತಿ, ೨೦೦೬, ಪುಟಸಂಖ್ಯೆ – ೧೦೪

೭. ಅದೇ ಸಂಪುಟ – ಪುಟಸಂಖ್ಯೆ – ೨೧೫, ವಚನ – ೬೬೮ (೧)ನೆಯ ವಚನ

೮. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ – ಪುಟಸಂಖ್ಯೆ – ೮, ಸಂ. ಡಾ. ಎಚ್.ಎಸ್. ಶ್ರೀಮತಿ

೯. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ – ಪುಟಸಂಖ್ಯೆ – ೯, ಸಂ. ಡಾ. ಎಚ್.ಎಸ್. ಶ್ರೀಮತಿ

೧೦. ಶಿವಶರಣೆಯರ ವಚನ ಸಂಪುಟ – ಪುಟಸಂಖ್ಯೆ – ೨೮೪, ವಚನ ೮೯೫(೮)ನೆಯ ವಚನ

೧೧. ಅದೇ ಸಂಪುಟ – ಪುಟಸಂಖ್ಯೆ – ೪೩, ಪ್ರಸ್ತಾವನೆ

೧೨. ಅದೇ ಸಂಪುಟ – ಪುಟಸಂಖ್ಯೆ – ೩೦೯, ವಚನ (೯೫೯) ೨ನೆಯ ವಚನ

೧೩. ಅದೇ ಸಂಪುಟ – ಪುಟಸಂಖ್ಯೆ – ೩೨೦, ವಚನ ೯೮೮ (೧)ನೆಯ ವಚನ

೧೪. ಅದೇ ಸಂಪುಟ – ಪುಟಸಂಖ್ಯೆ – ೨೧೩, ವಚನ – ೬೭೦(೧)ನೆಯ ವಚನ

೧೫. ಅದೇ ಸಂಪುಟ – ಪ್ರಸ್ತಾವನೆ – ಪುಟಸಂಖ್ಯೆ – ೨೮

೧೬. ಅದೇ ಸಂಪುಟ – ಪುಟಸಂಖ್ಯೆ – ೨೭೧, ವಚನ – ೮೫೧(೧)ನೆಯ ವಚನ

೧೭. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ – ಸಂ. ಡಾ. ಎಚ್.ಎಸ್. ಶ್ರೀಮತಿ, ಪುಟಸಂಖ್ಯೆ – ೯೪, ೯೫

ಅಧ್ಯಾಯ – ೪

ವಚನ ಚಳವಳಿಯಲ್ಲಿ ಸ್ತ್ರೀಯರು ಗಳಿಸಿಕೊಂಡ ಆತ್ಮಸ್ಥೈರ್ಯ

ವಚನ ಚಳವಳಿಯಲ್ಲಿ ಸ್ತ್ರೀಯರ ಆತ್ಮಸ್ಥೈರ್ಯವನ್ನು ತಮ್ಮದಾಗಿಸಿಕೊಂಡು ವಚನಗಳ ಮೂಲಕ ಸವಾಲನ್ನು ಎಸೆಯುವ ಧಾಟಿಯನ್ನು ನೋಡಬಹುದು ವಚನ ಯುಗದ ಸ್ತ್ರೀಯರ ಆತ್ಮಸ್ಥೈರ್ಯ ಎಂತಹ ವ್ಯಕ್ತಿಯನ್ನು ಬೆಚ್ಚಿ ಬೀಳಿಸುವಂತಹದ್ದು. ಇಂದು ಮಹಿಳೆ ಸ್ವಂತ ಅಭಿಪ್ರಾಯವನ್ನು ತಿಳಿಸಲಾಗದ ಸ್ಥಿತಿಯಲ್ಲಿರುವಳು. ಆದರೆ ೧೨ನೆಯ ಶತಮಾನದಲ್ಲಿ ಈ ಯಾವ ನಿರ್ಭೀತಿಯಿರದೆ ಅಲ್ಲಿ ತನ್ನ ಮನೋಭಾವ ಹಾಗೂ ಭಾವನೆಗಳನ್ನು ದಿಟ್ಟತನದಿಂದ ಎದುರಿಸುವ ಆತ್ಮಸ್ಥೈರ್ಯವನ್ನು ಹೊಂದಿದ್ದರು.

ಅಮುಗೆ ರಾಯಮ್ಮನ ವಚನಗಳಲ್ಲಿನ ಪ್ರಧಾನ ಗುಣ, ನಿಷ್ಠುರತೆ ಯಾವ ಮುಲಾಜಿಗೂ ಒಳಪಡದೆ ತನಗೆ ಅನ್ನಿಸಿದ್ದನ್ನು ನೇರವಾಗಿ, ಅಭಿವ್ಯಕ್ತಿಸುವ ಮನೋಭಾವ ಈಕೆಯದು. ಎಂಟು ನೂರು ವರ್ಷಗಳ ಹಿಂದೆ ಹೆಣ್ಣೊಬ್ಬಳು ಇಷ್ಟು ತೀವ್ರ ತರವಾದ ರೀತಿಯಲ್ಲಿ ಸಮಾಜದಲ್ಲಿನ ಜನರ ಡಾಂಭಿಕತೆಯನ್ನು ಕುರಿತು ಚಿಂತನೆಯನ್ನು ನಡೆಸಿರುದನ್ನು ಕಂಡಾಗ ಆಕೆಯಲ್ಲಿ ಮನೆಮಾಡಿದ್ದ ಆತ್ಮಸ್ಥೈರ್ಯವನ್ನು ನಾವು ಗುರುತಿಸಬಹುದಾಗಿದೆ.

"ಅರಿವಿನ ವಚನವುಳ್ಳವರಿಗೆ ಅಂಗದ ಹಂಗೇಕೆ?

ಅರಿವುಳ್ಳವರಿಗೆ ಗುರುವಿನ ಹಂಗೇಕೆ?

ಅರಿವುಳ್ಳವರಿಗೆ ಲಿಂಗದ ಹಂಗೇಕೆ?

ಅರಿವುಳ್ಳವರಿಗೆ ಗುರುವಿನ ಹಂಗೇಕೆ?

ಅರಿವುಳ್ಳವರಿಗೆ ಜಂಗಮದ ಹಂಗೇಕೆ?

ಅರಿವುಳ್ಳವರಿಗೆ ಪಾದೋದಕ ಪ್ರಸಾದದ ಹಂಗೇಕೆ?

ಅರಿವುಳ್ಳವರಿಗೆ ಅಮುಗೇಶ್ವರಲಿಂಗವನರಿದೆನೆಂಬ ಸಂದೇಹವೇಕೆ? [೧]

ಭಕ್ತರು ತಮ್ಮ ಸಾಧನೆಗಾಗಿ ಮಾರ್ಗದರ್ಶಕ ಸ್ವರೂಪಿಯಾಗಿ ಗುರುವನ್ನು ಸ್ವೀಕರಿಸುತ್ತಾರೆ. ಆದರೆ ಅಮ್ಮುಗೆ ರಾಯಮ್ಮ ಈ ರೀತಿಯಾಗಿ ತನ್ನ ಸಾಧನೆಯನ್ನು ಕುರಿತು ಶರಣ ತಾನೆ ತನ್ನ ಪ್ರಯತ್ನ

ಮತ್ತು ಮರು ಪ್ರಯತ್ನಗಳಿಂದ ಸಾಧಿಸಿ, ಸಿದ್ಧಿಯನ್ನು ಪಡೆಯಬೇಕು. ಆ ಮೂಲಕ ಆತ್ಮಸಾಕ್ಷಾತ್ಕಾರವಾಗುತ್ತದೆಯೆ ಹೊರತು, "ಗುರುವಿನ ಮುಖೇನ ಎಲ್ಲವನ್ನೂ ಸಾಧಿಸುತ್ತೇನೆಂದು ಭಾವಿಸುವುದು ನಮ್ಮ ಮೂರ್ಖತನವಾಗುತ್ತದೆ. ಈ ಮೂಲಕ ಈಕೆಯ ಪ್ರತಿಯೊಬ್ಬ ಮನುಷ್ಯ ತನ್ನ ಬದುಕಿನ ಸಾಕ್ಷಾತ್ಕಾರವೂ ಅವನ ಆತ್ಮಸ್ಥೈರ್ಯ ದೃಢನಿಲುವು ಆತನ ಪ್ರಯತ್ನದಿಂದ ಕೂಡಿರುತ್ತದೆ ಎಂಬ ವಿಚಾರವನ್ನು ಈ ಮೇಲಿನ ವಚನದಲ್ಲಿ ತಿಳಿಸಿದ್ದಾಳೆ.

ಅನುಭಾವಿಗೆ ಅಂಗಶೃಂಗಾರವುಂಟೆ?
ಅನುಭಾವಿಗೆ ಕಾಮಕ್ರೋಧವುಂಟೆ?
ಅನುಭಾವಿಗೆ ನಾಹಂ ಕೋಹಂ ಸೋಹಂ ಎಂಬ
ಭ್ರಾತಿನ ಭ್ರಮೆಯುಂಟೆ?
ಅನುಭಾವಿಗೆ ನನ್ನವರು ತನ್ನವರೆಂಬ
ಗನ್ನಗದಕಿನ ಮಾತುಂಟೆ?
ಅನುಭಾವಿಗಳೆಂಬವರು ಅಲ್ಲಿಗಲ್ಲಿಗೆ
ತಮ್ಮ ಅನುಭಾವಂಗಳ ಬೀರುವರೆ?
ಅನುಭಾವಿಗಳ ಪರಿಯ ಹೇಳಿದೆ ಕೇಳಿರಣ್ಣಾ:
ನೀರಮೇಲಣ ತೆಪ್ಪದಂತೆ, ಸಮುದ್ರದೊಳಗಣ ಬೆಂಗುಂಡಿನಂತೆ
ಇರಬಲ್ಲಡೆ ಅನುಭಾವಿಗಳೆಂಬೆನಯ್ಯಾ,
ವಚನಂಗಳ ಓದಿ ವಚನಂಗಳ ಕೇಳಿ
ಕಂಡ ಕಂಡ ಠಾವಿನಲ್ಲಿ ಬಂಡುಗೆಲೆವ ಜಗಭಂಡರ
ಆತ್ಮತೇಜಕ್ಕೆ ತಿರುಗುವ ವೇಷಧಾರಿಗಳ ಕಂಡು
ಅನುಭಾವಿಗಳೆಂದೆಡೆ ಅಘೋನರಕ ತಪ್ಪದು ಕಾಣಾ

– ಅಮುಗೇಶ್ವರಾ [2]

ಈ ಮೇಲಿನ ವಚನದಲ್ಲಿ 'ಅನುಭಾವ'ವನ್ನು ಕುರಿತು ರಾಯಮ್ಮ ಆಳವಾದ ಚಿಂತನೆಯನ್ನು ಮಾಡುತ್ತಾ, ಅನುಭಾವಿಯಾದವನಿಗೆ ನನ್ನವರು, ತಮ್ಮವರು ಎಂಬ ವ್ಯಾಮೋಹವಿಲ್ಲ. ಆತನಿಗೆ ಕಾಮ, ಕ್ರೋಧ, ಮದ, ಮಾತ್ಸರಗಳಾವವೂ ಇಲ್ಲ. ಅನುಭಾವಿಗೆ ನಾನಲ್ಲ, ನಾನಾರು? ಅವನೇ ನಾನು– ಇವಾವೂ ಇಲ್ಲ. ಅದೊಂದು ಅಂತರಂಗದ ವಿದ್ಯೆ. ತನ್ನನ್ನು ತಾನು ಅರ್ಥೈಸಿಕೊಳ್ಳುತ್ತಾ ದೈವೀಸಾಕ್ಷಾತ್ಕರಕ್ಕೆ ಅಣಿಮಾಡಿಕೊಳ್ಳುವ ಸ್ಥಿತಿ ಇಂತಹ ಸ್ಥಿತಿಯನ್ನು ಆಕೆ "ಅನುಭಾವ" ಎನ್ನುತ್ತಾಳೆ.

ಅನುಭಾವಿ ಎಂದು ಹೇಳಿಕೊಂಡು ತಿರುಗುವ ವೇಷಾಧಾರಿಗಳನ್ನು ಖಂಡಿಸುತ್ತಾ, ತನ್ನ ವಚನಗಳಲ್ಲಿ ಆತ್ಮವಿಮರ್ಶೆ ಮಾಡಿಕೊಳ್ಳುತ್ತಾಳೆ. ಅಷ್ಟೇ ಅಲ್ಲದೆ, ಪ್ರತಿಯೊಂದನ್ನು ತರ್ಕದ ಮೂಲಕ ಒಪ್ಪಿಕೊಳ್ಳುವ ಈಕೆ "ಮಂಡೆ ಬೋಳಿಸಿಕೊಂಡು ತುಂಡುಗಂಬಳಿಯ ಹೊದ್ದವರ ಕಂಡಡೆ ನಂಬಲಾರೆ ನೆಚ್ಚಲಾರ" ಎಂಬುವಲ್ಲಿನ ಮಾತಿನಲ್ಲಿನ ಆತ್ಮವಿಶ್ವಾಸವನ್ನು ಕಾಣಬಹುದಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಛಲಗಾತಿ ಏಕೆಂದರೆ ಯಾರ ಹಂಗೂ ಇಲ್ಲದೆ ನಿರ್ಭಯವಾಗಿ ತನ್ನ ಅನಿಸಿಕೆಗಳನ್ನು ಗಟ್ಟಿಯಾಗಿ ಹೇಳುವ ಕೆಚ್ಚೆದೆಯ, ಹೆಣ್ಣಾಗಿದ್ದಳು. ಅಂತಹ ಮಹತ್ವದ ಅಂಶವನ್ನು ಒಳಗೊಂಡ ವಚನಕಾರ್ತಿಯರಲ್ಲಿ, ಈಕೆಯು ಒಬ್ಬಳಾಗಿದ್ದಾಳೆ.

ಕಂಗಳ ಮುಂದಣ ಕಾಮ, ಮನದ ಮುಂದಣ ಆಸೆ

ಅಂಗದಲ್ಲಿ ಅಹಂಕಾರವಾಗಿಪ್ಪವರ ಅನುಭಾವಿಗಳೆಂಬೆನೆ?

ಸೂಳೆಯ ಮನೆಯಲ್ಲಿಪ್ಪ ಗವುಡಿಯಂತೆ

ತಮ್ಮ ತಮ್ಮ ಹಿರಿಯತನವ ಮುಂದುಗೊಂಡು

ಕುರಿಗಳಂತೆ ತಿರುಗುವ ಜಡರುಗಳ ಅನುಭಾವಿಗಳೆಂಬೆನೆ? [೩]

ಕಾಮ, ಮೋಹ, ಮದಗಳನ್ನು ತೊರೆಯದವರು ಎಷ್ಟು ಹಿರಿಯರಾದರೇನು? ಅಂತವರು ಅನುಭಾವಿಗಳಲ್ಲವೆಂದು ಕೇಳುವ. ಅಮುಗೆ ರಾಯಮ್ಮ ಅರಿಷಡ್ ವರ್ಗಗಳನ್ನು ಗೆಲ್ಲಲಾಗದವರು. ಹಿರಿಯರೂ ಅಲ್ಲ, ಅನುಭಾವಿಗಳೂ ಅಲ್ಲವೆಂದು ಹೇಳುತ್ತಾಳೆ. ಮುಂದುವರಿದು ಸೂಳೆಯ ಮನೆಯಲ್ಲಿರುವ ದಾಸಿಯರಂತೆ ಎಂದು ಕಟುವಾಗಿ ತನ್ನ ವಚನದಲ್ಲಿ ವಿಡಂಬಿಸುತ್ತಾ ಅಹಂಕಾರಿಗಳನ್ನು ಕಾಮಿಗಳನ್ನು ಭಂಡರಿಗೆ ಹೋಲಿಕೆ ಮಾಡುತ್ತಾ, ಮನುಷ್ಯರಲ್ಲಿ ಮೋಹವುಂಟಾಗಲು ಮನಸ್ಸಿನ ಚಂಚಲತೆಯ ಕಾರಣವೆಂಬ ಆಕೆಯ ನಿಲುವು ಮನಮುಟ್ಟುವಂತಹದ್ದಾಗಿದೆ.

ಮನುಷ್ಯ ಉನ್ನತ ಅಧ್ಯಾತ್ಮಿಕತೆಯನ್ನು ಹೊಂದಲು ಅವನ ನಡೆ ನುಡಿ ಪರಿಶುದ್ಧವಾಗಿರಬೇಕೆಂಬ ಅಂಶವು ಆಕೆಯ ವಚನಗಳಲ್ಲಿವೆ. ಅಲ್ಲದೆ ಒಬ್ಬ ಹೆಣ್ಣು ಅನುಭಾವ, ಆಧ್ಯಾತ್ಮಿಕತೆ, ಆಚಾರ, ವಿಚಾರ, ಕುರಿತ ಚಿಂತನೆಯಲ್ಲಿರುವ ಆಕೆಯಲ್ಲಿನ ಆತ್ಮಸ್ಥೈರ್ಯವನ್ನು ನಾವು ಕಾಣುತ್ತಾ, ಸ್ತ್ರೀಯ ಮನೋಸ್ಥೈರ್ಯವನ್ನು ಸಹ ಇಲ್ಲಿ ಕಾಣಲು ಸಾಧ್ಯವಾಗಿದೆ. ವಚನ ಚಳವಳಿಯಲ್ಲಿ ಸ್ತ್ರೀಯರು ಗಳಿಸಿಕೊಂಡ ಆತ್ಮಸ್ಥೈರ್ಯ ಅಮೋಘವಾಗಿತ್ತು. ಅದರಲ್ಲಿಯೂ ಕೆಲವರು ವಿಚಾರಚಂತಿಕೆಯ ಪತಿಯನ್ನು ರೂಪಿಸಿದ ಮಹಿಳೆಯರೂ ಇದ್ದಾರೆ. ಈ ಹಿನ್ನೆಲೆಯಲ್ಲಿ ಶರಣ ಸಾಹಿತ್ಯದಲ್ಲಿ ನೀಲಮ್ಮ, ಆಯ್ದಕ್ಕಿ, ಲಕ್ಕಮ್ಮ, ರಾಣಿ ಮಹಾದೇವಿಯನ್ನು ನೋಡಬಹುದಾಗಿದೆ.

ಲೋಕದ ಅಥವಾ ಪ್ರಪಂಚದ ಇತಿಹಾಸದಲ್ಲಿ ದಂಪತಿಗಳಿಬ್ಬರು ಆಧ್ಯಾತ್ಮಸಾಧನೆಯಲ್ಲಿದ್ದವರು ಸಿಕ್ಕುವುದು ಅಪರೂಪ. ಆದರೆ ಕನ್ನಡ ವಚನ ಸಾಹಿತ್ಯದಲ್ಲಿ ಸತಿ-ಪತಿಗಳಿಬ್ಬರೂ ಅನುಭಾವಿಗಳಾಗಿ ವಚನಕಾರರಾಗಿ ಒಂದೇ ಧ್ಯೇಯ ಹಾಗೂ ತತ್ವ ಪ್ರತಿಪಾದನೆಗಾಗಿ ಹೋರಾಟ ಮಾಡಿದ ನೂರಾರು ಸಂಖ್ಯೆಯ ಶರಣರನ್ನು ಕಾಣಬಹುದಾಗಿದೆ. ಅಂತಹ, ಮಹತ್ವದ ಆತ್ಮಸ್ಥೈರ್ಯವನ್ನು ಹೊಂದಿದ ವಚನಕಾರ್ತಿಯೆಂದರೆ.

ಕಾಶ್ಮೀರದಲ್ಲಿ ನಿತ್ಯ ಆರು ಸಾವಿರ ಜಂಗಮರಿಗೆ ದಾಸೋಹ ಮಾಡುತ್ತಾ ಶಿವಭಕ್ತಿಯನ್ನು ಆಚರಿಸುತ್ತಿದ್ದ ಮಹಾದೇವ ಮತ್ತು ಗಂಗಾದೇವಿಯೆಂಬ ರಾಜದಂಪತಿಗಳು, ಗಂಗಾದೇವಿ ಅನಂತರ ಮೋಳಿಗೆ ಮಹಾದೇವಿಯಾಗುತ್ತಾಳೆ. ಆ ಸಂದರ್ಭದಲ್ಲಿ ದೃಢವಾದ ಆತ್ಮವಿಶ್ವಾಸ ಹೊಂದಿದ್ದನ್ನು ಆಕೆಯ ಮಾತಿನಿಂದ ಗುರುತಿಸಿಕೊಳ್ಳಬಹುದಾಗಿದೆ.

"ಕಡಗ ಕಂಚಿಯದಾಮ ಕಟಿಸೂತ್ರ ಮುದ್ರಿಕೆ

-ಮುಡಿಯ ಮುತ್ತಿನ ಓಲೆಯೋಲೆ !

ನಡುವಿನೊಡ್ಯಾಣ ಪದಕ ಕಂಠಮಾಲೆ ಪೊಂದೊಡಿಗೆ

-ಪೆಂಡೆಯಗಳ ತೆಗೆದು

ಬೆಸೆದು ಪೂಸಿದ ನಿಜಭಸಿತ ಸರ್ವಾಂಗದೊಳಸೆವ

-ರುದ್ರಾಕ್ಷಿಯ ಧರಿಸಿ

ಮಿಸುಪ ಚೀನಾಂಬರದುಡಿಗೆಯೆನೆಲ್ಲ ತ್ಯಜಿಸು ತೆಗಾಪಿಯನುಟ್ಟು ಆಭರಣಗಳ ಭಾರವನ್ನಿಳುಹಿ ಗಂಗಾದೇವಿ ಭಸಿತದಿಂದ ಸಿಂಗರಿಸಿಕೊಂಡು ರುದ್ರಾಕ್ಷಿಮಾಲೆ ಧರಿಸಿ ಕಾಷಾಯ ವಸನಧಾರಿಯಾಗುತ್ತಾಳೆ." ಪತಿಯನ್ನು ಅನುಸರಿಸುತ್ತಾಳೆ.

ಭಾರತೀಯ ಸ್ತ್ರೀ ಪತಿಗೆ ಪ್ರಾಚೀನ ಕಾಲದಿಂದಲೂ ಗೌರವಿಸುವ ಪತಿಯಿದ್ದೆಡೆಯೆ ತನ್ನಯಿರುವು ಎಂಬುದನ್ನು ನಮ್ಮ ಪುರಾಣಗಳಲ್ಲಿಯೂ. ಸಾಮಾಜಿಕ ಪರಿಸರದಲ್ಲಿಯೂ ನೋಡಿರುವಂತೆ.ಇಲ್ಲಿ ಮಹಾದೇಪಿ ಎಂಬ ವಚನಕಾರ್ತಿಯು. "ಶ್ರೀಪಾದದ ಬಳಿಯೇ ನನ್ನ ಇರುವು" ಎಂದು ದೃಢನಿಶ್ಚಯ ಮಾಡಿ, ಆತ್ಮಸ್ಥೈರ್ಯದಿಂದ ನುಡಿಯುತ್ತಾಳೆ.

ಪತಿ ಮುಂದಿನ ಮಾರ್ಗದ ಕಷ್ಟವನ್ನು ತಿಳಿಸಿದಾಗ "ನೀನೆಂತು ನಿತ್ತರಿಪೆ ನಿರ್ವಾಣ ನಿಮ್ಮಿರವು" ಎಂದಾಗ, ಮಹಾದೇವಿಯು ಪತಿಯನ್ನು ಕುರಿತು,

"ಸಿಹಿಯಾದ ಹಾಲಿನ ರುಚಿ ತಿಳಿಯದೆ,

ಉಣ್ಣೆ ಕೆಚ್ಚಲಿಗೆ ಅಂಟಿಕೊಂಡು ರಕ್ತವನ್ನೇ ಹೀರುವಂತೆ

ಮುಕ್ತಿಯ ಸುಖ ನನಗೆ ದೊರೆಯುವಾಗ,

ಅದನ್ನು ಬಿಟ್ಟು ರಾಜ್ಯಭೋಗವನ್ನು ಅಪೇಕ್ಷಿಸಿದರೆ

ಉಣ್ಣೆಯಂತಾದೇನು"

ಎಂದು ಹೇಳುತ್ತಾ, "ಗಂಡು ಹೆಣ್ಣುಗಳೆರಡು ಗಂಡಭೇರುಂಡದೊಳು ಎರಡು ಮುಖ ಒಂದಾತ್ಮ" ಎಂಬರ್ಥದಲ್ಲಿ ನುಡಿಯುವಳು. ನಾನಾ ವಿಧದಲ್ಲಿ ಪತಿಗೆ ತನಗೆ ತಿಳಿದಂತೆ ಮನಮುಟ್ಟುವಂತೆ ಹಿತವಚನಗಳನ್ನಾಡುವ, ವಚನಕಾರ್ತಿಯ ವಿಚಾರವಂತಿಕೆ, ಆತ್ಮಸ್ಥೈರ್ಯ ಎರಡನ್ನೂ ಗಮನಿಸಬಹುದಾಗಿದೆ.

ಬಹಳ ಹೊತ್ತು ಹೆಂಡತಿಯ ಉಪದೇಶವನ್ನು ಆಲಿಸುತ್ತಿದ್ದ ಮಾರಯ್ಯ ಆಕೆಯ ತರ್ಕಬದ್ಧವಾದ ವಿಚಾರ ಸರಣಿಗೆ ಮನಸೋಲುವನು, ಆಕೆಯ ಜ್ಞಾನಕ್ಕೆ ತನ್ನ ಮನಸ್ಸಿನೊಳಗೆ ಹೆಮ್ಮೆ ಪಡುವನು.

ಈ ಮೇಲಿನ ಸಂವಾದದಿಂದ ಮಹಾದೇಪಿಯ ವೈಚಾರಿಕತೆ ಅನುಭಾವಿಕತೆ ನಿಶ್ಚಲವಾದ ನಿಲುವಿನ ಘನ ವ್ಯಕ್ತಿತ್ವದ ಪರಿಚಯವಾಗುತ್ತದೆ.

“ಸಂಸಾರದ ಸುಖವನ್ನೆ ನಿಜವಾದ ಸುಖವೆಂದು

ಭ್ರಮಿಸಿ ಭವಚಕ್ರದಲ್ಲಿ ಸಿಕ್ಕು ತಿರುಗುತ್ತಿರುವ

ಜಗತ್ತಿನ ಅಜ್ಞಾನ ಜೀವಿಗಳನ್ನು ಕುರಿತು,

“ಸಂಸಾರ ಸಂಗದಿಂದ ಉದಯಿಸಿದ ಸುಖವೇ ದುಃಖವೆಂದರಿಯದೆ

ಆ ಸುಖವನೆ ಮೆಚ್ಚಿ ಭವದುಃಖವೆಂಬ ಕ್ರೂರಜನ್ಮ ಚಕ್ರಕ್ಕೀಡಾಗಿ

ಅಲ್ಲಿ ತನ್ನ ಮರೆದು ತನಗಿಲ್ಲದ ಭ್ರಮೆಯ ತನ್ನದೆಂದು

ಅಂತಪ್ಪ ಘೋರದೊಳ ಹೋರಾಡುತ್ತಿಪ್ಪ ಮುಳುಗಾಡುತಿಪ್ಪ

ಅಜ್ಞಾನಿ ಜೀವಿಗಳು ನಿಮ್ಮನೆತ್ತ ಬಲ್ಲರಯ್ಯ ಎನ್ನಪ್ರಿಯ

ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ.

ಅಕ್ಕಮ್ಮನ ಆತ್ಮಸ್ಥೈರ್ಯವನ್ನು ಕುರಿತು ಹೇಳುವಂತಹ ಸಂದರ್ಭದಲ್ಲಿ ಆಕೆ ಮನುಷ್ಯನಲ್ಲಿರುವ ಅಹಂಕಾರವಳಿಯದ ಹೊರತು ವಿನಯವೆಂಬುದು ಬರಲಾಗದು ಎಂದು ನಂಬಿದ್ದಂತ ಶರಣರ ಮತಕ್ಕೆ ಅಭಿಮುಖವಾಗಿ ಈಕೆಯೂ “ಹಿರಿಯರೆಂದು ಹೇಳಿಕೊಳ್ಳುವವರ ಅಹಂಕಾರವನ್ನು ಕಂಡು ಅಕ್ಕಮ್ಮ ತನ್ನ ವಚನದಲ್ಲಿ ತೀವ್ರವಾಗಿ ವಿಡಂಬಿಸುತ್ತಾಳೆ.

“ಹೋತಿನ ಗಡ್ಡದಂತೆ ಗಡ್ಡದ ಹಿರಿಯರ ನೋಡಾ.

ಬಿಡಾರ ಬಿಡಾರವೆಂದು ಹಿರಿಯತನಕ್ಕೆ ಅಹಂಕರಿಸಿ,

ಆಚಾರಮಂ ಬಿಟ್ಟು ಅನಾಚಾರಮಂ ಸಂಗ್ರಹಿಸಿ,

ಭಕ್ತರೊಳು ಕ್ರೋಧ ಭ್ರಷ್ಟರೊಳು ಮೇಳ

ಇವರು ನರಕಕ್ಕೆ ಯೋಗ್ಯರು,

ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಲ್ಲಿ ”

ಇಲ್ಲಿ ಅಕ್ಕಮ್ಮ ಹಿರಿಯರೆಂದು ಹೇಳಿಕೊಂಡು ತಿರುಗುವವರನ್ನು ಕುರಿತು ನೇರವಾಗಿಯೇ ಹೇಳಿದ್ದಾಳೆ. ವಯಸ್ಸಿನಿಂದ ಅಧಿಕಾರದಿಂದ ಅಂತಸ್ತಿನಿಂದ ಹಿರಿಯರಾಗಲಾರರು. ಆಡಂಬರದಿಂದ ಹಿರಿಯರಾಗಲು ಸಾಧ್ಯವಿದೆಯೆಂಬುದನ್ನು ತಿಳಿಸುತ್ತಾ ನೇರವಾಗಿ ಆಕೆ ಗಡ್ಡಬಿಟ್ಟು ತಪಸ್ಸು

ಮಾಡುವುದರಿಂದ ಹಿರಿಯರಾಗಲಾರರೆಂದು ಸ್ಪಷ್ಟಪಡಿಸಿದ್ದಾಳೆ. ಅಂತಹ ಭ್ರಷ್ಟರೊಂದಿಗೆ ಕೂಡಿಕೊಂಡು ಭ್ರಷ್ಟರಾಗಿರುವ ಇಂತವರು ನರಕಕ್ಕೆ ಹೋಗುವರು ಎನ್ನುವಲ್ಲಿ ಆಕೆಯಲ್ಲಿನ ಆತ್ಮಸ್ಥೈರ್ಯವನ್ನು ತಿಳಿಯಬಹುದಾಗಿದೆ.

ಮುಕ್ತಾಯಕ್ಕ : – ಈಗಾಗಲೇ ಈಕೆಯ ಪರಿಚಯವನ್ನು, ಈಕೆಯಲ್ಲಿನ ವಿಚಾರವಂತಿಕೆಯನ್ನು ನೋಡಲಾಗಿದೆ. ಸಮಗ್ರವಾಗಿ ವಚನಚಳವಳಿಯಲ್ಲಿ ವಚನಕಾರ್ತಿಯರ ಪಾತ್ರವನ್ನು ನೋಡಿದಾಗ ಎಲ್ಲರ ಗಮನವನ್ನು ಸೆಳೆಯುವಂತಹ ಮಹತ್ವವಾದವಳು. ಮುಕ್ತಾಯಕ್ಕ ಏಕೆಂದರೆ, ಆಧ್ಯಾತ್ಮಿಕ ನಿಲುವಿನ ಎತ್ತರಕ್ಕೂ ಕೂಡ ಈಕೆಯ ಚಿಂತನೆ ನಡೆದಿರಬಹುದು.

ತನ್ನ ಅಣ್ಣನಿಂದ ಅಜಗಣ್ಣನ ಮತ್ತು ಈಕೆಯ ಸಂಬಂಧ ಇಹದಲ್ಲಿ ಸೋದರ ವಾತ್ಸಲ್ಯ ಮಾತ್ರವಾಗದೆ, ಅದನ್ನು ಮೀರಿದ ಸಾಕಾರ ಚೈತನ್ಯ ಶಕ್ತಿಯಾಗಿದ್ದನು. ಅಲ್ಲದೆ ಇವರಿಬ್ಬರ ಸಂಬಂಧ ಗುರು–ಶಿಷ್ಯರ ಸಂಬಂಧವಾಗಿತ್ತು. ಇಂದಿನ ಯುಗದಲ್ಲಿ ಸ್ತ್ರೀಯರು ಆತ್ಮವಿಶ್ವಾಸವೇ ಇಲ್ಲದೆ ಪರಾವಲಂಬಿಯಾಗಿ ಬದುಕುತ್ತಾ, ಪ್ರತಿಯೊಂದು ತೀರ್ಮಾನವನ್ನು ಪರರ ತೀರ್ಮಾನಕ್ಕೆ, ನಿರ್ಧಾರಕ್ಕೆ ಹೆಚ್ಚು ಮನ್ನಣೆಯನ್ನು ನೀಡುವ ಇಂದಿನ ಸ್ತ್ರೀಯರಿಗಿಂತಲೂ ೧೨ನೆಯ ಶತಮಾನದ ವಚನ ಚಳವಳಿಯ ಸಂದರ್ಭದಲ್ಲಿನ ಅನೇಕ ಸ್ತ್ರೀಯರಿಗೂ, ಒಂದು ರೀತಿ ಅಜಗಜಾಂತರ ವ್ಯತ್ಯಾಸವಿರುದನ್ನು ಇಲ್ಲಿ ಸ್ಪಷ್ಟವಾಗಿ ಮನಗಾಣಬಹುದಾಗಿದೆ. ಇದಕ್ಕೆ ಉದಾಹರಣೆಯಂತೆ, ತನ್ನ ಸೋದರನನ್ನು ಕಳೆದುಕೊಂಡು ದುಃಖದಲ್ಲಿದ್ದ ಮುಕ್ತಾಯಕ್ಕನನ್ನು ಸಂತೈಸಲು ಬಂದ ಅಲ್ಲಮನನ್ನು ಹಲವಾರು ವಿಧವಿಧಗಳ ಪ್ರಶ್ನೆಯ ಮೂಲಕ ತನ್ನ ಮನಸ್ಸಿನ ಅನುಮಾನ ದ್ವಂದ್ವಗಳನ್ನು ಬಗೆಹರಿಸಿಕೊಳ್ಳಲು ಮುಂದಾಗಿದ್ದು ಮತ್ತು ಆ ನಂತರ ಅಲ್ಲಮನ ವಿಚಾರವಂತಿಕೆಯನ್ನು ಕಂಡು ಆತನನ್ನು ಮೆಚ್ಚಿಕೊಳ್ಳುವಿಕೆಯಲ್ಲಿ ಅಂದಿನ ಸಾಮಾಜಿಕ ಪರಿಸರದಲ್ಲಿ ಈ ರೀತಿಯ ದಿಟ್ಟತೆಯ "ಸ್ತ್ರೀ"ಯಾಗಿ ಮುಕ್ತಾಯಕ್ಕನ ಸಾಧನೆ. ಇಡೀ ವಚನ ಚಳವಳಿಯ ಸಾಧನೆಯಾಗಿರುದನ್ನು ಮರೆಯುವಂತಿಲ್ಲ.

'ಅದ್ವೈತವ ನೆಲೆಗೊಳಿಸಿ ಎರಡಳಿದೆನೆಂಬವರು
ಶಿಶುಕಂಡ ಕನಸಿನಂತಿರಬೇಕಲ್ಲದೆ,
ನುಡಿದು ಹೇಳುವನ್ನಕ್ಕರ ಭಿನ್ನವಲ್ಲದೇನು ಹೇಳಾ?
ಅರಿವರತು ಮರಹು ನಷ್ಟವಾಗಿ ಗುರುವ ತೋರಿದೆನೆಂಬರು.

ಇದಿರಿಂಗೆ ಕರುಳಕಲೆಯನರುಹುವ ಪರಿಯೆಂತು ಹೇಳಾ?

ಮನದ ಕೊನೆಯ ಮೊನೆಯ ಮೇಲಣ ಅರಿವಿನ ಕಣ್ಣ ಮುಂದೆ

ಸ್ವಯಂಪ್ರಕಾಶ ತೋರುತ್ತಿದ್ದಡೆ ತಾನಾಗಬಲ್ಲನೆ?

ನೆರೆಯರಿತು ಮರೆಯಬಲ್ಲಡೆ

ಎನ್ನ ಅಜಗಣ್ಣನಂತೆ ಶಬ್ದಮುಗ್ಧನಾಗಿರಬೇಕಲ್ಲದೆ,

ಶಬ್ದ ಸಂದಣಿಯ ಮಾತು ಸಯವಲ್ಲ ನೋಡಯ್ಯಾ [೫]

ಇಲ್ಲಿ ಮುಕ್ತಾಯಕ್ಕ ಮಾತಿನ ಸೂತಕಕ್ಕೆ ಒಳಗಾಗದೇ ನಿಶ್ಶಬ್ದವಾಗಿರಬೇಕು. ಶಬ್ದಸಂದಣಿಯ ಮಾತು ಅನುಭಾವಿಯ ಲಕ್ಷಣವಲ್ಲ. ಅರಿವು ಮರೆವಿನ ಸೀಮೆ ತೊರೆದು ತನ್ನರಿವೇ ಗುರುವಾಗಿ ನಿಂದವರು ಶಬ್ದಸೂತಕಿಗಳಾಗದೆ, ಅಜಗಣ್ಣನಂತೆ ಶಬ್ದಮುಗ್ಧರಾಗಿರಬೇಕೆಂದೂ, ಪ್ರಭುದೇವರಿಗೆ ಆ ನಿಲವು ಸಾಧ್ಯವಾಗಿಲ್ಲವೆಂದು ಈ ಮೇಲಿನ ವಚನದಲ್ಲಿ ಪ್ರಭುದೇವ ಅನುಭಾವದ ನೆಲೆಯನ್ನೇ ಪ್ರಶ್ನಿಸುವುದನ್ನು ಕಾಣಬಹುದಾಗಿದೆ. ಇದಕ್ಕೆ ಪ್ರತಿಯಾಗಿ ಮುಕ್ತಾಯಕ್ಕ ಆರೋಪಿಸಿದ ಮಾತಿನ ಮೈಲಿಗೆಯನ್ನು ಪರಿಹರಿಸಿಕೊಳ್ಳಲು ಪ್ರಭುದೇವರು ಮಾತು ಮೌನದ ಚರ್ಚೆಯಯನ್ನು ಪ್ರಾರಂಭಿಸುತ್ತಾರೆ. "ಅರಿತು ನುಡಿದ ನುಡಿ ಪರತತ್ವ; ಶರಣನ ಮಾತು ಜ್ಯೋತಿರ್ಲಿಂಗ, ಅವ್ಯಕ್ತ ಪರತತ್ವವನ್ನು ತಿಳಿವಳಿಕೆಗೆ ಮುಟ್ಟಿಸುವ ಮಾತು ಅನುಭಾವಿಯ ಮೌನದಷ್ಟೆ ಬೆಲೆಯುಳ್ಳದ್ದು ಎನ್ನುವ ಪ್ರಭುದೇವರ ವಿವರಣೆಗಳು ಮುಕ್ತಾಯಕ್ಕನ ಸಂದೇಹವನ್ನು ಪೂರ್ಣವಾಗಿ ನಿವಾರಿಸುವುದಿಲ್ಲ. ಆ ಸಂದರ್ಭದಲ್ಲಿ ಈಕೆಯು "ಶಬ್ದಕ್ಕೆ ಹೇಸಿ ಮಗುದನಾದ, ನುಡಿಯ ಹಂಗು ಮೀರಿದ ಅಜಗಣ್ಣನ ಉನ್ನತ ನೆಲೆ ಪ್ರಭುವಿನದಾಗಿಲ್ಲವೆಂದು ನೇರವಾಗಿಯೇ ಇಲ್ಲಿ ತಿಳಿಸುವಲ್ಲಿ, ಅಲ್ಲಮನ ವ್ಯಕ್ತಿತ್ವವನ್ನು ವಿಡಂಬಿಸುವಲ್ಲಿನ ಆಕೆಯ ಆತ್ಮಸ್ಥೈರ್ಯವು ಮಹತ್ವವಾದುದಾಗಿದೆ.

ಅಕ್ಕಮ್ಮ :- ಈಕೆಯು ಕೂಡ ಆತ್ಮಸ್ಥೈರ್ಯವನ್ನು ಹೊಂದಿದ, ವಚನಕಾರ್ತಿಯರಲ್ಲಿ ಒಬ್ಬಳಾದವಳು. ಏಕೆಂದರೆ ಇವಳ ವಚನಗಳಲ್ಲಿನ ಮಾತು ಖಂಡನೆ ಆ ರೀತಿಯದಾಗಿದೆ. ಉದಾ: "ಗುರುವಿಂದಡೂ ಆಚಾರ ಭ್ರಷ್ಟನಾದಡೆ ಅನುಸರಿಸಲಾಗದು. ಲಿಂಗವಾದಡೂ ಆಚಾರದೊಹಳವಾದಲ್ಲಿ ಪೂಜಿಸಲಾಗದು. ಜಂಗಮವಾದಡೂ ಆಚಾರ ಅನುಸರಣೆಯಾದಲ್ಲಿ ಕೂಡಲಾಗದು ಎನ್ನುವ ಆಕೆಯ ವ್ಯಕ್ತಿತ್ವವು ಆಕೆಯಲ್ಲಿನ ಆತ್ಮವಿಶ್ವಾಸ, ಆತ್ಮಸ್ಥೈರ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಈಕೆಯ ವಚನಗಳಲ್ಲಿ ವ್ರತಾಚಾರದ ಅರ್ಥ ಮಹತ್ವವಾದದ್ದು. ವ್ರತಾಚಾರಗಳು ಕೇವಲ ಬಹಿರಂಗದ ಕ್ರಿಯೆಗಳಾಗದೆ, ಅಂತರಂಗದ ಶುದ್ಧಿ ಮತ್ತು ಅಂತರಾತ್ಮನ ಅನುಸಂಧಾನವಾಗಬೇಕೆನ್ನುವ ದೃಢನಿಷ್ಠೆ ಈಕೆಯದು.

"ವ್ರತವ ಹಿಡಿವಲ್ಲಿ, ವ್ರತವ ಉಪದೇಶ ಮಾಡುವಲ್ಲಿ

ಹಿಡಿವಾತನ ಯುಕ್ತಿ ಎಂತೆಂದಡೆ:

ಮನ, ವಚನ, ಕಾಯ, ತ್ರಿಕರುಣರುದ್ಧಾತ್ಮನಾಗಿ,

ಸತಿ, ಸುತ, ಬಂಧುವರ್ಗಂಗಳೆಲ್ಲವು ಏಕತ್ರವಾಗಿ,

ನಡೆವುದು ನಡೆಯದಿಹುದೆಂಬುದ ಸ್ಥಿರಕರಿಸಿ,

ಶ್ರುತ, ದೃಷ್ಟ, ಅನುಮಾನ, ಮೂರನೊಂದುಮಾಡಿ

ಮತ್ತೆ ಏನುವ ತೋರದೆ ವ್ರತವಸ್ತುವನಾದರಿಸಬೇಕು.

ವ್ರತದೀಕ್ಷೆಯ ಮಾಡುವಲ್ಲಿ ಗುರುವಿನ ಇರವೆಂತೆಂದಡೆ;

ಅವನ ಆಗು ಚೇಗೆಯನರಿತು ಅರ್ಥಿಕಾರರಿಗೆ ಇದಿರು ಮೆಚ್ಚುವಭೇದ

ಹಿರಣ್ಯದ ಒದಗಿನ ಲಾಗು, ಕೊಲೆ ಹಗೆಯಪ್ಪನ,

ರಾಗವಿರಾಗಗಳೆಂಬ ಭಾವವ ವಿಚಾರಿಸಿ,

ಈ ವ್ರತನೇಮ ನಿನಗೆ ಲಾಗಲ್ಲ ಎಂದು ಅರೆಬಿರಿದಿನ ನೇಮ.

ತೊಡಕಿನಂಬಿನ ಘಾಯ ತಪ್ಪಿದಡೆ

ಇಹಪರದಲ್ಲಿ ಉಭಯದೋಷ,"

ಹೀಗೆಂದು ಉಪದೇಶವಂ ಕೊಟ್ಟು ಸಂತೈಸುವುದು ಗುರುಸ್ಥಲ,

ಆ ಗುಣಕ್ಕೆ ಮುಯ್ಯಾಂತು, ಪರಮಹರುಷಿತನಾಗಿ,

ಗಣಸಮೂಹಂ ಕೂಡಿ, ಪರಮ ವಿರಕ್ತರಂ ಕರೆದು,

ಮಹತ್ತು, ನರಹಿ, ಗುರುಲಿಂಗಜಂಗಮಸಾಕ್ಷಿಯಾಗಿ ಮಾಡುವುದೇ ವ್ರತ,

ಹೀಗಲ್ಲದೆ, ಮನಕ್ಕೆ ಬಂದಂತೆ, ತನು ಹರಿದಾಡುವಂತೆ,

ಊರೂರ ದಾರಿಗರಲ್ಲಿ ವ್ರತವ ಮಾಡಿಕೊಳ್ಳಿಯೆಂದು ಸಾರಲಿಲ್ಲ.

ಇಂತೀ ಉಭಯವನಿತು ವ್ರತಕ್ಕೆ ಅರ್ಹನಾಗಬೇಕು.

ಇಂತೀ ಸರ್ವಗುಣಸಂಪನ್ನ ಮಾಡಿಸಿಕೊಂಬವನೂ, ತಾನೆ,

ಮಾಡುವಾತನೂ ತಾನೆ.

ಆಚಾರವೆ ಪ್ರಾಣವಾದ ರಾಮೇಶ್ವರ ಲಿಂಗವು ತಾನೆ [6]

ಇಲ್ಲಿ ಆಚಾರವನ್ನೇ ಪ್ರಾಣವಾಗಿಸಿಕೊಂಡಿರುವ ಅಕ್ಕಮ್ಮ ವ್ರತಾಚಾರಕ್ಕೆ ಹೊರತಾದವರನ್ನು ನಿರ್ಭಯವಾಗಿ ಖಂಡಿಸುತ್ತಾಳೆ. ಇದೇ ಸಂದರ್ಭದಲ್ಲಿ ಅಕ್ಕಮ್ಮನ ಉತ್ಕಟಲಿಂಗನಿಷ್ಠೆ ಆಕೆಯ ಭಕ್ತಿಯು ಸಾಧನೆಯ ಮುಖ್ಯ ಸತ್ವವಾಗಿದೆ. ಇಷ್ಟಲಿಂಗ ಧಾರಣವಾಗಿ ಲಿಂಗವಂತನಾದ ಭಕ್ತ. ತನ್ನ ಕುಟುಂಬದ ಎಲ್ಲರೊಂದಿಗೆ ಏಕದೈವ ನಿಷ್ಠೆಯ ವ್ರತವಾಗಿ, ಪಾಲಿಸಬೇಕೆನ್ನುವ ಅಕ್ಕಮ್ಮನ ಆತ್ಮವಿಶ್ವಾಸ ಅಗಾಧವಾದುದು. ಅಲ್ಲದೆ, ಈಕೆಗೆ ಶೀಲ, ಸದಾಚಾರವೆ ಉನ್ನತ ವ್ರತ ಎಂಬುದಾಗಿ ಈಕೆಯ ವಚನದಲ್ಲಿ ತಿಳಿಯಬಹುದಾಗಿದೆ. ಅಕ್ಕಮ್ಮ ಇತರ ವಚನಕಾರ್ತಿಯರಿಗಿಂತ ಒಂದು ಹೆಜ್ಜೆ ಮುಂದುವರಿದು, ಮದ್ಯಪಾನ, ಮಾಂಸಾಹಾರ, ಪರದಾರ ಗಮನ, ಹುಸಿ, ಇಂತವುಗಳಲ್ಲಿ ಮಗ್ನರಾದ ದುರಾಚಾರಿಗಳ ಮುಖದರ್ಶನವು ನಿಷೇಧವೆನ್ನುತ್ತಾಳೆ. ನೇರ ನಿಷ್ಠುರವಾದಿಯಾದ ಅಕ್ಕಮ್ಮ ಅತ್ಯಂತ ದಿಟ್ಟ ಆತ್ಮವಿಶ್ವಾಸವನ್ನು ಹೊಂದಿದ್ದಕ್ಕೆ ಸಾಕ್ಷಿಯಾಗಿ ಆಕೆ "ಆಚಾರವೆ ಪ್ರಾಣವಾದ ರಾಮೇಶ್ವರ ಲಿಂಗವಾದಡೂ ವ್ರತಭ್ರಷ್ಟನೆಂದು ಬಿಡುವೆ" ಎನ್ನುವಲ್ಲಿ ಆಕೆಯ ಆತ್ಮವಿಶ್ವಾಸವನ್ನು ಕಾಣಬಹುದಾಗಿದೆ.

ಹೀಗೆ ಅನೇಕ ವಚನಕಾರ್ತಿಯರು ಆತ್ಮವಿಶ್ವಾಸದಿಂದ ನಡೆದುಕೊಳ್ಳುತ್ತಿದ್ದರು ಎಂಬುದನ್ನು ಈ ಸಂದರ್ಭದಲ್ಲಿ ತಿಳಿಯಬಹುದಾಗಿದೆ.

ಅಡಿ ಟಿಪ್ಪಣಿ

೧. ಶಿವಶರಣೆಯರ ವಚನ ಸಂಪುಟ – ಸಂ. ಡಾ. ವೀರಣ್ಣ ರಾಜೂರ – ಪುಟಸಂಖ್ಯೆ – ೧೮೫ – ವಚನ – ೫೭೭ (೭೦)

೨. ಅದೇ ಸಂಪುಟ – ಪುಟಸಂಖ್ಯೆ – ೧೬೭ – ೧೬೮, ವಚನ – ೫೧೩ – (೬)

೩. ಅದೇ ಸಂಪುಟ – ಪುಟಸಂಖ್ಯೆ – ೧೬೭, ವಚನ – ೫೧೨ – (೫)ನೆಯ ವಚನ

೪. ಶಿವಶರಣೆಯರ ವಚನ ಸಂಪುಟ – ೫, ಪುಟಸಂಖ್ಯೆ – ೧೬೫,, ವಚನ – ೫೦೭, (೧೫೯)ನೆಯ ವಚನ

೫. ಶಿವಶರಣೆಯರ ವಚನ ಸಂಪುಟ – ೫, ಪುಟಸಂಖ್ಯೆ – ೨೭೨, ವಚನ – ೮೫೬ (೬)ನೆಯ ವಚನ

೬. ಶಿವಶರಣೆಯರ ವಚನ ಸಂಪುಟ – ೫, ಪುಟಸಂಖ್ಯೆ – ೧೫೬,, ವಚನ – ೪೮೨ (೧೨೮)ನೆಯ ವಚನ

ಅಧ್ಯಾಯ – ೫

ವಚನಕಾರ್ತಿಯರ ವಿಚಾರವಂತಿಕೆ

೧೨ನೆಯ ಶತಮಾನದಲ್ಲಿ ಮಾತನಾಡಲು ಪ್ರಾರಂಭಿಸಿದಂತಹ ವಚನಕಾರ್ತಿಯರು ಆಲೋಚಿಸಿದ, ಚಿಂತಿಸಿದ, ಚರ್ಚಿಸಿದ ವಿಚಾರಗಳು ಯಾವುವು? ಅವರು ಸಮಾಜದಲ್ಲಿ ನಿರ್ವಹಿಸುತ್ತಿದ್ದ ಪಿಚಾರವಂತಿಕ ಹೀಗೆ ಅನೇಕ ಪಿಷಯಗಳು ಈ ವಚನಗಳಿಂದ ನಾವು ತಿಳಿಯಬಹುದಾಗಿದೆ.

ಈ ಸಂದರ್ಭದಲ್ಲಿ ನಮಗೆ ನೆನಪಾಗುವುದು "ಗಜೇಶ ಮಸಣಯ್ಯನ ಹೆಂಡತಿ ಪುಣ್ಯಸ್ತ್ರೀ"ಯ ವಚನ

'ಹೊನ್ನು ಬಿಟ್ಟು ಲಿಂಗವನೊಲಿಸಬೇಕೆಂಬರು,
ಹೊನ್ನಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ?
ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು,
ಹೆಣ್ಣಿಂಗೆಯೂ ಲಿಂಗರಕ್ಕೆಯೂ ವಿರುದ್ಧವೆ?
ಮಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು,
ಮಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ?
ಅಂಗವ ಬಿಟ್ಟು ಲಿಂಗವನೊಲಿಸಬೇಕೆಂಬರು,
ಅಂಗಕ್ಕೆಯೂ ಲಿಂಗಕ್ಕೆಯೂ ವಿರುದ್ಧವೆ? . . .
ಇಂದ್ರಿಯಗಳ ಬಿಟ್ಟು ಲಿಂಗವನೊಲಿಸಬೇಕೆಂಬರು,
ಇಂದ್ರಿಯಂಗಳಿಗೆಯೂ ಲಿಂಗಕ್ಕೆಯೂ ವಿರುದ್ಧವೆ?
ಜಗವ ಬಿಟ್ಟು ಲಿಂಗವನೊಲಿಸಬೇಕೆಂಬರು,
ಜಗಕ್ಕೆಯೂ ಲಿಂಗಕ್ಕೆಯೂ ವಿರುದ್ಧವೆ
ಇದು ಕಾರಣ, ಪರಂಜ್ಯೋತಿ ಪರಮ ಸಂದರ್ಭ ಕರುಣಿ ಪರಮಶಾಂತನೆಂಬ ಲಿಂಗವು

ಕೋಪದ ಮುನಿಸನರಿದಡೆ ಕಾಣಬಹುದು,

ಮರದಡೆ ಕಾಣಬಾರದು

ಅರಿವಿಂದ ಕಂಡೊದಗಿದ ಸುಖವು ಮಸಣಯ್ಯ ಪ್ರಿಯ ಗಜೇಶ್ವರಾ [೧]

ಈ ರೀತಿಯಾಗಿ ಹೆಣ್ಣು, ಹೊನ್ನು, ಮಣ್ಣು ಇಂದ್ರಿಯ ಜಗತ್ತುಗಳನ್ನು ಬಿಟ್ಟು ಲಿಂಗವನ್ನು ಒಲಿಸಬೇಕೆಂದು ಅಜ್ಞಾನಿಗಳು ಮಾತ್ರ ಹೇಳುತ್ತಾರೆ ಎನ್ನುತ್ತಾ ಲಿಂಗಕ್ಕೆ ವಿರುದ್ಧವಲ್ಲವೆಂದು ಈಕೆ ವಿಚಾರಮಾಡುತ್ತಾ, ಪರದ ಸಾಧನೆಗೆ ಲೋಕದಿಂದ ತಪ್ಪಿಸಿಕೊಳ್ಳುವ ಅಗತ್ಯವೆ ಇಲ್ಲವೆಂದಿದ್ದಾಳೆ.

ಆತ್ಮಾವಲೋಕನವಿದ್ದಾಗ ಮಾತ್ರ ಅಂತರಂಗ ಕಾಣಿಸಿಕೊಳ್ಳುತ್ತದೆ. ಎಂಬ ಅಂಶವನ್ನು ಕುರಿತು ಈ ವಚನದಲ್ಲಿನ ವಿಚಾರದಿಂದ ತಿಳಿಯಲು ಸಾಧ್ಯವಾಗಿದೆ.

"ಎನ್ನನರಿಯಿಸದಿರುವೆ, ಎನ್ನನರಿಯಿಸು; ನಿನ್ನ ನರಿಯಿಸಬೇಡ

ಎನ್ನನರಿಯದವ ನಿನ್ನನರಿಯ

ಎನ್ನನರಿಯಿಸದೆ ನಿನ್ನ ನರಿಯಿಸಿದಡೆ,

ನೀನೆನಗೆ ಗುರುವಲ್ಲ; ನಾ ನಿನಗೆ ಶಿಷ್ಯನಲ್ಲ.

ಎನ್ನನರಿಯಿಸಿದಡೆ ನೀನೆನಗೆ ಗುರು; ನಾ ನಿನಗೆ ಶಿಷ್ಯ.

ಮಸಣಯ್ಯಪ್ರಿಯ ಗಜೇಶ್ವರಾ ! [೨]

ಈ ವಚನದಲ್ಲಿ ತನ್ನನ್ನು ತಾನು ಅರಿಯುವ ಕ್ರಿಯೆಯ ಮೂಲಕ ಆತ್ಮಾವಲೋಕನ ಸಾದ್ಯವಾಗುತ್ತದೆ. ಅಲ್ಲದೆ, ಈಕೆ ಅಂತರಂಗದ ತಿಳಿವಿಗಾಗಿ ಹಂಬಲಿಸಿದ್ದಾಳೆ ಹಾಗೂ "ಎನ್ನನರಿಯದವ ನಿನ್ನನರಿಯ" ಎನ್ನುವ ಮಾತಿನಲ್ಲಿ ಅತ್ಮವನ್ನು ಅರಿಯದ ಯಾವುದೇ ವ್ಯಕ್ತಿ ಪರಮಾತ್ಮನನ್ನು ತಿಳಿಯಲು ಸಾಧ್ಯವಿಲ್ಲ ಎಂಬ ವಿಚಾರಪರವಾದ ಅರಿವಿನ ಆತ್ಮದ ಸಾಕ್ಷಾತ್ಕಾರವನ್ನು ಕುರಿತು, ಇಲ್ಲಿ ಅಭಿವ್ಯಕ್ತಿಸಿರುವ ಆಕೆಯ ವಿಚಾರಲಹರಿಯನ್ನು ಗಮನಿಸಬಹುದಾಗಿದೆ.

ಮುಕ್ತಾಯಕ್ಕ --> ಶಿವಶರಣೆಯರಲ್ಲಿಯೆ ಮುಕ್ತಾಯಕ್ಕ ಬಹಳ ದಿಟ್ಟತನದ ಸಾಧಕಳು. ಆಕೆ ಆತ್ಮಸಾಧನೆಯಲ್ಲಿ ಆತ್ಮವಿಶ್ವಾಸವುಳ್ಳವಳು, ಮಹದೇವಿಯಕ್ಕನಂತೆ ವಿನೀತಳೂ, ಶಾಂತಳೂ ಅಲ್ಲ.

ಮುಕ್ತಾಯಕ್ಕ ಕೇವಲ ವಿಚಾರವಾದಿ. ಜ್ಞಾನಮಾರ್ಗದವಳು ಜ್ಞಾನದಲ್ಲಿ ಚೆನ್ನಬಸವಣ್ಣನ ಅಚ್ಚು.

ಸಹೋದರನಾದ ಅಜಗಣ್ಣ ಲಿಂಗೈಕ್ಯನಾದುದನ್ನು ಕುರಿತು ಮುಕ್ತಾಯಕ್ಕ ಪ್ರಲಾಪಿಸುತ್ತ, ಕಣ್ಣೀರು ಸುರಿಸುತ್ತ ಮರಣದ ತೊಡಕನ್ನು ಬಿಡಿಸಲಾರದೆ, ಲೌಕಿಕದ ಸತ್ಯವನ್ನೂ ಪರಮಾರ್ಥದ ಅಸತ್ಯವನ್ನೂ ಕಂಡುಕೊಂಡಂತೆ ದುಃಖಿಸುತ್ತಿರಲು ಅಲ್ಲಮಪ್ರಭು ಮನಕರಗಿದವನಾಗಿ ಆಕೆಗೆ ಕಾಣಿಸಿಕೊಂಡು, ಲಿಂಗನು, ಲಿಂಗಮನ, ಲಿಂಗಪ್ರಾಣ, ಎಂದರಿಯದೆ ಭಿನ್ನಭಾವದಿಂದ ನೋಡಬಾರದು ಎಂದು ಹೇಳಿದನು. ಪ್ರತಿಯಾಗಿ ಈಕೆಯೂ ಮನದಲ್ಲಿ ಮನೆ ಮಾಡಿಕೊಂಡಿರುವ ಲಿಂಗವನ್ನು ತೋರುವ ಗುರು ಕಣ್ಮರೆಯಾದನು. ಆದ್ದರಿಂದ ದುಃಖಿಸುತ್ತೇನೆ ಎಂದು ಮುಕ್ತಾಯಕ್ಕ ಉತ್ತರಕೊಟ್ಟಳು.

ಅಲ್ಲಮಪ್ರಭು ತನ್ನ ಜೀವಮಾನದಲ್ಲಿ ಬಸವಣ್ಣಾದಿ ಹಲವು ಸಾಧಕರನ್ನು ಸಂಧಿಸಿ, ಅವರ ಲೋಪದೋಷಗಳನ್ನು ತೋರಿಸಿ ಸರಿಯಾದ ಮಾರ್ಗವನ್ನು ಉಪದೇಶಿಸಿದನಷ್ಟೆ ಆ ಸಂದರ್ಭಗಳಲೆಲ್ಲ ಗುರುವಿನಿಂದ ಶಿಷ್ಯರ ಪರೀಕ್ಷೆಯಾಯಿತು. ಮುಕ್ತಾಯಕ್ಕನನ್ನು ಅಲ್ಲಮ ಪ್ರಭು ಸಂಧಿಸಿದಾಗ ಶಿಷ್ಯಯಿಂದ ಗುರುವಿನ ಪರೀಕ್ಷೆಯಾಯಿತು. ಪರೀಕ್ಷೆಯಲ್ಲಿ ತೇರ್ಗಡೆಯಾದುದರಿಂದ ಅಜೇಯನೆಂದು ಪ್ರಶಸ್ತಿಯನ್ನು ನೀಡಿರುವರು. ಇದರಿಂದ ವಚನಕಾರ್ತಿಯಾದ ಮುಕ್ತಾಯಕ್ಕನ ಬೌದ್ಧಿಕ ತಿಳಿವಳಿಕೆಯ ಮಟ್ಟವನ್ನು ಅರಿಯಲು ಸಾಧ್ಯವಾಗುತ್ತದೆ ಹಾಗೂ ಆಕೆಯ ವಿಚಾರಪರವಾದ ಮಾತಿನ ಛಾಟಿಯನ್ನು ಈ ಒಂದು ಸಂದರ್ಭದಲ್ಲಿ ಗಮನಿಸಬಹುದಾಗಿದೆ.

ಅಲ್ಲದೆ ಸ್ತ್ರೀ ಪುರುಷನ ಭೋಗವಸ್ತು, ಮಾಯೆ, ಕೀಳೆಂದಾಗಲಿ ಅಥವಾ ಸ್ತ್ರೀ ಕೇವಲ ಗೃಹಕೃತ್ಯಕ್ಕಷ್ಟೆ ಮೀಸಲು ಎಂಬ ಗಡಿಯನ್ನು ದಾಟಿ ಸ್ತ್ರೀಯರೂ ಕೂಡ ಜ್ಞಾನವನ್ನು ಉಪದೇಶಿಸಬಲ್ಲ ಮಹಾನುಭಾವಿಗಳೆಂದು ಹಾಗೂ ಬೌದ್ಧಿಕವಾಗಿಯೂ ಕೂಡ ಪುರುಷನಷ್ಟೆ ಸಮರ್ಥಳು ಎಂಬ ಸತ್ಯ ಈಕೆಯ ವಿಚಾರವಂತಿಕೆಯಿಂದ ತಿಳಿಯಲು ಸಾಧ್ಯವಾಗಿದೆ.

"ನುಡಿಯ ಹಂಗಿನ್ನೂ ನಿಮಗೆ ಹಿಂಗದು,

ನಡೆಯನೆಂತು ಪರರಿಗೆ ಹೇಳುವಿರಿ?

ಒಡಲ ಹಂಗಿನ ಸುಳುಹು ಬಿಡದು

ಎನ್ನೊಡನೆ ಮತ್ತೇತರ ಅನುಭವವಣ್ಣಾ?

ತಾನಾದಲ್ಲದೆ ಇದಿರಿಂಗೆ ಹೇಳಬಹುದೆ?

ಅರಿವ ತೋರಬಲ್ಲಡೆ ತನ್ನನರುಹದೆ ಅರಿವನು

ಕಾಣಾ ಎನ್ನ ಅಜಗಣ್ಣತಂದೆ

ಮುಕ್ತಾಯಕ್ಕನ ಮೇಲಿನ ವಚನದಲ್ಲಿ ನಡೆನುಡಿಗಳ ಹಂಗಿಗೆ ಒಳಗಾಗದ ಪ್ರಜ್ಞೆಯನ್ನು ಇತರ ವಚನಕಾರರಿಗಿಂತ ಭಿನ್ನವಾಗಿ ಈಕೆಯ ವಚನದಲ್ಲಿ ಕಾಣಬಹುದಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಶಬ್ದದ ಜೋಡಣೆ ಆಕೆಯ ಕಾವ್ಯಗುಣದಲ್ಲಿ ಪ್ರಧಾನವಾಗಿ ಕಾಣುತ್ತದೆ. ಅಲ್ಲದೆ ಬಳಸುವ ಪ್ರತಿಯೊಂದು ಪದವೂ ಆಳವಾದ ಅರ್ಥವನ್ನು ಹೊಂದಿದ್ದು ಮೇಲು ನೋಟಕ್ಕೆ ಸರಳವಾಗಿ ಕಂಡರೂ ಪದಗಳಲ್ಲಿ ಧ್ವನ್ಯಾರ್ಥ ವಿಶೇಷವಾಗಿ ಕಂಡುಬರುವ ವಿಚಾರವಂತಿಕೆಯ ಲಹರಿಯನ್ನು ಗಮನಿಸಬಹುದಾಗಿದೆ.

ಮುಕ್ತಾಯಕ್ಕನಂತಹ ವಚನಕಾರ್ತಿಯ ವಿಚಾರವಂತಿಕೆ ಇಂದಿನ ಪ್ರಸ್ತುತ ಸಮಾಜಕ್ಕೆ ಅತ್ಯಗತ್ಯವಾದದ್ದಾಗಿದೆ.

ಅಕ್ಕಮ್ಮ –> ನೆಂಬ ವಚನಕಾರ್ತಿ ಮೌಢ್ಯಾಚರಣೆಗಳನ್ನು ಕಂಡು ವಿಡಂಬಿಸಿದ್ದಾಳೆ.

"ಬತ್ತಲೆ ಇದ್ದವರೆಲ್ಲ ಕತ್ತೆಯ ಮಕ್ಕಳು,

ತಲೆ ಬೋಳಾದವರೆಲ್ಲ ಮುಂಡೆಯ ಮಕ್ಕಳು,

ತಲೆ ಜಡೆಗಟ್ಟಿದವರೆಲ್ಲ ಹೊಲೆಯರ ಸಂತಾನ,

ಆವ ಪ್ರಕಾರವಾದಡೇನು? ಅರಿವೆ ಮುಖ್ಯವಯ್ಯಾ

ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಲ್ಲಿ.

ಇಲ್ಲಿನ ವಚನದಲ್ಲಿ ಮೌಢ್ಯಾಚರಣೆಗಳನ್ನು ಕಂಡು ವಿಡಂಬಿಸಿದ್ದಾಳೆ. ಕೆಲವರು ಧರ್ಮದ ಹೆಸರಿನಲ್ಲಿ ಬತ್ತಲೆ ತಿರುಗುತ್ತಾರೆ. ಮತ್ತೆ ಕೆಲವರು ತಲೆ ಬೋಳಿಸಿಕೊಳ್ಳುತ್ತಾರೆ. ಇಂತಹವರನ್ನೆಲ್ಲ ಕತ್ತೆಯ ಮಕ್ಕಳು, ಮುಂಡೆಯ ಮಕ್ಕಳು ಎಂದು ಅಕ್ಕಮ್ಮ ತನ್ನ ವಿಚಾರವನ್ನು ಇಲ್ಲಿ ತಿಳಿಸುತ್ತಾಳೆ.

"ಅರಿವೇ ಮುಖ್ಯ ಆಚಾರವೇ ಪ್ರಾಣ" ಎಂಬ ಅಕ್ಕಮ್ಮನ ನುಡಿಯಲ್ಲಿ, ಮಹತ್ವದ ಅರ್ಥವಡಗಿದೆ. ವಚನಕಾರ್ತಿಯಾದ ಅಕ್ಕಮ್ಮ ತನ್ನ ವಚನಗಳಲ್ಲಿ ದಿಟ್ಟತನದಿಂದ ಮೌಢ್ಯಾಚರಣೆಗಳನ್ನು ಟೀಕಿಸಿರುವುದು ವಿಶಿಷ್ಟವಾಗಿದೆ. ಅಲ್ಲದೆ ವೇಷಧಾರಿಗಳನ್ನು ಕೂಡ ಕಟುವಾಗಿ ಟೀಕಿಸಿದ್ದಾಳೆ. ವೇಷವೆಲ್ಲಿರದು? ಸೂಳೆಯಲ್ಲಿ, ಡೊಂಬನಲ್ಲಿ ಭೈರೂಪನಲ್ಲಿರದೆ?

ಎಂದು ಪ್ರಶ್ನಿಸುತ್ತಾ, ವೇಷವ ತೋರಿ ಹೊಟ್ಟೆ ತುಂಬಿಸಿಕೊಳ್ಳುವವರನ್ನು ದಾಸಿ ವೇಶಿಯ ಮಕ್ಕಳೆಂದು ವಿಡಂಭಿಸಿರುವುದು ಆಕೆಯ ವಿಚಾರವಂತಿಕೆಯ ಚಿಂತನೆಯ ದ್ಯೋತಕವಾಗಿದೆ.

"ಭಕ್ತಿಯೆಂಬುದು ಎನಗೆ ಸ್ವಪ್ನವಾಗಿರದೆ, ಸತ್ಯವೆಂಬುದು ಬೆಚ್ಚಿ ಓಡುತ್ತಿದೆ. ಎನಗಿನ್ನು ಮುಕ್ತಿಯಾವುದು? ಎಂಬುದಾಗಿ ಅಕ್ಕಮ್ಮ ಈ ವಚನದಲ್ಲಿ ಆತ್ಮವಾಲೋಕನದ ಕಾರ್ಯವನ್ನು ಮಾಡಿಕೊಳ್ಳುತ್ತಾ "ಎನಗೊಂದು ಗೊತ್ತ ತೋರಾ" ಎಂದು ರಾಮೇಶ್ವರ ಲಿಂಗದಲ್ಲಿ ಕೇಳಿಕೊಂಡಿದ್ದಾಳೆ. ಈಕೆ ಮನಸ್ಸಿನಲ್ಲಿ ಚಂಚಲತೆ, ಶ್ರದ್ಧೆಯ ಕೊರತೆ, ತನ್ನಲ್ಲಿ ತನಗೆ ಅಪನಂಬಿಕೆ ಇರುವಾಗ ನಿಜವಾದ ಭಕ್ತಿ ಸಾಧ್ಯವಿಲ್ಲವೆಂದು ಅರಿತ ಈಕೆ ಆತ್ಮಾವಲೋಕನದ ಮೂಲಕ ಇಷ್ಟದೈವದ ಮೊರೆ ಹೋಗಿರುವುದು ಈ ವಚನದಲ್ಲಿ ಸ್ಪಷ್ಟವಾಗಿದೆ.

ಲಿಂಗಮ್ಮ –> ಹಡಪದಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮ ಸರಳ ಹಾಗೂ ನೇರ ಅಭಿವ್ಯಕ್ತಿ ಹಾಗೂ ಆಚರಣೆಯ ನೇರಮಾರ್ಗವನ್ನು ಅವಳು ತನ್ನ ವಚನಗಳಲ್ಲಿ ಸರಳವಾಗಿ ತೆರೆದು ತೋರಿಸಿದ್ದಾಳೆ.

"ತನ್ನ ತಾನರಿಯದೆ ಅನ್ಯರಿಗೆ ಬೋಧೆಯ ಹೇಳುವ

ಅಣ್ಣಗಳಿರಾ ನೀವು ಕೇಳಿರೊ

ಅವರ ಬಾಳುವೆ ಎಂತೆಂದಡೆ

ಕುರುಡ ಕನ್ನಡಿಯ ಹಿಡಿದಂತೆ

ತನ್ನ ಒಳಗೆ ಮರೆದು ಇದಿರಿಂಗೆ ಬೋಧೆಯ ಹೇಳಿ

ಉದರವ ಹೊರೆವ ಚದುರರೆಲ್ಲರೂ ಹಿರಿಯರೆ? [38]

ಈ ವಚನದಲ್ಲಿ ತನ್ನ ಆತ್ಮಾವಲೋಕನವನ್ನು ಕುರಿತ ನಮ್ಮನ್ನು ನಾವು ತಿಳಿಯುವ ಕ್ರಿಯೆ ನಮ್ಮೊಳಗಿದ್ದರೂ ಅದನ್ನು ತಿಳಿಯದಿದ್ದರೆ, ಸಾಧಿಸದಿದ್ದರೆ, ಅಂತರಂಗದ ಹುಡುಕಾಟವನ್ನು ಅರಿಯದಿದ್ದರೆ, "ಕುರುಡನ ಕೈಯಲ್ಲಿರುವ ಕನ್ನಡಿಯಂತೆ ವ್ಯರ್ಥವಾಗುತ್ತದೆ. ಬದುಕು ಎಂಬ ವಿಚಾರವನ್ನು ಹರಡಿದ್ದಾಳೆ. ಲಿಂಗಮ್ಮ ಲಿಂಗವ್ಯಸನಿಯಾಗುವುದೆ ಸಾಧನೆಯ ಗುರಿ ಎನ್ನುವ ಈಕೆ ಅತ್ಯಂತ ಸರಳವಾಗಿ ಈ ವಚನದಲ್ಲಿ ಅಂಗವೆಂದಡೆ ಲಿಂಗದೊಳಡಗಿತ್ತು. ಲಿಂಗವೆಂದಡೆ ಅಂಗದೊಳಡಗಿತ್ತು. ಅಂಗದೊಳಡಗಿದ ಲಿಂಗವನೆ ಕಂಗಳಲ್ಲಿ ಹೆರೆಹಿಂಗದೆ ನೋಡಿದಡೆ ಮಂಗಳದ ಮಹಾಬೆಳಗು ಕಾಣಿಸಿತು.

ಇಂತಪ್ಪ ಮಂಗಳದ ಮಹಾಬೆಳಗ ತೋರಿದ ಶರಣರಂಗೆ ಎರಗಿ

ಸುಖಿಯಾದೆನಯ್ಯಾ, ಅಪ್ಪಣ್ಣಪ್ರಿಯೆ ಚೆನ್ನಬಸವಣ್ಣ

ಈಕೆ ಲಿಂಗಾಂಗ ಸಾಮರಸ್ಯ, ಸಾಧನೆಗೆ ಹೇಳುವಷ್ಟು ಸರಳ ಮಾರ್ಗ ಮತ್ತೊಂದಿಲ್ಲ. ಬೇರೆಡೆ ತನ್ನ ಗಮನ ಹರಿಯದೆ, ಅಂದರೆ ಅತ್ತಿತ್ತ ಹರಿಯದ, ಏಕಾಗ್ರಚಿತ್ತದ ನೋಟವೊಂದೇ ಆ ಮಾರ್ಗ ಇದು ಲಿಂಗಮ್ಮ ಸಾಧಿಸಿದ ಸಾಧನೆಯ ಫಲವಾಗಿದೆ. ಈಕೆಯೂ ಯಾವುದೇ ಆಡಂಬರವಿಲ್ಲದ, ಅತ್ಯಂತ ಸರಳದಾರಿಯಿಂದ ಸ್ವಸಾಧನೆಯನ್ನು ಸಾಧಿಸಬಹುದು ಎಂದಿದ್ದಾಳೆ.

ಕಾಳವ್ವೆ :– ಉರಿಲಿಂಗ ಪೆದ್ದಿಯ ಪುಣ್ಯಸ್ತ್ರೀ ಕಾಳವ್ವೆ, ಪತಿಯಂತೆ ತಾನು ವಚನವನ್ನು ರಚಿಸಿರುವಳು. ಈಕೆಯ ವಚನಗಳು ಕಡಿಮೆಯಾಗಿದ್ದರೂ ಆಕೆ ಅವುಗಳಲ್ಲಿ ಮಾಡಿರುವ ವಿಚಾರ. ಚಿಂತನೆ ಎಂಬುವವು ತುಂಬಾ ವ್ರತವನ್ನು ಕುರಿತು ಜಾತಿಯನ್ನು ಕುರಿತು ಕಾಯಕವನ್ನು ಕುರಿತು ವಿಚಾರವನ್ನು ಮಾಡಿದ್ದಾಳೆ. ವಚನಗಳಲ್ಲಿ

"ಅಯ್ಯಾ, ಸೂಳೆಗೆ ಹುಟ್ಟಿದ ಮಕ್ಕಳಿಗೆ

ಕೊಟ್ಟವರೊಳು ಸಮ್ಮೇಳ ಕೊಡದವರೊಳು ಕ್ರೋಧ

ವ್ರತಹೀನರೊಳು ಮೇಳ, ವ್ರತನಾಯಕರೊಳು ಅಮೇಳ

ಸುಡು ಸುಡ ! ಅವರ ಕೂಡಿದಡೆ ಉರಿಲಿಂಗ ಪದ್ದಿಗಳ ರಸನೊಲ್ಲನವ್ವಾ [೬]

ತನಗೆ ಪ್ರಿಯವೆನ್ನಿಸಿದ್ದನ್ನು ಖಂಡತುಂಡವಾಗಿ ಹೇಳುವ ನೇರ ಗುಣ ಇವಳದು. ಈ ಮೇಲಿನ ವಚನ ಧನದಾಸೆಯೆ ಜಂಗಮವನ್ನು ಕುರಿತದ್ದಾಗಿದೆ, ಹಣದಾಸೆಗೆ ವ್ರತಹೀನರಲ್ಲಿ ಬೆರೆಯುವ ಜಂಗಮರನ್ನು ಸೂಳೆಗೆ ಹುಟ್ಟಿದ ಮಕ್ಕಳು ಎಂದು ಕರೆಯುವಲ್ಲಿ ಈಕೆಯಲ್ಲಿನ ವಿಚಾರವನ್ನು ಎಷ್ಟು ತೀಕ್ಷ್ಣವಾಗಿ ನಿಂದನೆಯ ಮೂಲಕ ಅಭಿವ್ಯಕ್ತಿಸುತ್ತ ವ್ರತದ ಬಗೆಗಿನ ನಿಷ್ಠೆ ಎಷ್ಟು ಆಳವಾದುದೆಂಬುದನ್ನು ಹಾಗೂ ವ್ರತವೆಂಬುದಕ್ಕೆ ನೀಡಿದ ಮಹತ್ವವನ್ನು ಆಕೆಯು ವಿಚಾರ ಮಾಡುವ ರೀತಿಯಿಂದ. ಆಕೆಯಲ್ಲಿನ ಗಟ್ಟಿತನದ ವ್ಯಕ್ತಿತ್ವವನ್ನು ಇಲ್ಲಿ ಗುರುತಿಸಲಾಗಿದೆ.

"ತೂಬರದ ಕೊಳ್ಳಿಯಂತೆ ಉರಿವಾತ ಭಕ್ತನೆ?

ಹಸಿದು ತಂದು ಮಾಡುವಾತ ಭಕ್ತನೆ?

ಭಕ್ತರ ಕುಲವನೆತ್ತಿ ನಿಂದಿಸುವಾತ ಭಕ್ತನೆ?

ನಿಂದೆಯಾ ಶಿವಭಕ್ತಾನಾಂ ಕೋಟಿ ಜನ್ಮನಿ ಸೂಕರಃ ।

ಸಪ್ತಜನ್ಮನಿ ಭವೇತ್ ಕುಷ್ಠೀ ದಾಸೀಗರ್ಭೇಷು ಜಾಯತೇ

ಎಂದುದಾಗಿ, ತನ್ನ ಪ್ರಾಣದ ಮೇಲೆ ಬಂದಡೂ ಬರಲಿ – ಇವರ ಬಿಡಬೇಕು.

ಬಿಡದಿರಲು ಉರಿಲಿಂಗ ಪೆದ್ದಿಗಳರಸನೊಲ್ಲನವ್ವಾ [೭]

ಇಲ್ಲಿ ಮನಸ್ಸಿನ ಒಳಗೊಂದು ಹೊರಗೊಂದು. ಕಾಳವ್ವೆಗೆ ಸೇರದ್ದು. ಒಮ್ಮೆ ವಂದಿಸಿ, ಒಂದೆಯೇ ನಿಂದಿಸುವಂತಹ ಇಬ್ಬಗೆತನದಲ್ಲಿ ವರ್ತಿಸುವ ಹುಸಿಭಕ್ತನನ್ನು ಮತ್ತು ಅಂತರಂಗ ಶುದ್ಧವಿಲ್ಲದ ಹುಸಿ ಜಂಗಮವು ಭಕ್ತನ ಮನೆಗೆ ಪೂಜೆಗೆ ಹೋದಾಗ ಅವನನ್ನು ಮೆಚ್ಚಿಸಬೇಕೆಂದು ಪೂಜೆಗೆ ಬೇಕಾದ ಹೂ ಹಣ್ಣು ಕಾಯಿ ಪತ್ರೆಗಳನ್ನು ಒದಗಿಸಿಕೊಡಲು ಓಡಾಡುವ ಹುಸಿಭಕ್ತನನ್ನು ಕುರಿತು ತನ್ನ ವಚನದಲ್ಲಿ ನಿಂದನೆಯನ್ನು ಮಾಡುತ್ತಾ ಇರುವರು. ನಾಯಕನರಕಕ್ಕೆ ಯೋಗ್ಯರು ಎಂಬ ವಿಚಾರವನ್ನು ತಿಳಿಸುವಳು.

ಅಸ್ಪೃಶ್ಯಳಾಗಿ ಬದುಕಿನ ನಾನಾ ರೀತಿಯ ನೋವುಂಡ ಕಾಳವ್ವೆಯು ತನ್ನ ವಚನಗಳಲ್ಲಿ ಅವುಗಳನ್ನು ಚಿಂತಿಸುತ್ತಾ ಸಮಾಜದಲ್ಲಿನ ಅರಾಜಕತೆಯನ್ನು ಕುರಿತು ವಿಡಂಬನೆಯನ್ನು ಮಾಡಿರುವುದನ್ನು ಅಲ್ಲದೆ, ಒಬ್ಬ ಸ್ತ್ರೀಯಲ್ಲಿ ಬೌದ್ಧಿಕ ವಿಚಾರವಂತಿಕೆಯ ಶ್ರೀಮಂತಿಕೆಯನ್ನು ಈಕೆಯಲ್ಲಿ ಕಾಣಬಹುದಾಗಿದೆ.

ಅಡಿ ಟಿಪ್ಪಣಿ

೧. ಶಿವಶರಣೆಯರ ವಚನ ಸಂಪುಟ – ಸಂ. ಡಾ. ವೀರಣ್ಣ ರಾಜೂರ – ಪುಟಸಂಖ್ಯೆ – ೨೨೩ – ೪, ವಚನ – ೬೮೮– (೯)ನೆಯ ವಚನ

೨. ಅದೇ ಸಂಪುಟ – ಪುಟಸಂಖ್ಯೆ = ೨೨೧, ವಚನ – ೬೮೧ (೨)ನೆಯ ವಚನ

೩. ಅದೇ ಸಂಪುಟ – ಪುಟಸಂಖ್ಯೆ = ೨೭೮–೨೭೯, ವಚನ – ೮೭೭ – (೨೭)ನೆಯ ವಚನ

೪. ಅದೇ ಸಂಪುಟ – ಪುಟಸಂಖ್ಯೆ = ೧೪೩, ವಚನ – ೪೪೬ (೯೨)ನೆಯ ವಚನ

೫. ಅದೇ ಸಂಪುಟ – ಪುಟಸಂಖ್ಯೆ = ೩೩೮, ವಚನ – ೧೦೪೨– (೫೮)ನೆಯ ವಚನ

೬. ಅದೇ ಸಂಪುಟ – ಪುಟಸಂಖ್ಯೆ = ೨೦೫, ವಚನ – ೬೪೯ (೨)ನೆಯ ವಚನ

೭. ಅದೇ ಸಂಪುಟ – ಪುಟಸಂಖ್ಯೆ = ೨೦೭, ವಚನ – ೬೫೫ (೮)ನೆಯ ವಚನ

ಅಧ್ಯಾಯ – ೬

ಕಿರು ವಚನಕಾರ್ತಿಯರ ವಚನಗಳ ಸಾಹಿತ್ಯಿಕ ಮೌಲ್ಯ

ವಚನಕಾರ್ತಿಯರು ಪ್ರತಿಭಟಿಸುವುದು ಪ್ರಶ್ನಿಸುವುದು ಇವುಗಳಿಗಿಂತ ಮುಖ್ಯವಾಗಿ ಮೌಲ್ಯಯುತವಾದ ಸಾಹಿತ್ಯ ರಚನೆಯಲ್ಲಿಯೂ ಕೂಡ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಉದಾ: ಹಡಪದಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮ ದಲಿತ ವಚನಕಾರ್ತಿ ಈಕೆ. ಕೆಳವರ್ಗದಿಂದ ಬಂದಿದ್ದರೂ ಕೂಡ ಈಕೆಯ ವಚನದಲ್ಲಿನ ಸಾಹಿತ್ಯಿಕ ಮೌಲ್ಯವೂ ಅವಿಸ್ಮರಣೀಯವಾಗಿವೆ. ಕನಿಷ್ಟ ಕುಲದಲ್ಲಿ ಹುಟ್ಟಿದರೂ, ಲಿಂಗಜಾತಿಯ ಸೂತಕಗಳನ್ನು ಕಳೆದುಕೊಂಡು, ಆಧ್ಯಾತ್ಮ ಸಾಧಕಳಾಗಿ ಬೆಳೆದ ವಿಚಾರಜೀವಿ. ಈಕೆಯನ್ನು "ಗುರುರಾಜ ಚಾರಿತ್ರದಲ್ಲಿ ಉಲ್ಲೇಖಿಸಿರುವ ಗುಣಸಹಸ್ರದಲ್ಲಿ "ಚಾರುಗುರು ಭಕ್ತೆ ಲಿಂಗಮ್ಮ" ಎಂದು ಲಿಂಗಮ್ಮನ ಗುರುಭಕ್ತಿಯನ್ನು ಸ್ತುತಿಸಿದ್ದಾನೆ.

ಬಸವಣ್ಣ ಚೆನ್ನಬಸವಣ್ಣ, ಪ್ರಭುದೇವ ಮುಂತಾದ ಶರಣರ ನಿಕಟ ಒಡನಾಟದಲ್ಲಿದ್ದು, ಕಲ್ಯಾಣ ಕೇಂದ್ರದಿಂದ ನಡೆದ ಶರಣ ಚಳವಳಿಯ ಆಶೋತ್ತರಗಳೊಂದಿಗೆ ತೀವ್ರವಾಗಿ ಸ್ಪಂದಿಸಲು ಸಾಧ್ಯವಾಗಿದೆ. ಮೊದಲ ಬಾರಿಗೆ ಬರೆಯಲು ತೊಡಗಿದ ಸ್ತ್ರೀಯೂ, ಕೆಳವರ್ಗದಿಂದ ಬಂದವರಾಗಿದ್ದಾರೆ. ಅವರಲ್ಲಿ ಮೂಡಿರುವ, ಗಹನವಾದ ವಿಚಾರ ಎಂಥವರನ್ನೂ ಕೂಡ ಆಶ್ಚರ್ಯಗೊಳಿಸುವಂತಾಗಿದೆ. ಲಿಂಗಮ್ಮನ ಅನೇಕ ವಚನಗಳು ಉತ್ಕೃಷ್ಟವಾದ ವಿಚಾರವನ್ನು ಒಳಗೊಂಡಿರುವಂತಹವು. ಉದಾ: "ನಾನೊಂದು ಹಾಳೂರಿಗೆ ಹೋಗುತ್ತಿರಲು, ಆ ಹಾಳೂರ ಹೊಕ್ಕಡೆ,

ಅಲ್ಲಿ ನಾಯಿಗಳು ಅಟ್ಟಿಕೊಂಡು ಬಂದವು.

ಹುಲಿ ಕರಡಿ ಅಡ್ಡಲಾದವು.

ಇವ ಕಂಡು ನಾ ಹೆದರಿಕೊಂಡು

ನನ್ನ ಕೈಗೊಂಡು ಕಲ್ಲ ತೆಕ್ಕೊಂದು ನೋಡುತ್ತ ಬರುತ್ತಿರಲು

ಆ ನಾಯಿಗಳು ಓಡಿಹೋದವು.

ಹುಲಿ ಕರಡಿಗಳು ಅಲ್ಲಿಯೇ ಬಯಲಾದವು.

ಆ ಊರು ನಿರ್ಮಲವಾಯಿತ್ತು.

ಆ ನಿರ್ಮಲವಾದ ಊರ ಹೊಕ್ಕು ನೋಡಲು

ಆ ನೋಡುವ ನೋಟವು, ಆ ಊರನಾಳುವ ಅರಸು,

ಆ ಊರು ಕೂಡಿ ಒಂದಾದವು

ಆ ಒಂದಾದುದನೆ ನೋಡಿ, ದ್ವಂದ್ವವನೆ ಹರಿದು,

ನಿಮ್ಮ ಸಂಗ ಸುಖದೊಳಗೋಲಾಡಿ ಸುಖಿಯಾದೆನಯ್ಯಾ

ಅಪ್ಪಣ್ಣ ಪ್ರಿಯ ಚೆನ್ನ ಬಸವಣ್ಣ [3]

ಈ ವಚನದಲ್ಲಿ ಸಾಂಕೇತಿಕತೆಯ ಮೂಲಕ ಇಷ್ಟಲಿಂಗಧಾರಣೆಯಿಂದ ವ್ಯಕ್ತಿತ್ವದಲ್ಲಾಗುವ ಬದಲಾವಣೆ. ಆನಂತರ ಬೆಳವಣಿಗೆಯನ್ನು ಕುರಿತು ಚಿತ್ರಿಸುವ ರೀತಿ ಅವಿಸ್ಮರಣೀಯವಾದುದಾಗಿದೆ. ಅಲ್ಲದೆ ಅಜ್ಞಾನಿ ಮನರಂಜನೆಗೆ ಸತ್ಯದ ದಾರಿಯನ್ನು ತಿಳಿಸಬೇಕೆನ್ನುವ ಉತ್ಕಟತೆಯೂ. ಆಕೆಯ ವಚನಗಳಲ್ಲಿರುವುದನ್ನು ಕಾಣಬಹುದಾಗಿದೆ.

"ಆಗದಾಗದು ಮೃತ್ಯುದ ಮನುಜರಿಗೆ ಶಿವಸುಖ

ಕಾಳು ವಿಷಯದಲ್ಲಿ ಬಿದ್ದು

ನುಡಿವುತ್ತ ಮರವೆ, ನೆಡೆವುತ್ತ ಮರವೆ,

ಮೆಟ್ಟುತ್ತ ಮರವೆ, ಕೇಳುತ್ತ ಮರವೆ, ನೋಡುತ್ತ ಮರವೆ,

ಇಂತು ಮರಹಿನೊಳಗಿದ್ದು

ಅರುಹ ಕಂಡೆಹೆವೆಂಬ ಅಣ್ಣಗಳಿರಾ, ನೀವು ಕೇಳಿರೋ

ನಮ್ಮ ಶರಣರ ನಡೆ ಎಂತೆಂದಡೆ ಐದು ಗುಣವನೆ ಅಳಿದು, ಐದು ಹಿಡಿದು,

ನುಡಿವುತ್ತ ಲಿಂಗವಾಗಿ ನುಡಿವರು, ನಡೆವುತ್ತ ಲಿಂಗವಾಗಿ ನಡೆವರು

ಮುಟ್ಟುತ್ತ ಲಿಂಗವಾಗಿ ಮುಟ್ಟುವರು, ಕೇಳುತ್ತ ಲಿಂಗವಾಗಿ ಕೇಳುವರು.

ನೋಡುತ್ತ ಲಿಂಗವಾಗಿ ನೋಡುವರು,

ಸರ್ವಾಂಗವೂ ಲಿಂಗವಾಗಿ ಅಂಗಲಿಂಗವೆಂಬ ಉಭಯವಳಿದು

ಮಂಗಳದ ಮಹಾ ಬೆಳಗಿನಲ್ಲಿ ಲಿಂಗವೇ ಗುಂಡಾಗಿದ್ದ ಕಾರಣ

ಅಪ್ಪಣ್ಣಪ್ರಿಯ ಚೆನ್ನಬಸವಣ್ಣ

ಹೀಗೆ ಈ ವಚನದಲ್ಲಿ ಲಿಂಗಮ್ಮ ಮಾನವನ ನಡೆವಳಿಕೆಯನ್ನು ಕುರಿತು ಹೇಳುವಾಗ ಪಂಚೇಂದ್ರಿಯಗಳಿಂದ ಉಂಟಾಗುವ ಭಾವನೆಯನ್ನು ಸಂಪೂರ್ಣವಾಗಿ ನಡೆಯುವಾಗ, ನುಡಿಯುವಾಗ, ಮುಟ್ಟುವಾಗ, ಕೇಳುವಾಗ ಲಿಂಗವಾಗಿಯೇ ಕೇಳುತ್ತಾ, ಲಿಂಗವಾಗಿಯೇ ನೋಡುವರು. ಒಟ್ಟಾರೆ ಸರ್ವಾಂಗ ಲಿಂಗವಾಗೇ ಆಗುವುದರ ಪರಿಣಾಮ ಅಂಗಲಿಂಗವೆಂಬ ಎರಡೂ ಬೇರೆ ಎಂಬ ಭೇದವನ್ನು ಮಂಗಳದ ಮಹಾ ಬೆಳಕಿನಲ್ಲಿ ನೋಡಿದಾಗ ನಮ್ಮ ಅಂತರಂಗ ಪರಿಶುದ್ಧವಾಗಿದ್ದಾಗ ಮಹಾಬೆಳಕಿನ ಲಿಂಗವೆ ಕಾಣುತ್ತದೆ ಎನ್ನವಳು. ಮನುಷ್ಯನ ದೇಹವೆಂಬ ಮರದಲ್ಲಿನ ಇತರ ಅಂಗವು ಒಂದಾಗುವುದು ಪರಿಶುದ್ಧತೆಯಿಂದ ಎನ್ನುವಳು.

ಅಡಿ ಟಿಪ್ಪಣಿ

೧. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ. ಡಾ. ಹೆಚ್.ಎಸ್. ಶ್ರೀಮತಿ, ಮುದ್ರಕರು – ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಶಿವಶರಣೆಯರ ವಚನಸಂಪುಟ, ಸಂ. ವೀರಣ್ಣ ರಾಜೂರ, ಪುಟಸಂಖ್ಯೆ – ೩೪೯, ವಚನ – ೧೦೬೨ (೭೯)ನೆಯ ವಚನ

ಅಧ್ಯಾಯ – ೭

ಸಮಾರೋಪ

ಧರ್ಮಸೂತ್ರಕಾರರಲ್ಲಿ ಪ್ರಮುಖನಾದ ಮನು ಸ್ತ್ರೀಯನ್ನು ಕುರಿತು 'ಸ್ತ್ರೀ'ಗೆ ಅವನ ದೃಷ್ಟಿಯಲ್ಲಿ ಯಾವುದೇ ರೀತಿಯ ಸ್ವಾತಂತ್ರ್ಯವಿಲ್ಲ. ಈತನ ಪ್ರಕಾರ "ಸ್ತ್ರೀ ಜನ್ಮ ಜನನಾರ್ಥಕ್ಕಾಗಿಯೇ ಸೃಷ್ಟಿಯಾದದ್ದು. ಅವಳ ಪ್ರಾಕೃತಿಕ ಲಕ್ಷಣಗಳನ್ನು ಗಮನದಲ್ಲಿಟ್ಟುಕೊಂಡು ಸದಾ ಕಾಲ ರಕ್ಷಣೆ ಬೇಕು ಎಂದು ಅಭಿಪ್ರಾಯಪಡುತ್ತಾ ಈ ದೃಷ್ಟಿಯಿಂದಲೇ **"ನ ಸ್ತ್ರೀ ಸ್ವಾತಂತ್ರ್ಯಮರ್ಹತಿ"** ಎಂದು ಹೇಳಿದ್ದಾನೆ. ಮುಂದುವರಿದು "ಮನೋವಿಕಾರಾದಿಗಳು ಸ್ತ್ರೀಯರಿಗೆ ಜನ್ಮತಃ ಬಂದವು" ಎಂದು ಭಾವಿಸುತ್ತಾನೆ.

ಹೆಣ್ಣನ್ನು ಕುರಿತು ಕೆಲವರು ನರಕದ ದಾರಿ, ವಿಷವೃಕ್ಷಕ್ಕೆ ಬೀಜ, ಅನಿಷ್ಟಗಳ ಗಣಿ, ಕೇಡಿನ ಜನ್ಮಭೂಮಿ, "ಸುವರ್ಣಲೇಪಿತ ಕತ್ತಿ" ಹೆಣ್ಣು ಎಂದಿರುವರು.

ಜೈನಧರ್ಮ ಮಹಾಪರಿಜ್ಞಾದೃಷ್ಟಿವಾದ, ಅರುಣೋಪವಾದ– ಇಂತಹ ಪವಿತ್ರ ಗ್ರಂಥಗಳನ್ನು ಸ್ತ್ರೀಯರು ಓದಬಾರದು ಎಂದು ವಿಧಿಸಿದೆ. ಸ್ತ್ರೀಯರು ಅಬಲೆಯರು, ಚಂಚಲೆಯರರಾದುದರಿಂದ ಇವುಗಳ ಅಭ್ಯಾಸ ಅವರಿಗೆ ಯೋಗ್ಯವಲ್ಲವೆಂದು ಅಭಿಪ್ರಾಯಪಡುತ್ತಾ ಭಿಕ್ಷುಗಳ ದೃಷ್ಟಿಯಲ್ಲಿ ಹೆಣ್ಣು "ವಿಷದ ಮುಳ್ಳು". ಕಿವಿ ಮೂಗು, ಕೈಕಾಲುಗಳಿಲ್ಲದ ಸ್ತ್ರೀಯರಿಂದಲೂ ಭಿಕ್ಷು ದೂರವಿರಬೇಕು ಎಂದು ಜೈನಧರ್ಮ ಆಜ್ಞಾಪಿಸಿದೆ.

ಸ್ತ್ರೀಯರು ಪುರುಷರನ್ನು ಅಧೋಗತಿಗೆ ಎಳೆಯುವ ಮಾಯೆ ಎನ್ನುತ್ತಾರೆ – ವೇದಾಂತಿಗಳು.

"ಗಂಡು ನೀತಿಬಾಹಿರ ವ್ಯಭಿಚಾರಿ ಮತ್ತು ದುರ್ಗುಣಿಯಾಗಿದ್ದರೂ ಹೆಂಡತಿ ಅವನನ್ನು ದೇವರೆಂದೇ ಭಾವಿಸಬೇಕು!" – ಮನು

"ಹೆಂಗಸಿಗೆ ಯಜ್ಞ , ವ್ರತ, ಉಪವಾಸಗಳಿಗೆ ಅಧಿಕಾರವಿಲ್ಲ" – ಮನು

"ಗಂಡ ಬದುಕಿದ್ದಾಗ ಉಪವಾಸ, ವ್ರತ ಮಾಡುವವಳು ತನ್ನ ಗಂಡನ ಆಯುಷ್ಯವನ್ನು ಕ್ಷೀಣಿಸುತ್ತಾಳೆ. ನರಕವೇ ಆಕೆಗೆ ಗತಿ" – ವಶಿಷ್ಠ

"ಹೆಂಡತಿಗೆ ಪತಿಗಿಂತ ಬೇರೆ ಸ್ವರ್ಗವಿಲ್ಲ." – ವಶಿಷ್ಠ

ಈ ರೀತಿಯಾಗಿ ಸ್ತ್ರೀಯನ್ನು ಕುರಿತಂತೆ ವಿವಿಧ ರೀತಿಯ ವ್ಯಾಖ್ಯಾನವನ್ನು ಕಾಣಬಹುದಾಗಿದೆ. ಹಿಂದೆ ಸ್ತ್ರೀಗೆ ಅಷ್ಟು ಪ್ರಾಮುಖ್ಯತೆಯನ್ನು ನೀಡದೆ ಇದ್ದ ಕಾಲವಾಗಿತ್ತು. ಅಂತಹ ಸಮಯದಲ್ಲಿ ಸ್ತ್ರೀಯೂ ಕೂಡ ತನ್ನ ಆಲೋಚನೆಗೆ ಪುಷ್ಟಿಯನ್ನು ನೀಡಿದ್ದು ೧೨ನೆಯ ಶತಮಾನದ ಶಿವಶರಣರ ಚಳವಳಿಯಿಂದಾಗಿ ಆಕೆ ಮಾತನಾಡುವಂತಾದಳು. ಅಲ್ಲದೆ ಬರೆಯಲು ತೊಡಗಿದಳು. ಅವಳ ಬರಹ ಅತ್ಯಂತ ಬಹುಮುಖ್ಯ ಗಂಭೀರ ವಿಷಯಗಳನ್ನು ಕುರಿತು ಆಕೆ ಅಂದಿನ ಸಮಾಜವನ್ನು ಪ್ರಶ್ನಿಸುವುದಾಗಿತ್ತು.

"ಸ್ತ್ರೀಯರು ತತ್ತ್ವಶಾಸ್ತ್ರವನ್ನು ಎಂದೂ ಅಭ್ಯಸಿಸಬಾರದು, ವೈವಾಹಿಕ ನಿಯಮಗಳನ್ನು ಪಾಲಿಸುವುದೇ ಅವರಿಗೆ ಹೆಚ್ಚಿನ ತತ್ತ್ವ" ಎಂಬುದಾಗಿ – ಯೂರೋಪಿನ ಧರ್ಮಬೋಧಕ ಹೇಳಿದರೆ ಇದಕ್ಕೆ ಪುಷ್ಟಿಯನ್ನು ನೀಡುವಂತೆ ಮಾರ್ಟಿನ್ ಲೂಥರ್ "ಸ್ತ್ರೀ ಬುದ್ಧಿವಂತಳಾಗುವುದಕ್ಕೆ ಬಯಸುವುದೇ ಮಹಾಪರಾಧ" ಎಂದು ಹೇಳಿರುವನು. ಮುಂದುವರಿದು ಸೈಂಟ್‌ಪಾಲ್ ಎಂಬ ವಿದ್ವಾಂಸ ಸ್ತ್ರೀಯನ್ನು ಕುರಿತು "ಸ್ತ್ರೀಯು ಪುರುಷನಿಗೆ ಏನನ್ನೂ ಕಲಿಸಲಾರಳು. ಜಗತ್ತಿನಲ್ಲಿ ಪಾಪವನ್ನು ತಂದವಳು ಹೆಣ್ಣು. ಆದ್ದರಿಂದ ಸ್ತ್ರೀಯರು ಕಠೋರ ನರಕಕ್ಕೆ ಹೋಗುತ್ತಾರೆ. ಅವರ ಮುಕ್ತಿಗೆ ಉಪಾಯವೇ ಇಲ್ಲ."

ಎಂಬುದಾಗಿ ಪ್ರಪಂಚದ ವಿವಿಧ ವಿದ್ವಾಂಸರು ಸ್ತ್ರೀಯ ಬಗ್ಗೆ ಅನುಕಂಪವನ್ನಾಗಲೀ ಕರುಣೆಯನ್ನಾಗಲೀ ತೋರದೆ, ಅಪ್ರಯೋಜಕಳು ಎಂಬುದಾಗಿ ಪ್ರತಿಬಿಂಬಿಸಿರುವುದನ್ನು ವಿದ್ವಾಂಸರ ಮಾತುಗಳಿಂದ ಸ್ತ್ರೀಯ ಸ್ಥಾನಮಾನವನ್ನು ಅರಿಯಬಹುದಾಗಿದೆ.

ಇದಕ್ಕೆ ಉತ್ತರದ ರೀತಿಯಲ್ಲಿ ಭಾರತೀಯ ಸಂಸ್ಕೃತಿಯಲ್ಲಿ "ಸ್ತ್ರೀ" ಕ್ಷಮಯಾಧರಿತ್ರೀ, ಶಾಂತ ಸ್ವಭಾವದವಳು, ತಾಳ್ಮೆ ಉಳ್ಳವಳು, ಎಲ್ಲವನ್ನೂ ಸಹಿಸಿಕೊಳ್ಳುವವಳು ಹೀಗೆ ಇಷ್ಟಕ್ಕೆ ಸೀಮಿತವಾಗದೆ ಆಕೆಯು ಪುರುಷರಂತೆ ಸಾಹಿತ್ಯರಚನೆಯಲ್ಲಿ ತೊಡಗಿ ಶಿವಾನುಭವವನ್ನು ಹೊಂದಬಲ್ಲಳು ಎಂಬುದನ್ನು ವಚನಕಾರ್ತಿಯರು ತಮ್ಮ ವಚನಗಳಿಂದ ತೋರಿಸಿಕೊಟ್ಟಿದ್ದಾರೆ.

೧೨ನೆಯ ಶತಮಾನದ ವಚನಕಾರರು ಸಾಮಾಜಿಕ ವ್ಯವಸ್ಥೆಯಲ್ಲಿ ಪರಿವರ್ತನೆ ತರಲು ಬಯಸಿದರು. ಮುಖ್ಯವಾಗಿ ಮಾನವೀಯತೆ, ಸಮಾನತೆಗಳ ನೆಲೆಗಟ್ಟಿನ ಮೇಲೆ ಸಮಾಜವನ್ನು ನಿರ್ಮಿಸುವುದೇ ವಚನ ಚಳವಳಿಯ ಉದ್ದೇಶವಾಗಿತ್ತು. ಈ ಮುಖೇನ ಅವರು ಅಸಮಾನತೆಯ ವ್ಯವಸ್ಥೆಯನ್ನು ಪ್ರತಿಭಟಿಸುವಲ್ಲಿ, ಲಿಂಗ, ವರ್ಣ, ವರ್ಗಗಳ ಭೇದವನ್ನು

ಅಳಿಸುವಲ್ಲಿ ಹಾಗೂ ವ್ಯಕ್ತಿಯ ವ್ಯಕ್ತಿತ್ವವನ್ನು ಬೆಳೆಸುವಲ್ಲಿ ವಚನ ಚಳವಳಿಯ ಕೊಡುಗೆ ಗಣನೀಯವಾದುದು.

ಅಂದಿನ ಸಮಾಜದಲ್ಲಿ ಅರ್ಥವನ್ನು ಕಳೆದುಕೊಂಡ ಪುರುಷಾರ್ಥಗಳಿಗೆ ವಚನ ಚಳವಳಿ ಹೊಸ ಅರ್ಥವನ್ನು ನೀಡಿತು. ಪ್ರಮುಖವಾಗಿ ಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆಗೆ ಆರ್ಥಿಕ ವ್ಯವಸ್ಥೆಯಲ್ಲಿರುವ ಅಸಮಾನತೆ, ಕಾಮ, ಬಯಕೆಯ ಪ್ರವೃತ್ತಿಯಲ್ಲಿರುವ ಅನೈತಿಕತೆ, ಮೋಕ್ಷದ ಬಗ್ಗೆ ಇರುವ ಮೌಢ್ಯತೆ – ಇವುಗಳನ್ನು ಹೋಗಲಾಡಿಸುವುದೇ ವಚನಕಾರ್ತಿಯರ ವಸ್ತುವಾಗಿದ್ದನ್ನು ಅಧ್ಯಯನದಿಂದ ತಿಳಿಯಲಾಗಿದೆ.

ಇಲ್ಲಿನ ಎಲ್ಲ ವಚನಕಾರ್ತಿಯರಲ್ಲೂ ಸಾಮಾಜಿಕ ಕಳಕಳಿ ಶೋಷಣೆ ವಿರುದ್ಧ ಪ್ರತಿಭಟನೆ ಮಾಡಿರುವಂತೆ ಕೆಲವೊಮ್ಮೆ ಪತಿಗಳಿಗೆ ಬೋಧನೆ ಮಾಡಿದ್ದು ಸಹ ನಾವು ವಚನಗಳಲ್ಲಿ ನೋಡಿದ್ದೇವೆ.

ಉದಾ: ಆಯ್ದಕ್ಕಿ ಲಕ್ಷಮ್ಮನ ವಚನ

"ಆಸೆಯೆಂಬುದು ಅರಸಿಂಗಲ್ಲದೆ

ಶಿವಶರಣಗುಂಟೆ ಅಯ್ಯಾ"

"ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ.

ಇದು ನಿಮ್ಮ ಮನವೋ ಬಸವಣ್ಣನ ಅನುಮಾನ ಚಿತ್ತವೋ?"

ಎಂಬಲ್ಲಿ ಆಕೆಯಲ್ಲಿನ ಆತ್ಮನಿಷ್ಠೆ, ಮತ್ತು ಧೈರ್ಯ ಹಾಗೂ ಸತ್ಯವನ್ನೇ ಬಿಂಬಿಸುವಿಕೆಯನ್ನು ಈಕೆಯಲ್ಲಿ ಕಾಣಬಹುದು. ಅಲ್ಲದೆ ಸತ್ಯಕ್ಕನಂತಹ ಪ್ರಾಮಾಣಿಕ ಸಾಧಕಿಯ ವಚನದಲ್ಲಿ ಅಂತರಂಗ ಶೋಧನೆ ಇರುವುದನ್ನು ಕಾಣಬಹುದು.

"ಅರ್ಚನೆ ಪೂಜನೆ ನೇಮವಲ್ಲ; ಮಂತ್ರ ತಂತ್ರ ನೇಮವಲ್ಲ

ಧೂಪ ದೀಪಾರತಿ ನೇಮವಲ್ಲ

ಪರಧನ ಪರಸ್ತ್ರೀ ಪರದೈವಗಳಿಗೆರಗದಿಪ್ಪುದೆ ನೇಮ

ಶಂಭು ಜಕ್ಕೇಶ್ವರನ್ನು ಇವು ಕಾಣಿರಣ್ಣ ನಿತ್ಯ ನೇಮ"

ಎನ್ನುವಲ್ಲಿ ದೇವರನ್ನೇ ಪ್ರಶ್ನಿಸುವ ಸತ್ಯಕ್ಕನ ಧೈರ್ಯವನ್ನು ಮೆಚ್ಚುವಂತಹುದು. ಅವಳ ಮನಸ್ಸಿನ ಮೊರೆಯನ್ನು ಕೆಲ ವಚನಗಳಲ್ಲಿ ಕಾಣಬಹುದು.

ಒಟ್ಟಾರೆಯಾಗಿ ವಚನಕಾರ್ತಿಯರಲ್ಲಿನ ಆತ್ಮವಿಶ್ವಾಸ, ಧೈರ್ಯ, ಅವರಲ್ಲಿನ ಭಾಷಾ ಬಳಕೆ, ನೇರನುಡಿ, ಚಿಂತನೆ, ಆಚಾರ, ಲೌಕಿಕ ಚರ್ಚೆ ಇಂತಹ ಅನೇಕ ಮೌಲ್ಯಯುತ ಸಾಹಿತ್ಯಕ ಚರ್ಚೆಯನ್ನು ಈ ಅಧ್ಯಯನದಿಂದ ಅರಿಯಬಹುದಾಗಿದೆ.

ದುಗ್ಗಳೆ :- ಯು ವಚನಕಾರ್ತಿಯರಲ್ಲಿ ಅತ್ಯಂತ ಪ್ರಮುಖಳು. ಈಕೆಯು ಯಾವುದೇ ರೀತಿಯ ಅಹಮಿಕೆಯನ್ನು ತೋರದೆ ತನ್ನ ವಚನಗಳಾದ ಎರಡರಲ್ಲಿಯೂ ಗುರುಲಿಂಗ, ಜಂಗಮ, ಭಕ್ತಿ, ಶರಣರ ಸ್ತುತಿ ಕಂಡುಬಂದಿರುವುದು.

"ಭಕ್ತನಾದೊಡೆ ಬಸವಣ್ಣನಂತಾಗಬೇಕು

ಜಂಗಮವಾದರೆ ಪ್ರಭುದೇವರಂತಾಗಬೇಕು

ಯೋಗಿಯಾದೊಡೆ ಸಿದ್ಧರಾಮಯ್ಯನಂತಾಗಬೇಕು

ಭೋಗಿಯಾದೊಡೆ ಚೆನ್ನಬಸವನಂತಾಗಬೇಕು

ಐಕ್ಯನಾದೊಡೆ ಅಜಗಣ್ಣನಂತಾಗಬೇಕು

ಇಂತಿವರ ಕಾರುಣ್ಯ ಪ್ರಸಾದವ ಕೊಂಡು

ಸತ್ತಹಾಗಿರಬೇಕಲ್ಲದೆ ತತ್ವದ ಮಾತು ಎನಗೇಕಯ್ಯ

ದಾಸಯ್ಯ ಪ್ರಿಯ ರಾಮನಾಥ" [೨]

ಇಲ್ಲಿ ಈಕೆಯು ಯಾವ ರೀತಿಯ ವ್ಯಕ್ತಿತ್ವವನ್ನು ಹೊಂದಿರಬೇಕು ಎನ್ನುವುದಕ್ಕೆ ತನ್ನ ಒಂದು ವಚನದಲ್ಲಿ ಇವಳು ಭಕ್ತನಾದರೆ ಬಸವಣ್ಣನಂತೆಯೂ, ಎಲ್ಲಿಯೂ ನೆಲೆ ನಿಲ್ಲ ಜಂಗಮನಾದರೆ, ಪ್ರಭುದೇವರಂತೆಯೂ, ಯೋಗಿಯಾದರೆ ಸಿದ್ಧರಾಮನಂತೆ, ಐಕ್ಯನಾದರೆ ಗುಪ್ತಭಕ್ತನಾದ ಅಜಗಣ್ಣನಂತಾಗಬೇಕು ಈ ರೀತಿಯ ಮಹತ್ವವನ್ನು ಇವರಿಂದ ಪಡೆದು ಜೀವವಿಲ್ಲದ ದೇಹದಂತೆ ಸತ್ತ ಹಾಗಿರಬೇಕು ಅಂದರೆ ಇಲ್ಲಿ ಮನುಷ್ಯನ ನಡೆವಳಿಕೆಯನ್ನು ಕುರಿತು ಪ್ರಸಿದ್ಧ ವಚನಕಾರರ ವ್ಯಕ್ತಿತ್ವದ ಸಾಕ್ಷಿಯಾಗಿ ತನ್ನ ವಚನದಲ್ಲಿ ತತ್ತ್ವದ ಮಾತಿಗೂ ತನಗೂ ಯಾವುದೇ ರೀತಿಯ

ಸಂಬಂಧವಿಲ್ಲ ಎಂಬುದನ್ನು ಹೇಳುವ ಮೂಲಕ ದುಗ್ಗಳೆಯ ವಿಚಾರ ಪರವಾದ ಬೌದ್ಧಿಕ ನಿಲುವನ್ನು ಈ ವಚನದಲ್ಲಿ ಗಮನಿಸುತ್ತಾ ಆಕೆಯ ಘನ ವ್ಯಕ್ತಿತ್ವವನ್ನು ಅರಿಯಬಹುದಾಗಿದೆ.

ಮುಕ್ತಾಯಕ್ಕನ ಹೊರತುಪಡಿಸಿ ವಚನಕಾರ್ತಿಯರನ್ನು ಕುರಿತು ಮಾತನಾಡುವ ಹಾಗಿಲ್ಲ. ಏಕೆಂದರೆ ತಾತ್ತ್ವಿಕ ಪರಿಜ್ಞಾನ, ಸೈದ್ಧಾಂತಿಕ ವಿಶ್ಲೇಷಣೆ, ಸ್ವತಂತ್ರ ಮನೋಧರ್ಮವನ್ನು ಹೊಂದಿರುವ ಈಕೆಯು ಹದವರಿತು ಮಾತನಾಡುವ ಕಲೆಯನ್ನು ತಿಳಿದವಳಾಗಿದ್ದಾಳೆ. ಭಾಷೆಯನ್ನು ದುಡಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದ್ದಾಳೆ.

"ಗುರುವಚನದಿಂದಲ್ಲದೆ ಲಿಂಗವನ್ನರಿಯಬಾರದು
ಗುರುವಚನದಿಂದಲ್ಲದೆ ಜಂಗಮವನ್ನರಿಯಬಾರದು
ಗುರುವಚನದಿಂದಲ್ಲದೆ ಪ್ರಸಾದವನರಿಯಬಾರದು
ಗುರುವಚನದಿಂದಲ್ಲದೆ ತನ್ನ ತಾನರಿಯಬಾರದು
ಹಿಂದಣ ಜನ್ಮದಲ್ಲಿ ಲಿಂಗವ ಪೂಜಿಸಿ, ಇಂದು ಜ್ಞಾನೋದಯವಾದೊಡೆ
ಗುರುವಿಲ್ಲದ ಮುನ್ನ ಆಯಿತೆನ್ನಬಹುದೆ?
ತನ್ನಲ್ಲಿ ತಾನು ಸನ್ನಿಹಿತನಾದೆಹೆನೆಂದಡೆ ಗುರುವಿಲ್ಲದೆ ಆಗದು ಕೇಳಾ
ಎನ್ನ ಅಜಗಣ್ಣನೆಂಬ ಗುರುವಿಲ್ಲದೆ
ಆ ರೂಢಿಯ ಕೂಟ ಸಮನಿಸದು ಕೇಳಾ" [೩]

ಇಲ್ಲಿ ಮುಖ್ಯವಾಗಿ ಈಕೆಯು ಗುರುವಿನ ಅಪ್ಪಣೆಯಿಲ್ಲದೆ ಯಾವುದೇ ಒಂದು ತೀರ್ಮಾನ ನಿಲುವು ಹಾಗೂ ತನ್ನನ್ನು ತಾನು ಕೂಡಾ ತಿಳಿಯಬಾರದಾಗಿದೆ. ಒಂದು ವೇಳೆ ಹಿಂದಿನ ಜನ್ಮದಲ್ಲಿ ಲಿಂಗವನ್ನು (ಶಿವನನ್ನು) ಪೂಜಿಸಿ, ಅದು ಇಂದು ಜ್ಞಾನೋದಯವಾದರೂ ಕೂಡಾ ಗುರುವಿನ ಸಹಾಯವಿಲ್ಲದೆ ಗುರುವಿನ ಸಹಕಾರವಿಲ್ಲದ ತಿಳಿವಳಿಕೆ ಬಂದಿತು ಎನ್ನಬಹುದೇ? ಎಂಬುದಾಗಿ ಇಲ್ಲಿ ಮುಕ್ತಾಯಕ್ಕ ವಿವಿಧ ರೀತಿಯ ಪ್ರಶ್ನೆಗಳನ್ನು ಹಾಕುವ ಮೂಲಕ ಗುರುವಿಲ್ಲದೆ ಯಾವುದೂ ಸಾಧ್ಯವಿಲ್ಲ ಗುರುವಿನಿಂದ ಶಿಷ್ಯನ ಬದುಕು ಬೆಳಕಾಗುವಂತೆ ಅಜಗಣ್ಣ ಮುಕ್ತಾಯಕ್ಕನಿಗೆ ಸೋದರ ಮಾತ್ರವಾಗದೇ ಅದನ್ನು ಮೀರಿದ ಗುರುವೂ ಕೂಡ ಆಗಿದ್ದಾನೆ ಎಂಬ ವಿಚಾರವನ್ನು ಆಕೆಯ ವಚನದಿಂದ ಅರಿಯಬಹುದಾಗಿದೆ. ಬಹಳ ಹಿಂದೆಯೇ ಗುರುವಿಗೆ

ಯಾವ ರೀತಿಯ ಪೂಜ್ಯ ಸ್ಥಾನವನ್ನು ನೀಡಿದ್ದರೂ ಅಲ್ಲದೇ ಪ್ರತಿಯೊಂದು ತೀರ್ಮಾನಕ್ಕೂ, ಹೇಳಿಕೆಗೂ ಕೂಡ "ಗುರುವೇ" ಕಾರಣ ಎಂಬುದನ್ನು ತನ್ನ ವಚನದಲ್ಲಿ ಆಕೆಯು ಗುರುವಿನ ವ್ಯಕ್ತಿತ್ವವನ್ನು ಮೀರಿಸುವ ಪರಿ ಎಂತಹುದು ಎಂಬುದು ಗಮನಾರ್ಹವಾಗಿದೆ.

ಒಟ್ಟಾರೆಯಾಗಿ, ಮುಕ್ತಾಯಕ್ಕ ಪ್ರತಿಯೊಂದು ವಿಚಾರವನ್ನೂ ಕೂಡ ಚಿಂತನೆಯ ಮೂಲಕ ಒಪ್ಪಿಕೊಳ್ಳುವ ಗುಣ ಹೊಂದಿದ್ದಂತಹ ಆಕಾಶದಲ್ಲಿ ಹೊಳೆಯುವ ನಕ್ಷತ್ರದಂತೆ ವಚನಕಾರ್ತಿಯರಲ್ಲಿಯೇ ಮಿನುಗುತಾರೆಯಂತೆ ವಿಶಿಷ್ಟವಾದ ವ್ಯಕ್ತಿತ್ವವನ್ನು ಹೊಂದಿದ್ದ ಈಕೆಯು ಇಂದಿಗೂ ಕೂಡ ಯಾವುದೇ ರೀತಿಯ ಕಾಂತಿ ಕಳೆದುಕೊಳ್ಳದೇ, ನಕ್ಷತ್ರವಾಗಿ ಮಿನುಗುತ್ತಿರುವುದನ್ನು ನೋಡಬಹುದಾಗಿದೆ.

ಮೋಳಿಗೆ ಮಹಾದೇವಿ : – ಮೂಲತಃ ಕಾಶ್ಮೀರದ ರಾಜನ ಮಡದಿಯಾಗಿದ್ದ ಗಂಗಾದೇವಿಯೇ ಆನಂತರದಲ್ಲಿ ಮಹಾದೇವಿಯಾದವಳು. ಕಾಯಕನಿಷ್ಠೆ, ತತ್ತ್ವಜ್ಞಾನ, ಸ್ವಂತಿಕೆ ಇನ್ನೂ ಅನೇಕ ಗುಣವನ್ನು ಈಕೆಯಲ್ಲಿ ಗುರುತಿಸಬಹುದಾಗಿದೆ.

"ಕಾಲಿದ್ದಂತೆ ತಲೆ ನಡೆದಿದುಂಟೆ ಅಯ್ಯಾ?
ಕಣ್ಣಿದ್ದಂತೆ ಕರ್ಣ ನೋಡಿದುದುಂಟೆ ಅಯ್ಯಾ?
ಬಾಯಿದ್ದಂತೆ ನಾಸಿಕ ಉಂಡುದ್ದಂಟೆ ಅಯ್ಯಾ?
ತಾಯಿಲ್ಲದೆ ಮಕ್ಕಳು ಬಂದ ತೆರನ ಹೇಳಯ್ಯಾ?
ನಿಮ್ಮ ಸೇವೆಯ ತೊತ್ತಿನ ಭಾವವ ಕೇಳಲೇತಕ್ಕೆ?
ಪಟದೊಳಗಣ ಬಾಲಸರಕ್ಕೆ ಪ್ರತಿಸೂತ್ರ ನೇಣುಂಟೆ?
ನಿಮ್ಮಲ್ಲಿಯೇ ಎನ್ನ ಭಾವಲೇಪ?
ಎನ್ನಯ್ಯಾ ಪ್ರಿಯಾ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನಲ್ಲಿಯೇ" [೪]

ಈ ಮೇಲಿನ ವಚನದಲ್ಲಿ ತಾಯಿಯಿಲ್ಲದೇ ಮಕ್ಕಳು ಬರಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಕಾಲಿದ್ದಂತೆ ನಮ್ಮ ತಲೆ ನಡೆಯುವುದು ಎಂದು ಪ್ರಶ್ನಿಸುವ ಈಕೆಯು ಮುಂದೆ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ನಿರ್ವಹಿಸುವ ಭಾವವ ಕೇಳಲೇತಕ್ಕೆ? ಚಿತ್ರದಲ್ಲಿರುವ ಚಿಕ್ಕ ಸರಕ್ಕೆ

ಪ್ರತಿಸೂತ್ರ ಮತ್ತೊಂದಿದೆಯೆ? ಮನುಷ್ಯನ ನಿಖರತೆ ಇಲ್ಲದ, ನಿರ್ದಿಷ್ಟತೆಯನ್ನು ಒಳಗೊಳ್ಳದೇ ಪೊಳ್ಳುತನದಿಂದ ಕೂಡಿರುವ ಭಾವನೆಯವರನ್ನು ಪ್ರಶ್ನಿಸುವಂತೆ ಈ ವಚನದಲ್ಲಿನ ಅಂಶವಾಗಿದೆ.

ಹೀಗೆ ಇನ್ನೂ ಅನೇಕ ವಚನಕಾರ್ತಿಯರು ತಮ್ಮ ಬದುಕಿನಲ್ಲಿನ ಅನುಭಾವವನ್ನು ವಚನಗಳ ಮೂಲಕ ಅಭಿವ್ಯಕ್ತಿಸಿರುವುದನ್ನು ಕಾಣಬಹುದಾಗಿದೆ. ಕೆಳವರ್ಗದಿಂದ ಬಂದಂತಹ ಅನೇಕ ವಚನಕಾರ್ತಿಯರು ವಚನವನ್ನು ರಚಿಸಿರುವುದು ಹಾಗೂ ಕೆಲವು ವಚನಕಾರ್ತಿಯರು ವಚನಕಾರರಂತೆ ಅನುಭಾವಿ ನೆಲೆಯಲ್ಲಿ ಮತ್ತು ಬೆಡಗಿನ ವಚನಗಳನ್ನು ರಚಿಸಿರುವುದನ್ನು ಇಲ್ಲಿ ಕಾಣಬಹುದಾಗಿದೆ.

ಲಿಂಗಮ್ಮನಂತಹ ವಚನಕಾರ್ತಿಯು ಜಾತಿಯಿಂದ ಕೆಳಜಾತಿಯಾದರೂ ಕೂಡ ಆಕೆಯ ಬೌದ್ಧಿಕ ಮಟ್ಟ ಕೆಳಮಟ್ಟದ್ದಾಗಿರದೆ ಅದು ಶಿಖರದಂತಿರುವುದು ವಚನಕಾರ್ತಿಯರ ವಚನಗಳನ್ನು ಅಧ್ಯಯನ ಮಾಡಿದಾಗ ಅತ್ಯಂತ ಉತ್ಕೃಷ್ಟವಾದ ಸಾಲಿನಲ್ಲಿ ಲಿಂಗಮ್ಮನ ವಚನವೂ ನಿಲ್ಲುವುದು. ಇಂತಹ ಮಹತ್ವದ ಸಾಹಿತ್ಯವನ್ನು ನೀಡಿದಂತಹ ವಚನಕಾರ್ತಿಯರಲ್ಲಿನ ವ್ಯಕ್ತಿತ್ವ, ಅವರಲ್ಲಿನ ನೈತಿಕ ಸ್ಥೈರ್ಯ, ಅವರ ಧೋರಣೆ, ನೇರ ನುಡಿ, ಆಚಾರ-ವಿಚಾರ, ತಾರ್ಕಿಕ ಚರ್ಚೆಯಂತಹ ಇನ್ನೂ ಅನೇಕ ವಿಧದ ಮೌಲ್ಯಯುತವಾದ ಸಾಹಿತ್ಯಕ ಚರ್ಚೆಯನ್ನು ಈ ಅಧ್ಯಯನದಿಂದ ಸ್ಪಷ್ಟಪಡಿಸಬಹುದು.

ಅಡಿ ಟಿಪ್ಪಣಿ

೧. ಶಿವಶರಣೆಯರ ವಚನ ಸಂಪುಟ, ಸಂಪಾದಕ – ಡಾ. ವೀರಣ್ಣ ರಾಜೂರ, ಪುಟಸಂಖ್ಯೆ – ೨೦೦, ವಚನ – ೬೩೦ (೮)ನೆಯ ವಚನ

೨. ಅದೇ ಸಂಪುಟ, ಪುಟಸಂಖ್ಯೆ – ೨೨೯, ವಚನ – ೭೦೧ (೨)ನೆಯ ವಚನ

೩. ಅದೇ ಸಂಪುಟ, ಪುಟಸಂಖ್ಯೆ – ೨೭೫, ವಚನ – ೮೬೫ (೧೫)ನೆಯ ವಚನ

೪. ಅದೇ ಸಂಪುಟ, ಪುಟಸಂಖ್ಯೆ – ೨೯೦, ವಚನ – ೯೧೨ (೨೫)ನೆ ವಚನ

ಗ್ರಂಥ ಋಣ

೧. ಶಿವಶರಣೆಯರ ವಚನ ಸಂಪುಟ, ಸಂಪಾದಕ – ಡಾ. ವೀರಣ್ಣ ರಾಜೂರ, ಪ್ರಕಾಶನ – ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩

೨. ವಚನಧರ್ಮಸಾರ, ಪ್ರಧಾನ ಸಂಪಾದಕ – ಡಾ. ಎ ಆರ್ ಕೃಷ್ಣಶಾಸ್ತ್ರೀ ೧೯೪೪, ಲೇಖಕರು – ಎಂ ಆರ್ ಶ್ರೀನಿವಾಸಮೂತಿಪ್ರಕಾಶಕನ : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

೩. ವಚನ ಸಾಹಿತ್ಯ ಒಂದು ಇಣುಕುನೋಟ ಲೇಖಕರು – ಪ್ರೊ. ಜಿ ಎಸ್ ಸಿದ್ದಲಿಂಗಯ್ಯ, ಪ್ರಕಾಶನ : ಬಸವ ಸಮಿತಿ–೧೯೮೯

೪. ವಚನಕಾರರು, ವ್ಯಕ್ತಿ ಹಾಗೂ ಅಭಿವ್ಯಕ್ತಿ – ಸಂಪಾದಕರು– ಡಾ. ಸಿ.ಯು. ಮಂಜುನಾಥ, ಜಿ ಸಿ ಮಾರಪ್ಪ, ಪ್ರಕಾಶನ– ಶ್ರೀ ಸರ್ಪಭೂಷಣ ಶಿವಯೋಗೀಶ್ವರಮಠ – ೧೯೯೩

೫. ವಚನಕಾರರ ದೃಷ್ಟಿಯಲ್ಲಿ ಸ್ತ್ರೀ – ಲೇಖಕಿ - ಡಾ. ಶೈಲಜಾ ಉಡುಚಣ, ಪ್ರಕಾಶನ : ಗ್ರನೋಬಲ್ಸ ಪ್ರಕಾಶನ, ಕಲಬುರ್ಗಿ – ೧೯೯೧

೬. ವಚನಗಳಲ್ಲಿ ವ್ಯಕ್ತಿತ್ವ ವಿಕಾಸ – ಸಂಪಾದಕ– ಡಾ. ಬಸವರಾಜ ಸಬರದ, ಪ್ರಕಾಶನ : ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು – ೨೦೦೩

೭. ವಚನ ಸಾಹಿತ್ಯದ ಹೊಸ ಪರಿಕಲ್ಪನೆ – ಸಂಪಾದಕ– ರಘುಶಂಖ ಭಾತಂಬ್ರಾ, ಪ್ರಕಾಶನ : ಕನ್ನಡ ಸಾಹಿತ್ಯ ಪರಿಷತ್ತು, –೨೦೦೪

೮. ಬಸವಚೇತನ – ಸಂಪಾದಕ – ಶರಣ ಟಿ ಸಿ ಗುಬ್ಬಿಹುಚ್ಚಪ್ಪ, ಪ್ರಕಾಶನ : ಶರಣ ಪ್ರಕಾಶನ. – ೧೯೮೬

೯. ವಚನ ಸಾಹಿತ್ಯ ಒಂದು ಪರಿಚಯ : ಲೇಖಕರು – ಡಾ. ಪಿ ವಿ ನಾರಾಯಣ, ಪ್ರಕಾಶನ : ಅಖಿಲಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು – ೧೯೯೭

೧೦. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ– ಸಂಪಾದಕ – ಡಾ. ಎಸ್ ಶ್ರೀಮತಿ, ಪ್ರಕಾಶನ : ಕನ್ನಡ ವಿಶ್ವವಿದ್ಯಾಲಯ, ಹಂಪಿ –೨೦೦೬

೧೧. ವಚನ ವಾಹಿನಿ ಲೇಖಕರು ~~ಸಂಪಾದಕ~~ – ಡಾ. ವಿಜಯಶ್ರೀ ಸಬರದ, ಪ್ರಕಾಶನ : ಪಲ್ಲವಿ ಪ್ರಕಾಶನ – ೨೦೦೧

೧೨. ವಚನ ಸಮಗ್ರ – ಲೇಖಕರು ~~ಸಂಪಾದಕ~~ –ಡಾ. ಪಿ.ವಿ. ನಾರಾಯಣ. ಪ್ರಕಾಶನ : ವಸಂತ ಪ್ರಕಾಶನ – ೨೦೦೫

೧೩. ವಚನ ವಿನ್ಯಾಸ, ಲೇಖಕರು ~~ಸಂಪಾದಕ~~ – ಗಿರಡ್ಡಿಗೋವಿಂದರಾಜ, ಪ್ರಕಾಶನ : ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ – ೧೯೯೭

೧೪. ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ, ಲೇಖಕರು ~~ಸಂಪಾದಕ~~ –ಶಾಂತಲಿಂಗ ದೇಸಿಕ –

೧೫. ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ, ಲೇಖಕರು – ಡಾ. ಪಿ.ವಿ. ನಾರಾಯಣ – ೧೯೮೩, ಪ್ರಕಾಶನ : ವಸಂತ ಪ್ರಕಾಶನ

೧೬. ವಚನ ಸಾಹಿತ್ಯ ನಡೆದು ಬಂದ ದಾರಿ, ಸಂಪಾದಕ – ಡಾ. ಎಸ್. ಆರ್. ಗುಂಜಾಳ, ಶ್ರೀ ಶರಣಪ್ಪ ಗುಡದಿನ್ನಿ, ಪ್ರಕಾಶನ : ಬಸವ ಸಮಿತಿ – ೨೦೦೮

೧೭. ವಚನ ಸಾಹಿತ್ಯ, ಲೇಖಕರು – ಡಾ. ಎಂ. ಚಿದಾನಂದ ಮೂರ್ತಿ, ಪ್ರಕಾಶನ : ಸಪ್ನಾ ಬುಕ್‌ಹೌಸ್, ೧೯೭೫